

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46


ಆಗಸ್ಟ್ 8 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 113 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಸ್ಟೇರಿಂಗ್ ಲಾಕ್ ಆಗಿ ಚಾಮುಂಡಿಬೆಟ್ಟದಲ್ಲಿ ಉರುಳಿದ ಬಸ್

• ಅದೃಷ್ಟವಶಾತ್ ದ್ವಿಪಥದಲ್ಲಿ ಈ ದುರಂತ • ಪಕ್ಕದ ಪಥಕ್ಕೆ ಉರುಳಿ ಬಿದ್ದಿದ್ದರಿಂದ 10 ಮಂದಿ ಪಾರು • ಏಕಪಥದಲ್ಲಿ ಆಗಿದ್ದರೆ ಭಾರಿ ಅನಾಹುತವೇ ನಡೆದು ಹೋಗುತ್ತಿತ್ತು • ಆರು ತಿಂಗಳ ಹಿಂದಷ್ಟೇ ಖರೀದಿಸಲಾದ ಬಸ್‌ನ ಸುಸ್ಥಿತಿ ಬಗ್ಗೆ ಅನುಮಾನ

ಮೈಸೂರು, ಆ.7(ಎಂಟಿವೈ)– ಕೆಎಸ್‌ಆರ್‌ಟಿಸಿಯಿಂದ ಇತ್ತೀಚೆಗೆ ಖರೀದಿಸಿರುವ ಹೊಸ ಬಸ್‌ಗಳ ತಾಂತ್ರಿಕತೆಯ ಬಗ್ಗೆ ಅನುಮಾನ ಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆಷಾಢ ಶುಕ್ರವಾರದ ವೇಳೆ ಚಾಮುಂಡಿಬೆಟ್ಟಕ್ಕೆ ತೆರಳುತ್ತಿದ್ದ ಹೊಸ ಎಲೆಕ್ಟ್ರಿಕಲ್ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಆತಂಕ ಸೃಷ್ಟಿಯಾಗಿತ್ತು. ಈ ಘಟನೆ ಮರೆಯುವ ಮುನ್ನವೇ ಕಳೆದ 6 ತಿಂಗಳ ಹಿಂದೆಯಷ್ಟೇ ಖರೀದಿಸಿದ್ದ ಬಸ್ ಇಂದು (ಗುರುವಾರ) ಚಾಮುಂಡಿಬೆಟ್ಟದಲ್ಲಿ ಸ್ಟೇರಿಂಗ್ ಲಾಕ್ ಆಗಿ ಅಪಘಾತಕ್ಕೀಡಾಗಿದೆ. ಅದೃಷ್ಟವಶಾತ್ ಈ ಎರಡೂ ಪ್ರಕರಣಗಳಲ್ಲೂ ಪ್ರಾಣ ಹಾನಿ ಸಂಭವಿಸಿಲ್ಲ

ಮೈಸೂರು ನಗರ ಬಸ್ ನಿಲ್ದಾಣದಿಂದ ಇಂದು ಸಂಜೆ 4 ಗಂಟೆಗೆ ಚಾಮುಂಡಿಬೆಟ್ಟಕ್ಕೆ ತೆರಳುತ್ತಿದ್ದ ಕುವೆಂಪುನಗರ ಬಸ್ ಡಿಪೋಗೆ ಸೇರಿದ ಮಾರ್ಗ ಸಂಖ್ಯೆ 201ರ ಬಸ್ (ಕೆಎ 09 ಎಫ್ 5584) ಬೆಟ್ಟದ ವ್ಯೂ ಪಾಯಿಂಟ್ ಬಳಿ ತೆರಳುತ್ತಿದ್ದಾಗ ಬಸ್‌ನ ಸ್ಟೇರಿಂಗ್ ಲಾಕ್ ಆದ ಪರಿಣಾಮ ಸಂಜೆ 4.30ರ ವೇಳೆಗೆ ತಡೆಗೋಡೆಗೆ ಡಿಕ್ಕಿ ಹೊಡೆದು 5 ಅಡಿ ಆಳದ ಪಕ್ಕದ ಪಥಕ್ಕೆ (ರಸ್ತೆಗೆ) ಉರುಳಿ ಬಿದ್ದಿದೆ.

ಈ ಸಂದರ್ಭದಲ್ಲಿ ಬಸ್‌ನಲ್ಲಿ ಡ್ರೈವರ್, ಕಂಡಕ್ಟರ್ ಹಾಗೂ 8 ಮಂದಿ ಪ್ರಯಾಣಿಕರು ಮಾತ್ರ ಇದ್ದರೆಂದು ಹೇಳಲಾಗಿದ್ದು, ಎಲ್ಲರೂ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ▶ 6ನೇ ಪುಟಕ್ಕೆ


ಚಾಮುಂಡಿಬೆಟ್ಟದಲ್ಲಿ ಉರುಳಿ ಬಿದ್ದಿರುವ ಮೈಸೂರು ನಗರ ಸಾರಿಗೆ ಬಸ್

❝ ನಗರ ಬಸ್ ನಿಲ್ದಾಣದಿಂದ ಹೊರಟಾಗ ಯಾವುದೇ ತಾಂತ್ರಿಕ ದೋಷ ಕಂಡು ಬಂದಿಲ್ಲ. ಬಸ್ ಚಾಮುಂಡಿಬೆಟ್ಟದ ವ್ಯೂ ಪಾಯಿಂಟ್ ಬಳಿ ಹೋಗುತ್ತಿದ್ದಾಗ ಹಠಾತ್ತನೆ ಸ್ಟೇರಿಂಗ್ ಲಾಕ್ ಆದಂತೆ ಆಗಿ ಬಸ್ ಬಲ ಭಾಗಕ್ಕೆ ಎಳೆಯಿತು. ಅದನ್ನು ನಿಯಂತ್ರಿಸಲು ಪ್ರಯತ್ನಪಟ್ಟೆ. ಆದರೂ, ಬಸ್ ತಡೆಗೋಡೆಗೆ ಡಿಕ್ಕಿ ಹೊಡೆದು ಪಕ್ಕದ ರಸ್ತೆಗೆ ಉರುಳಿ ಬಿತ್ತು. ಅದೃಷ್ಟವಶಾತ್ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳು ಆಗಿದ್ದು, ಅವರನ್ನು ಕೆಳಕ್ಕಿಳಿಸಿ ಸಂತೈಸಲಾಯಿತು.

– ಮಲ್ಲಿಕಾರ್ಜುನಸ್ವಾಮಿ, ಬಸ್ ಚಾಲಕ

ರಾಹುಲ್ ಗಾಂಧಿ ಬಯಲು ಮಾಡಿದ ಮತಗಳ್ಳತನ!



■ ಮಾಧ್ಯಮಗಳಿಗೆ ಪಿಪಿಟಿ ಮೂಲಕ ಮಾಹಿತಿ ■ ಕರ್ನಾಟಕದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿ ಮಹದೇವಪುರದಲ್ಲಿ ಮತಗಳ್ಳತನ ನಡೆದಿರುವ ವಿವರಣೆ ■ ಎಷ್ಟೇ ಪ್ರಶ್ನೆಗಳು ಮುಂದಿಟ್ಟರೂ ಮೌನ ವಹಿಸಿರುವ ಚುನಾವಣಾ ಆಯೋಗ; ರಾಹುಲ್ ಗಾಂಧಿ ಆಕ್ರೋಶ

ನವದೆಹಲಿ, ಆ.7– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಮತದಾರರ ಪಟ್ಟಿ ಪರಿಶೀಲನೆಯಲ್ಲಿನ ಅಕ್ರಮಗಳ ಕುರಿತು ಮಾಧ್ಯಮಗಳಿಗೆ ಪಿಪಿಟಿ ಮೂಲಕ ಮಾಹಿತಿ ನೀಡಿದರು. ಪರದೆಯ ಮೇಲೆ ಕರ್ನಾಟಕದ ಮತದಾರರ ಪಟ್ಟಿಯನ್ನು ತೋರಿಸುತ್ತಾ, ಮೂರೂ ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಅನುಮಾನಾಸ್ಪದ ಮತದಾರರಿದ್ದಾರೆ ಎಂದು ಹೇಳಿದರು. ಮಹಾರಾಷ್ಟ್ರದ ಫಲಿತಾಂಶಗಳನ್ನು ನೋಡಿದ ನಂತರ ಮತಗಳ್ಳತನ ಆಗಿರುವ ನಮ್ಮ ಅನುಮಾನ ದೃಢಪಟ್ಟಿದೆ ಎಂದು ಅವರು ಹೇಳಿದರು. ಮತಯಂತ್ರ ಓದಬಹುದಾದ ಮತದಾರರ ಪಟ್ಟಿಯನ್ನು ಒದಗಿಸದ ಮೂಲಕ ಚುನಾವಣಾ ಆಯೋಗವು ಬಿಜೆಪಿಯೊಂದಿಗೆ ಸೇರಿ ಮಹಾರಾಷ್ಟ್ರ ಚುನಾವಣೆಯನ್ನು ಕದ್ದಿದೆ ಎಂದು ನಮಗೆ ▶ 6ನೇ ಪುಟಕ್ಕೆ

ಮತಗಳ್ಳತನವಾಗಿರುವುದೇಗೆ?

ನಕಲಿ ಮತದಾರರು 11,965: ಹಲವು ಸ್ಥಳಗಳಲ್ಲಿ ಮತದಾರರ ಪಟ್ಟಿಯಲ್ಲಿ ಒಂದೇ ವ್ಯಕ್ತಿ ಕಾಣಿಸಿಕೊಂಡಿದ್ದಾನೆ. ಪ್ರತಿ ಬಾರಿಯೂ ಅವರ ಮತಗಟ್ಟೆ ಸಂಖ್ಯೆ ವಿಭಿನ್ನವಾಗಿತ್ತು.

ನಕಲಿ ವಿಳಾಸಗಳ ಮತದಾರರು 40,009: ಬೆಂಗಳೂರು ಸೆಂಟ್ರಲ್‌ನಲ್ಲಿ 40 ಸಾವಿರಕ್ಕೂ ಹೆಚ್ಚು ಮತದಾರರ ವಿಳಾಸಗಳು ನಕಲಿ ಎಂದು ಕಂಡುಬಂದಿದೆ. ಆ ವಿಳಾಸಗಳಲ್ಲಿ ಯಾರೂ ವಾಸಿಸುತ್ತಿರಲಿಲ್ಲ, ಹಾಗಾದರೆ ಯಾರು ಮತ ಚಲಾಯಿಸಿದರು?

ಒಂದೇ ವಿಳಾಸದಲ್ಲಿ ಬಹು ಮತದಾರರು: ಒಂದು ವಿಳಾಸದಲ್ಲಿ ಹಲವು ಮತದಾರರು ಕಂಡು ಬಂದಿದ್ದಾರೆ. ಬೂತ್ ಸಂಖ್ಯೆ 470ರಲ್ಲಿ ಪಟ್ಟಿ ಮಾಡಲಾದ ಮನೆ ಸಂಖ್ಯೆ 35 ರಲ್ಲಿ 80 ಮತದಾರರು ಕಂಡುಬಂದಿದ್ದಾರೆ. ಅದೇ ರೀತಿ, ಇನ್ನೊಂದು ಮನೆಯಲ್ಲಿ 46 ಮತದಾರರ ಪಟ್ಟಿ ಮಾಡಿದ್ದಾರೆ.

ಅಕ್ರಮ ಫೋಟೋ: 4132 ಮತದಾರರು ಮತದಾರರ ಗುರುತಿನ ಚೀಟಿಯಲ್ಲಿನ ಫೋಟೋ ಅಮಾನ್ಯವಾಗಿದ್ದರು. ಕೆಲವು ಫೋಟೋಗಳು ತುಂಬಾ ಚಿಕ್ಕದಾಗಿದ್ದರಿಂದ ಅವರನ್ನು ಗುರುತಿಸುವುದು ಕಷ್ಟಕರವಾಗಿತ್ತು. ಹಾಗಾದರೆ ಅವರು ಹೇಗೆ ಮತ ಚಲಾಯಿಸಿದರು.

ಫಾರ್ಮ್–6 ಬಳಸಿ ವಂಚನೆ: 70 ವರ್ಷದ ಶಕುನ್ ರಾಣಿ ಮತದಾರರ ಗುರುತಿನ ಚೀಟಿ ಪಡೆಯಲು ಒಂದು ತಿಂಗಳಲ್ಲಿ ಎರಡು ಬಾರಿ ಫಾರ್ಮ್ 6 ಅನ್ನು ಭರ್ತಿ ಮಾಡಿದರು. ಒಮ್ಮೆ ಅವರ ಫೋಟೋವನ್ನು ದೂರದಿಂದ ತೆಗೆಯಲಾಯಿತು. ಎರಡನೇ ಬಾರಿ ಅವರು ಜೂಮ್ ಮಾಡಿ ಫೋಟೋವನ್ನು ಅಪ್‌ಲೋಡ್ ಮಾಡಿದರು.

ಅಫಿಡವಿಟ್‌ನೊಂದಿಗೆ ದಾಖಲೆ ಸಲ್ಲಿಸಿ; ರಾಹುಲ್ ಗಾಂಧಿಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಸೂಚನೆ

ಬೆಂಗಳೂರು, ಆ.7– ಕರ್ನಾಟಕದಲ್ಲಿ ಲೋಕಸಭೆ ಚುನಾವಣೆಯಲ್ಲಿ ಮತಗಳ್ಳತನ ನಡೆದಿದೆ ಎಂಬುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಹಿ ಮಾಡಿದ ಅಫಿಡವಿಟ್‌ನೊಂದಿಗೆ ಚುನಾವಣಾ ಆಯೋಗಕ್ಕೆ ಸಲ್ಲಿಸುವಂತೆ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಗುರುವಾರ ಸೂಚಿಸಿದ್ದಾರೆ.

ಇಂದು ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮತಗಳ್ಳತನದ ಬಗ್ಗೆ ದಾಖಲೆ ಬಿಡುಗಡೆ ಮಾಡಿದ ನಂತರ ರಾಹುಲ್ ಗಾಂಧಿಯವರಿಗೆ ಪತ್ರ ಬರೆದಿರುವ ರಾಜ್ಯ ಚುನಾವಣಾ ಅಧಿಕಾರಿ, ರಾಷ್ಟ್ರ ರಾಜಧಾನಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ನೀವು ಅನರ್ಹ ಮತದಾರರ ಸೇರ್ಪಡೆ ಮತ್ತು ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಿರುವ ಬಗ್ಗೆ ಉಲ್ಲೇಖಿಸಿದ್ದೀರಿ. ಆ ಕುರಿತ ದಾಖಲೆಗಳನ್ನು ಚುನಾವಣಾ ಆಯೋಗದೊಂದಿಗೆ ಹಂಚಿಕೊಳ್ಳಿ ಎಂದು ಹೇಳಿದ್ದಾರೆ.


ಅನ್ಬುಕುಮಾರ್

1960ರ ಮತದಾರರ ನೋಂದಣಿ ನಿಯಮಗಳ ನಿಯಮ 20(3)(b) ಅಡಿಯಲ್ಲಿ ಲಗತ್ತಿಸಲಾದ ಸಾಕ್ಷ್ಯಾಧಾರಿತ ಪ್ರಮಾಣಪತ್ರಕ್ಕೆ ಸಹಿ ಹಾಕಿದ ದಾಖಲೆಗಳನ್ನು ಸಲ್ಲಿಸಿ. ಇದರಿಂದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ಅವರು ಪತ್ರದಲ್ಲಿ ತಿಳಿಸಿದ್ದಾರೆ. ▶ 6ನೇ ಪುಟಕ್ಕೆ







ಒಳ ಮೀಸಲಾತಿ ಜಾರಿ ನಿರ್ಧಾರ ಸಂಬಂಧ

ಆ.16ರಂದು ವಿಶೇಷ ಸಂಪುಟ ಸಭೆ

ನ್ಯಾ.ನಾಗಮೋಹನದಾಸ್ ನೇತೃತ್ವದ ಸಮಿತಿ ವರದಿ ಸಂಪುಟ ಅಂಗೀಕಾರ

ಬೆಂಗಳೂರು, ಆ.7(ಕೆಎಂಶಿ)– ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಅನುಷ್ಠಾನ ಕುರಿತು ಚರ್ಚಿಸಿ, ನಿರ್ಧಾರ ಕೈಗೊಳ್ಳಲು ಆಗಸ್ಟ್ 16ರಂದು ವಿಶೇಷ ಸಂಪುಟ ಸಭೆ ಕರೆಯಲಾಗಿದೆ.


ಹೆಚ್.ಕೆ.ಪಾಟೀಲ್

ಇಂದಿಲ್ಲಿ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಹೆಚ್.ಕೆ.ಪಾಟೀಲ್, ಒಳ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ಸಮಿತಿ ನೀಡಿದ ವರದಿಯನ್ನು ಸಂಪುಟ ಅಂಗೀಕರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವರದಿ ಪ್ರತಿಗಳನ್ನು ಸಂಪುಟದ ಎಲ್ಲ ಸದಸ್ಯರಿಗೆ ನೀಡಿದ್ದು, ಇದರ ಅಧ್ಯಯನ ನಡೆಸಿ, ವಿಶೇಷ ಸಂಪುಟ ಸಭೆಯಲ್ಲಿ ಚರ್ಚಿಸಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ಅಂದು ಕರೆದಿರುವ ಸಭೆಯಲ್ಲಿ ಈ ವಿಷಯ ಹೊರತುಪಡಿಸಿ ಉಳಿದಂತೆ ಯಾವುದೇ ವಿಷಯ ಅಜೆಂಡಾದಲ್ಲಿ ಇರುವುದಿಲ್ಲ. ಸಚಿವರು ನೀಡುವ ಅಭಿಪ್ರಾಯ ಕ್ರೋಢೀಕರಿಸಿ ಸಭೆ ತೀರ್ಮಾನ ಕೈಗೊಳ್ಳಲಿದ್ದು, ಇಂದು ನಡೆದ ಸಭೆಯಲ್ಲಿ ಒಳ ಮೀಸಲಾತಿ ಜಾರಿ ಕುರಿತು ಯಾವುದೇ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು. ನಾಗಮೋಹನದಾಸ್ ಅವರು, ಪರಿಶಿಷ್ಟ ಜಾತಿ ಸಮುದಾಯದ ಶೇಕಡ 92ರಷ್ಟು ಕುಟುಂಬಗಳಿಂದ ಮಾಹಿತಿ ಪಡೆದು ವೈಜ್ಞಾನಿಕ ವರದಿ ಸಲ್ಲಿಸಿದ್ದಾರೆ ಎಂದರು.

ಕಟ್ಟೆಮಳಲವಾಡಿ, ವಡಕೆಕಟ್ಟೆ ನಾಲೆ ಆಧುನೀಕರಣ: ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಅಣೆಕಟ್ಟೆ ನಾಲೆ ಮತ್ತು ವಡಕೆಕಟ್ಟೆ ನಾಲೆಗಳ ಆಧುನೀಕರಣ ಕಾಮಗಾರಿಗಳಿಗೆ 49.65 ಕೋಟಿ ರೂ.ಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಹಾರಂಗಿ ಬಲದಂಡೆ ನಾಲೆ ಆಧುನೀಕರಣ: ಹಾರಂಗಿ ಬಲದಂಡೆ ನಾಲೆಯಡಿ ಮರೂರು ಶಾಖಾ ನಾಲೆಗಳ ಆಧುನೀಕರಣಕ್ಕೆ 90 ಕೋಟಿ ರೂ. ಹಾಗೂ ಎಡದಂಡೆ ಕಾಲುವೆಯಡಿ ▶ 6ನೇ ಪುಟಕ್ಕೆ



ಮೈಸೂರಿನಲ್ಲಿ ಕುಕ್ಕರ್ ಬಾಂಬ್ ಸೃಷ್ಟಿಸಿದ್ದ ಉಗ್ರನ ಟಾರ್ಗೆಟ್ 'ಧರ್ಮಸ್ಥಳ'!

- ಎನ್‌ಐಎ ತನಿಖೆಯಿಂದ ಆತಂಕಕಾರಿ ವಿಚಾರ ಬಯಲು
- ಧರ್ಮಸ್ಥಳದಲ್ಲಿ ಸ್ಫೋಟಿಸಲು 90 ನಿಮಿಷದ ಲೆಕ್ಕಾಚಾರ
- ಕೊನೆಗೆ 09 ನಿಮಿಷ ಸೆಟ್ ಮಾಡಿದ್ದ ಕಾರಣ ಬಾಂಬ್ ಸ್ಫೋಟ
- ಕ್ರಿಪ್ಟೋ ಕರೆನ್ಸಿ, ಅಕ್ರಮ ಖಾತೆಗಳಿಂದ ಉಗ್ರರಿಗೆ ಹಣ ರವಾನೆ
- ವಿಕರ್ ಆ್ಯಪ್, ಟೆಲಿಗ್ರಾಂ ಮೂಲಕ ಉಗ್ರ ಕೃತ್ಯಕ್ಕೆ ತರಬೇತಿ

ಮೈಸೂರು, ಆ.7(ಬಿಎಲ್‌ಯು)– ಮೈಸೂರಿನ ಲೋಕನಾಯಕನಗರದ ಮನೆಯೊಂದರಲ್ಲಿ ಕುಕ್ಕರ್ ಬಾಂಬ್ ತಯಾರಿಸಿಕೊಂಡು, ಹೋಗುವಾಗ ಮಂಗಳೂರಿನಲ್ಲಿ ಆಟೋದಲ್ಲಿ ಸ್ಫೋಟಿಸಿದ ಪ್ರಕರಣದಲ್ಲಿ ಸಿಕ್ಕಿಬಿದ್ದ ಮೊಹಮ್ಮದ್ ಶಾರಿಕ್ ನಿಜ ಟಾರ್ಗೆಟ್ ಧರ್ಮಸ್ಥಳ ಎಂಬ ಆತಂಕಕಾರಿ ವಿಚಾರ ಬಯಲಾಗಿದೆ.



ಮೊಹಮ್ಮದ್ ಶಾರಿಕ್

ಮೈಸೂರಿನ ಲೋಕನಾಯಕ ನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದ ಮೊಹಮ್ಮದ್ ಶಾರಿಕ್, ಕುಕ್ಕರ್ ಬಾಂಬ್ ತಯಾರಿಸಿಕೊಂಡು ಮಂಗಳೂರಿಗೆ ಹೋಗಿದ್ದ. 2022, ನವೆಂಬರ್ 19ರಂದು ಮಂಗಳೂರಲ್ಲಿ ಆಟೋದಲ್ಲಿ ಹೋಗುವ ಸಂದರ್ಭದಲ್ಲಿ ನಾಗುರಿ ಬಳಿ ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಮೊಹಮ್ಮದ್ ಶಾರಿಕ್‌ನನ್ನು ಮಂಗಳೂರು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಈ ಪ್ರಕರಣವನ್ನು ಎನ್‌ಐಎ ವಹಿಸಿಕೊಂಡು ತನಿಖೆ ಮಾಡಿತ್ತು. ಆರೋಪಿಗಳನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಇವರ ಟಾರ್ಗೆಟ್ ಧರ್ಮಸ್ಥಳವಾಗಿತ್ತು ಎಂಬ ಸಂಗತಿ ಬಯಲಾಯಿತು.

ಭಯೋತ್ಪಾದಕರು ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನದಲ್ಲಿ ಬಾಂಬ್ ಇಟ್ಟು ಸ್ಫೋಟಿಸುವ ಹುನ್ನಾರ ನಡೆಸಿದ್ದರು. ಮಂಗಳೂರಿನಿಂದ ಧರ್ಮಸ್ಥಳಕ್ಕೆ ಹೋಗಿ ತಮ್ಮ ಗುರಿ ಸಾಧಿಸಲು 90 ನಿಮಿಷವಾಗುತ್ತದೆ ಎಂದು ಲೆಕ್ಕಾಚಾರ ಹಾಕಿದ್ದರು. ಆದರೆ, 90 ನಿಮಿಷಕ್ಕೆ ಬದಲಾಗಿ 09 ಎಂದು ಸೆಟ್ ಮಾಡಿದ್ದರು. ಇದರಿಂದ ದಾರಿ ಮಧ್ಯೆಯೇ ಕುಕ್ಕರ್ ಬಾಂಬ್ ಸ್ಫೋಟಗೊಂಡಿತು.

ಭಯೋತ್ಪಾದಕರಿಗೆ ಅಕ್ರಮವಾಗಿ ಹಣ ಸಂದಾಯವಾಗಿರುವ ಹಿನ್ನೆಲೆ ಜಾರಿ ನಿರ್ದೇಶನಾಲಯ ಕೂಡ ತನಿಖೆ ಮಾಡಿತ್ತು.

ಐಸಿಸ್ ಆನ್ ಲೈನ್ ವ್ಯವಹಾರ ನಿರ್ವಹಿಸುವ ಕರ್ನಲ್ ಎಂಬಾತ ವಿಕರ್ ಆ್ಯಪ್ ಮತ್ತು ಟೆಲಿಗ್ರಾಂ ಮೂಲಕ ಮೊಹಮ್ಮದ್ ಶಾರಿಕ್ ಅಲಿಯಾಸ್ ಪ್ರೇಮರಾಜ್ ಸೇರಿದಂತೆ ಇತರರಿಗೆ ಸ್ಫೋಟಕ ತಯಾರಿಸುವ ಬಗ್ಗೆ ತರಬೇತಿ ನೀಡುತ್ತಿದ್ದ.

ಮನೆ ಬಾಡಿಗೆ, ಊಟ–ತಿಂಡಿ ಸೇರಿದಂತೆ ಉಗ್ರರ ಕೃತ್ಯಕ್ಕೆ ಬಳಸುವ ವಸ್ತುಗಳ ಖರೀದಿಗೆ ನಕಲಿ ಖಾತೆ ಹಾಗೂ ಕ್ರಿಪ್ಟೋ ಕರೆನ್ಸಿ ಮೂಲಕ ಹಣ ಒದಗಿಸುತ್ತಿದ್ದನು. ಈ ಹಣವನ್ನು ಮೊಹಮ್ಮದ್ ಶಾರಿಕ್ ಮತ್ತು ಮೊಹಮ್ಮದ್ ಯಾಸಿನ್ ಪಡೆದುಕೊಳ್ಳುತ್ತಿದ್ದರು. ಕ್ರಿಪ್ಟೋ ಕರೆನ್ಸಿ ಮೂಲಕ 2,86,008 ಹಾಗೂ ವಿವಿಧ ಏಜೆಂಟರಿಂದ 41,680 ಪಡೆದುಕೊಂಡಿದ್ದರು. ಬೆಂಗಳೂರಿನ ಇಡಿ ಕಚೇರಿ ಇದೇ ತಿಂಗಳ 5ರಂದು ಮೊಹಮ್ಮದ್ ಯಾಸಿನ್‌ನಿಂದ 29,176 ರೂಪಾಯಿಯನ್ನು ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ವಶಪಡಿಸಿಕೊಂಡಿದೆ.

ವರುಣ ನಾಲೆಯಲ್ಲಿ ಬಿರುಕು; ಭಾರಿ ಪ್ರಮಾಣದ ನೀರು ಪೋಲು

ದುರಸ್ತಿಗೆ ಜನರ ಆಗ್ರಹ

ಮೈಸೂರು,ಆ.7–ಮೈಸೂರು ತಾಲೂಕು ಕಡಕೊಳ ಗ್ರಾಮದ ಬಳಿ ಇರುವ ವರುಣ ನಾಲೆಯ (ಡಿ ದೇವರಾಜ ಅರಸು ನಾಲೆಯ ಸೇತುವೆ) ಕಂಬದ ಸಂಖ್ಯೆ 158ರ ಬಳಿ ಬಿರುಕು ಕಾಣಿಸಿಕೊಂಡಿದ್ದು, ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ. ಇದನ್ನು ಕಂಡು ಕಾಣದಂತೆ ಅಧಿಕಾರಿ ವರ್ಗ ಕಣ್ಮುಚ್ಚಿ ಕುಳಿತಿದ್ದು, ಸ್ಥಳೀಯ ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಈಗಾಗಲೇ ಬೆಳೆ ಬೆಳೆಯಲು ನಾಲೆಗೆ ನೀರು ಬಿಡಲಾಗಿದೆ. ಕೃಷಿ ಚಟುವಟಿಕೆಗಳಿಗೆ ಬಳಕೆಯಾಗಬೇಕಾದ ನೀರು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ಸೋರಿಕೆಯಾಗಿ ವ್ಯರ್ಥವಾಗುತ್ತಿದೆ. ಈ ವಿಚಾರವಾಗಿ ಸ್ಥಳೀಯ ನಾಗರಿಕರು ಮತ್ತು ರೈತರು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿದರೆ ಸೌಜನ್ಯಕ್ಕೂ ಸ್ಥಳಕ್ಕೆ ಭೇಟಿ ಕೊಡದೆ ನಿರ್ಲಕ್ಷ್ಯ ವಹಿಸಿದ್ದಾರೆ.



ವರುಣ ನಾಲೆಯ (ಡಿ.ದೇವರಾಜ ಅರಸು ನಾಲೆಯ ಸೇತುವೆ) ಕಂಬದ ಸಂಖ್ಯೆ 158ರ ಬಳಿ ಬಿರುಕಾಗಿ ನೀರು ಸೋರುತ್ತಿರುವುದು.

ಸದರಿ ನಾಲೆಯಲ್ಲಿ ವರ್ಷಕ್ಕೆ ಒಂದು ಬಾರಿ ನೀರನ್ನು ಬಿಡಲಾಗುತ್ತಿದ್ದು, ರೈತರು ಸದರಿ ನೀರಿನಿಂದ ಸದುಪಯೋಗಪಡಿಸಿಕೊಂಡು ಬೆಳೆ ಬೆಳೆಯುತ್ತಿದ್ದಾರೆ. ನೀರನ್ನ ಪೋಲು ಮಾಡಬೇಡಿ, ಉಳಿಸಿ ಎಂದು ಸಂದೇಶ ನೀಡುವ ಅಧಿಕಾರಿಗಳು, ಈಗ ಅಪಾರ ಪ್ರಮಾಣದ ನೀರು ಪೋಲಾಗುತ್ತಿದ್ದರೂ ಕಂಡು ಕಾಣದಂತೆ ಕುಳಿತಿರುವುದು ಅಕ್ಷಮ್ಯವಾಗಿದೆ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿ ವರ್ಗ ಬಿರುಕು ಬಿಟ್ಟಿರುವ ಸ್ಥಳವನ್ನು ದುರಸ್ತಿಗೊಳಿಸಿ ಪೋಲಾಗುತ್ತಿರುವ ನೀರನ್ನು ನಿಲ್ಲಿಸಬೇಕೆಂದು ಸಾಮಾಜಿಕ ಹೋರಾಟಗಾರ ಕಡಕೊಳ ಕುಮಾರಸ್ವಾಮಿ ನೀರಾವರಿ ಇಲಾಖೆ ಅಧಿಕಾರಿ ವರ್ಗವನ್ನು ಆಗ್ರಹಿಸಿದ್ದಾರೆ. ಒಂದು ವೇಳೆ ತಕ್ಷಣ ಸರಿಪಡಿಸದಿದ್ದರೆ ಸಂಬಂಧಪಟ್ಟ ಅಧಿಕಾರಿ ವರ್ಗದವರ ಭಾವಚಿತ್ರವನ್ನು ಕೆಳಗಡೆ ಇಟ್ಟು ಮಜ್ಜನ ಮಾಡಿಸುವ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಆನಂದ ಆರೋಗ್ಯ ಕಾರ್ಯಕ್ರಮ

ಮೈಸೂರು, ಆ. 7 – ಮೈಸೂರಿನ ವಿಜಯನಗರದಲ್ಲಿರುವ ಆಯುರ್ವೇದ ಪಂಚಕರ್ಮ ಆಸ್ಪತ್ರೆ ದೀಕ್ಷಿತ್ ಆರೋಗ್ಯ ಧಾಮವು ರಕ್ಷಾ ಬಂಧನ ಹುಣ್ಣಿಮೆಯ ವಿಶೇಷ ಮಾಸದ ಅಂಗವಾಗಿ ಆನಂದ ಆರೋಗ್ಯ ಕಾರ್ಯಕ್ರಮವನ್ನು ದೀಕ್ಷಿತ್ ಆರೋಗ್ಯ ಧಾಮದಲ್ಲಿ ಆ. 9 ರಂದು ಸಂಜೆ 6 ಗಂಟೆಗೆ ಏರ್ಪಡಿಸಲಾಗಿದೆ. ವಿದ್ವಾನ್ ಡಿ.ಕೆ. ಜಸ್ವಂತ್ ಅವರಿಂದ ಸುಗಮ ಸಂಗೀತವಿದ್ದು, ಕಲಾಶ್ರೀ ಗಣೇಶ್ ಭಟ್–ಕೀ ಪ್ಯಾಡ್, ಪಂಡಿತ್ ಸುಜಯೀಂದ್ರ ರಾವ್–ತಬಲಾದಲ್ಲಿ ಸಹಕಾರ ನೀಡಲಿದ್ದಾರೆ. ಆಯುರ್ವೇದ ತಜ್ಞ ಡಾ. ಸಿ.ಎಸ್. ಅನಿಲ್ ಕುಮಾರ್ ಅವರು ಸೋರಿಯಾಸಿಸ್ –ಚರ್ಮಕ್ಕೆ ಸವಾಲು ಕುರಿತು ಉಪನ್ಯಾಸ ನೀಡಲಿದ್ದಾರೆ.

ಆ.10ಕ್ಕೆ ಬ್ಯಾರಿ ಅಕಾಡೆಮಿ ಪ್ರಶಸ್ತಿ ಪ್ರದಾನ

ಮೈಸೂರು,ಆ.7(ಎಂಟಿವೈ)– ಮೈಸೂರಿನ ತಿಲಕನಗರದಲ್ಲಿರುವ ಈದ್ಗಾ ಮೈದಾನ ಮುಂಭಾಗದ ಎ.ಆರ್.ಕನ್ವೆನ್ಷನ್ ಹಾಲ್‌ನಲ್ಲಿ ಆ.10ರಂದು ಸಂಜೆ 4ಕ್ಕೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಕೊಡ ಮಾಡುವ 2024 ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮತ್ತು ಬ್ಯಾರಿ ಕುಟುಂಬ ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು.ಹೆಚ್.ಉಮರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಬ್ಯಾರಿ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಾಸಕ ತನ್ವೀರ್ ಸೇಠ್ 'ಪೆರಿಮೆ' ಪುಸ್ತಕ, ಶಾಸಕ ಕೆ.ಹರೀಶ್‌ಗೌಡ 'ಬೆಳ್ಕಿರಿ' ದ್ವೈಮಾಸಿಕ ಬಿಡುಗಡೆಗೊಳಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಡಾ. ಮಕ್ಸೂದ್ ಅಹ್ಮದ್ ಮುಲ್ಕಿ, ಹಿರಿಯ ಬ್ಯಾರಿ ಹಾಡುಗಾರ, ಕವಿ ಪಿ.ಎ. ಹಸನಬ್ಬ ಮೂಡುಬಿದ್ರೆ ಬ್ಯಾರಿ ಕವಿ ಹೈದರ್ ಅಲಿ ಕಾಟಿಪಳ್ಳ ಅವರಿಗೆ 'ಗೌರವ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ ಎಂದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು.ಹೆಚ್. ಉಮರ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ , ಬ್ಯಾರೀಸ್ ವೆಲ್ಫೇರ್ ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸದಸ್ಯ ಅತ್ತೂರು ಚೆಯ್ಯಬ್ಬ ಅಭಿನಂದನಾ ಭಾಷಣ ಮಾಡುವರು. ಇದಕ್ಕೂ ಮುನ್ನ ಬೆಳಗ್ಗೆ 11ಕ್ಕೆ ಆರಂಭವಾಗುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಬ್ದುಲ್ ಅಜೀಜ್ ಉದ್ಘಾಟಿಸಲಿದ್ದಾರೆ. ದಿನವಿಡೀ ಮಹಿಳೆಯರಿಗೆ ಬ್ಯಾರಿ ಸಂಪ್ರದಾಯದ ಆಹಾರ ಮತ್ತು ಮೆಹಂದಿ ವಿನ್ಯಾಸ, ಮಕ್ಕಳಿಗೆ ಬ್ಯಾರಿ ಹಾಡು ಹಾಗೂ ಪುರುಷ, ಮಹಿಳೆಯರಿಗೆ ಬ್ಯಾರಿ ಕ್ವಿಜ್ ನಡೆಯಲಿವೆ. ದಫ್ ಕುಣಿತ, ಒಪ್ಪನೆ ಹಾಡು, ಕೋಲಾಟ, ಬ್ಯಾರಿ ಹಾಡುಗಳ ಗಾಯನ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಹಾಜಿ ಯು.ಕೆ.ಹಮೀದ್, ಎಂ.ಐ. ಅಹ್ಮದ್ ಬಾವ, ಆರಂಗಳ ಅಬ್ದುಲ್ ಹಮೀದ್ ಹಾಗೂ ಇನ್ನಿತರರು ಇದ್ದರು.

ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನದಿಂದಲೇ 70 ಸಾವಿರ ಲೀಡ್ ಪಡೆದಿದ್ದೀರಾ...!

ಕಾಂಗ್ರೆಸ್ ನಾಯಕರಿಗೆ ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷ ನಾಗೇಂದ್ರರ ಪ್ರಶ್ನೆ

ಮೈಸೂರು, ಆ.7(ಬಿಎಲ್‌ಯು)–ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಸುಮಾರು 70 ಸಾವಿರ ಲೀಡ್ ಪಡೆದಿದೆ. ಹಾಗಾದರೆ ಇಲ್ಲಿ ಕಾಂಗ್ರೆಸ್ ಮತಗಳ್ಳತನ ಮಾಡಿದೆಯೇ ಎಂದು ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದ್ದಾರೆ.

ಮೈಸೂರು ನಗರ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂಬ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಕ್ಕೆ ತಿರುಗೇಟು ನೀಡಿದರು.

ಮೈಸೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಾಲ್ಕು ವಿಧಾನಸಭಾ ಕ್ಷೇತ್ರ ಹಾಗೂ ಬೆಂಗಳೂರಿನ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನವಾಗಿದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸುತ್ತಾರೆ. ನರಸಿಂಹರಾಜ ಕ್ಷೇತ್ರದ ಮೀನಾ ಬಜಾರ್‌ನಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್‌ಗೆ 1,200 ಮತ ಬಂದಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ್‌ಗೆ 8 ಸಾವಿರ ಮತ ಬಂದಿದೆ. ಹಾಗಾದರೆ ಇಲ್ಲಿ ಕಾಂಗ್ರೆಸ್ ನಾಯಕರು ರಿಗ್ಗಿಂಗ್ ಮಾಡಿದ್ದಾರೆಯೇ ಎಂದು ನಾಗೇಂದ್ರ ಮರು ಪ್ರಶ್ನಿಸಿದರು. ಈವರೆಗೆ ಐದು ಚುನಾವಣೆ ಸೋತಿರುವ ಲಕ್ಷ್ಮಣ್‌ಗೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಮತ ಬಂದಿರುವುದೇ ಆಶ್ಚರ್ಯ ಮೂಡಿಸಿದೆ ಎಂದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 136 ಸ್ಥಾನ ಪಡೆದಿದೆ. ಹಾಗಾದರೆ ಮತಗಳ್ಳತನ ಮಾಡಿ ಇಷ್ಟು ಸ್ಥಾನದಲ್ಲಿ ಗೆಲುವು ಸಾಧಿಸಿದ್ದೀರಾ?

ಮೈಸೂರು ರಾಜವಂಶಸ್ಥ ಯದುವೀರ್ ಚುನಾವಣಾ ಪ್ರಚಾರಕ್ಕೆ ಹೋದಾಗ ಬಹಳಷ್ಟು ಜನರು ಕಾಲು ಮುಟ್ಟಿ ನಮಸ್ಕಾರ ಮಾಡಿದ್ದಾರೆ. ಪ್ರಚಾರದಲ್ಲಿ ಹಾದು ಹೋಗುವ ಸಂದರ್ಭದಲ್ಲಿ ಯದುವೀರ್ ನೋಡಿ ಬಹಳಷ್ಟು ಜನರು ಚಪ್ಪಲಿ ಬಿಟ್ಟು ನಮಸ್ಕಾರ ಮಾಡಿದ್ದಾರೆ. ಮೈಸೂರು ರಾಜವಂಶಸ್ಥರ ಬಗ್ಗೆ ಮೈಸೂರಿನ ಮತದಾರರಿಗೆ ಇದ್ದ ಗೌರವ ಹಾಗೂ ಪ್ರೀತಿಯಿಂದ ಯದುವೀರ್‌ಗೆ ಹೆಚ್ಚು ಮತ ಲಭಿಸಿ ಅವರು ಗೆಲುವು ಸಾಧಿಸಿದ್ದಾರೆ ಎಂದು ಹೇಳಿದರು.

ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರು ಪ್ರತಿ ಮತಕ್ಕೆ 500 ರೂಪಾಯಿ ನೀಡಿದ್ದಾರೆ. ನಾವು ಯಾವುದೇ ಆಮಿಷವೊಡ್ಡದೆ ಪ್ರಾಮಾಣಿಕವಾಗಿ ಚುನಾವಣೆ ಮಾಡಿದ್ದೇವೆ ಎನ್ನುವುದಾದರೆ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬಂದು ದೇವರ ಮುಂದೆ ಪ್ರಮಾಣ ಮಾಡಲಿ ಎಂದು ನಾಗೇಂದ್ರ ಸವಾಲು ಹಾಕಿದರು.

ಮೈಸೂರಿನಲ್ಲಿ ನಡೆಯುತ್ತಿದ್ದ ನೂರಾರು ಕೋಟಿ ಡ್ರಗ್ಸ್ ಜಾಲವನ್ನು ಮುಂಬೈ ಪೊಲೀಸರು ಬಂದು ಪತ್ತೆ ಮಾಡಿದರು. ನಮ್ಮ ಮೈಸೂರು ಪೊಲೀಸರಿಗೆ ಇದು ಗೊತ್ತೆ ಇರಲಿಲ್ಲ. ಈ ಮೂಲಕ ಕಾಂಗ್ರೆಸ್ ಸರ್ಕಾರದಲ್ಲಿ ಗೃಹ ಇಲಾಖೆ ಗಾಢ ನಿದ್ರೆಯಲ್ಲಿದೆ. ತಮ್ಮ ಸರ್ಕಾರದ ವೈಫಲ್ಯ ತಿಳಿಯದ ಕಾಂಗ್ರೆಸ್ ನಾಯಕರು ಬಿಜೆಪಿ ಬಗ್ಗೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಅಲ್ಲದೆ ಸಮರ್ಥವಾಗಿ ಕೆಲಸ ಮಾಡುತ್ತಿರುವ ಚುನಾವಣಾ ಆಯೋಗದ ವಿರುದ್ಧ ಸುಳ್ಳು ಹೇಳಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಸರ್ಕಾರದಲ್ಲಿ ಅಧಿಕಾರ ಹಂಚಿಕೆ ವಿಚಾರವಾಗಿ ಕಾಂಗ್ರೆಸ್‌ನಲ್ಲಿ ಭಿನ್ನಮತ ಭುಗಿಲೇಳಲಿದೆ. ಡಿಸೆಂಬರ್ ವೇಳೆಗೆ ರಸ್ತೆಯಲ್ಲಿ ಬಟ್ಟೆ ಹರಿದುಕೊಂಡು ಕಾಂಗ್ರೆಸ್ ನಾಯಕರು ಕಚ್ಚಾಡುತ್ತಾರೆ ಎಂದು ನಾಗೇಂದ್ರ ಭವಿಷ್ಯ ನುಡಿದರು. ಪತ್ರಿಕಾಗೋಷ್ಠಿಯಲ್ಲಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ನಗರ ಮಾಧ್ಯಮ ಸಂಚಾಲಕ ಮಹೇಶ್‌ರಾಜ್ ಅರಸ್, ಸಹ ಮಾಧ್ಯಮ ಸಂಚಾಲಕ ಬಿ.ಎಂ. ಸಂತೋಷ್‌ಕುಮಾರ್ ಹಾಜರಿದ್ದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸಿದ್ದರಾಮಯ್ಯ ತಮ್ಮ ಮನೆಯಿಂದ ಹಣ ತಂದು ಅಭಿವೃದ್ಧಿ ಮಾಡುತ್ತಿದ್ದಾರೆಯೇ!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮನೆಯಿಂದ ಹಣ ತಂದು ಅಭಿವೃದ್ಧಿ ಮಾಡುತ್ತಿದ್ದಾರೆಯೇ ಎಂದು ನಾಗೇಂದ್ರ ಪ್ರಶ್ನಿಸಿದರು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಮನೆಯಿಂದ ಹಣ ತಂದು ಅಭಿವೃದ್ಧಿ ಮಾಡಿದ್ದಾರಾ ಎಂಬ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ನಾಯಕರ ಹೇಳಿಕೆಗೆ ನಾಗೇಂದ್ರ ತಿರುಗೇಟು ನೀಡಿದರು. ನಾಲ್ವಡಿ ಅವರು ನೀಡಿರುವ ಕೊಡುಗೆಯನ್ನು ಮೈಸೂರು ಮಾತ್ರವಲ್ಲದೆ ಇಡೀ ರಾಜ್ಯದ ಜನರು ಸ್ಮರಿಸುವಾಗ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಅವಹೇಳನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಾಲ್ವಡಿ ಅವರಿಗಿಂತ ಸಿದ್ದರಾಮಯ್ಯ ಮೈಸೂರನ್ನು ಅಭಿವೃದ್ಧಿ ಮಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಾರೆ. ಅಧಿಕಾರಕ್ಕೆ ಬಂದ ದಿನದಿಂದ ಮೈಸೂರಿಗೆ ಏನೇನು ಕೊಡುಗೆ ನೀಡಿದ್ದಾರೆ ಎಂದು ಹೇಳಲಿ ಎಂದು ಆಗ್ರಹಪಡಿಸಿದರು.

ಗ್ಯಾರಂಟಿ ಯೋಜನೆಯಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಅಭಿವೃದ್ಧಿ ಶೂನ್ಯವಾಗಿದ್ದು, ಮೂಲಸೌಕರ್ಯವಿಲ್ಲದೆ ಇಡೀ ರಾಜ್ಯವೇ ಕಂಗೆಟ್ಟಿದೆ. ಇವರಿಗೆ ತಾಕತ್ತು ಇದ್ದರೆ ತಾವು ಮಾಡಿರುವ ಅಭಿವೃದ್ಧಿ ಬಗ್ಗೆ ಶ್ವೇತಪತ್ರ ಹೊರಡಿಸಲಿ ಎಂದು ನಾಗೇಂದ್ರ ಸವಾಲು ಹಾಕಿದರು.

ಟಿಪ್ಪುಸುಲ್ತಾನ್ ಮೂಲ ಹೆಸರು ತಿಪ್ಪೇಶ !!!

ಟಿಪ್ಪುಸುಲ್ತಾನ್ ಮೂಲ ಹೆಸರು ತಿಪ್ಪೇಶ! ಎಂದು ನಗರ ಬಿಜೆಪಿ ವಕ್ತಾರ ಎಂ.ಎ.ಮೋಹನ್ ತಿಳಿಸಿದ್ದಾರೆ. ಚಿತ್ರದುರ್ಗದ ಮದಕರಿ ನಾಯಕನನ್ನು ಸೋಲಿಸಲು ಹೈದರಾಲಿ ಯುದ್ಧ ಸಾರಿದನು. ಆಗ ಮಕ್ಕಳಿಲ್ಲದೆ ಹೈದರಾಲಿ ದುಃಖಿತನಾಗಿದ್ದನು. ಆ ವೇಳೆ ಚಿತ್ರದುರ್ಗದ ನಾಯಕರ ಹಟ್ಟಿಯ ತಿಪ್ಪೇರುದ್ರಸ್ವಾಮಿ ಮಠಕ್ಕೆ ಹೋಗಿ ಹರಕೆ ಹೊತ್ತು, ದೇವರನ್ನು ಬೇಡಿದರೆ ಮಕ್ಕಳಾಗುತ್ತದೆ ಎಂದು ಸ್ಥಳೀಯರು ಸಲಹೆ ನೀಡಿದರು.

ಅದರಂತೆ ತಿಪ್ಪೇರುದ್ರಸ್ವಾಮಿ ಮಠಕ್ಕೆ ಹೋಗಿ ಹರಕೆ ಹೊತ್ತ ಹೈದರಾಲಿಗೆ ಮಗುವಾಯಿತು. ತಿಪ್ಪೇರುದ್ರಸ್ವಾಮಿ ಮಠದ ದೇವರ ಅನುಗ್ರಹದಿಂದ ಪುತ್ರ ಪ್ರಾಪ್ತಿಯಾದ ಹಿನ್ನೆಲೆಯಲ್ಲಿ ಆ ಮಗುವಿಗೆ ತಿಪ್ಪೇಶ ಎಂದು ಹೆಸರಿಟ್ಟನು. ತರುವಾಯ ತಿಪ್ಪೇಶ ಹೋಗಿ ಟಿಪ್ಪು ಆದ. ಟಿಪ್ಪು ಮೃತಪಟ್ಟ ನಂತರ ಟಿಪ್ಪುಸುಲ್ತಾನ್ ಎಂಬ ಬಿರುದು ನೀಡಿದರು. ಟಿಪ್ಪು ಎಂಬುದು ಅರೇಬಿಕ್ ಹಾಗೂ ಉರ್ದು ಹೆಸರಲ್ಲ. ಇದು ಸತ್ಯವಾಗಿದ್ದರೆ ಒಬ್ಬ ಮುಸ್ಲಿಂನಾದರೂ ಟಿಪ್ಪು ಎಂಬ ಹೆಸರಿಟ್ಟುಕೊಳ್ಳುತ್ತಿರಲಿಲ್ಲವೇ ಎಂದು ಪ್ರಶ್ನಿಸಿದರು.

ಮೈಸೂರು ರಾಜ್ಯ ಗೆದ್ದಾಗ ಟಿಪ್ಪು ಪರ್ಷಿಯನ್ ಭಾಷೆ ಕಲಿಯಲು ಒತ್ತಡ ಹೇರಿದನು. ಕನ್ನಡಿಗರ ಮೇಲೆ ದಬ್ಬಾಳಿಕೆ ನಡೆಸಿದನು. ಇಂತಹ ಕನ್ನಡ ವಿರೋಧಿ ಟಿಪ್ಪುವನ್ನು ಕಾಂಗ್ರೆಸ್ ನಾಯಕರು ಹೊಗಳುತ್ತಿದ್ದಾರೆ ಎಂದು ಮೋಹನ್ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ


ಮೈಸೂರು, ಆ.7–ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ 2024–25ನೇ ಸಾಲಿನ ರಾಜ್ಯ ಹಾಗೂ ಕೇಂದ್ರೀಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಸದಸ್ಯರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.14 ಕೊನೆ ದಿನಾಂಕವಾಗಿರುತ್ತದೆ. ಸಂಘದ ಸದಸ್ಯರು ನೇರವಾಗಿ ಸಂಘದ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ. 0821–2470798, ಮೊ. 8150808498 ಸಂಪರ್ಕಿಸಬಹುದು.

ಶಾಸಕ ಜಿ.ಟಿ.ದೇವೇಗೌಡರಿಂದ ರೈತರಿಗೆ ಕೃಷಿ ಪರಿಕರಗಳ ವಿತರಣೆ



ಮಹರ್ಷಿ ಶ್ರೀ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಮಂಜೂರಾಗಿರುವ ಸಬ್‌ಮರ್ಸಿಬಲ್ ಪಂಪು, ಮೋಟಾರುಗಳು ಹಾಗೂ ಪೈಪ್‌ಗಳನ್ನು 24 ಮಂದಿ ಫಲಾನುಭವಿಗಳಿಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ವಿತರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.08.2025 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** ಶ್ರೀ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ವಿಶೇಷ ಪೂಜೆ ಮತ್ತು ಪ್ರಸಾದ ವಿನಿಯೋಗ, ಸ್ಥಳ: ಕರಗ ದೇವಸ್ಥಾನ, ವಿದ್ಯಾರಣ್ಯಪುರಂ.
- **ಶ್ರೀ ಸೂತ್ರ ಆಯುರ್ಧಾಮ :** ವೆರಿಕೋಸ್ ಸಮಸ್ಯೆಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ :** ವಿವೇಕಯುತ ಸಂಸದೀಯ ಪಟು ವೈ. ರಾಮಕೃಷ್ಣ ಅವರ ಸಾಧನೆಗಳು ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ಕೇಂದ್ರ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ, ಮುಖ್ಯ ಅತಿಥಿಗಳು: ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಮಾಜಿ ಸಚಿವ ಬಿ. ಸೋಮಶೇಖರ್, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮಾಜಿ ಸಚಿವ ಎಂ.ಶಿವಣ್ಣ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ, ಪ್ರಾಸ್ತಾವಿಕ ನುಡಿ: ಪ್ರೊ.ಕೆ.ಸದಾಶಿವ, ಎಸ್.ಮೂರ್ತಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 2.30ಕ್ಕೆ.
- **ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ, ಬೆಳಗ್ಗೆ ಪಂಚಾಮೃತ ಅಭಿಷೇಕ, ಸಂಜೆ ಉತ್ಸವ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.
- **ಶ್ರೀ ಬಲಮುರಿ ಶಕ್ತಿ ಮಹಾಗಣಪತಿ ದೇವಾಲಯ, ಹುಡ್ಕೋ 1ನೇ ಹಂತ, ಬನ್ನಿಮಂಟಪ :** 35ನೇ ವಾರ್ಷಿಕೋತ್ಸವ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯ, ಬೆಳಗ್ಗೆ 7 ರಿಂದ ಪುಣ್ಯಾಹ ವಾಚನ, ಪಂಚಗವ್ಯ ಪೂಜೆ, ಶ್ರೀ ವರಮಹಾಲಕ್ಷ್ಮಿ ಸಹಿತ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ, ಸಂಜೆ 5.30 ರಿಂದ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಶ್ರೀ ಲಲಿತಾ ಮಹಾ ತ್ರಿಪುರ ಸುಂದರಿ ಸಹಸ್ರನಾಮ ಪಾರಾಯಣ, ರಾತ್ರಿ 8ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಾಲಯ, ಹುಡ್ಕೋ 1ನೇ ಹಂತ, ಬನ್ನಿಮಂಟಪ.
- **ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ :** ಬಲಗೈ ಸಮುದಾಯದ ಪ್ರಮುಖರ ಸಭೆ, ಅಧ್ಯಕ್ಷತೆ : ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಸ್ಥಳ: ಜಲದರ್ಶಿನಿ ಸಭಾಂಗಣ, ಸಂಜೆ 5ಕ್ಕೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಕಲಾ ಸುರುಚಿ :** ದೃಶ್ಯ ಕಥನ, ಅನಿಲ್ ಕುಮಾರ್ ಜಗಳೂರು ರಚಿಸಿರುವ ರೇಖಾ ಚಿತ್ರಗಳ ಪ್ರದರ್ಶನ, ಉದ್ಘಾಟನೆ : ಸ್ಮಿತಾ ಶಿವಸ್ವಾಮಿ, ಜಾರ್ಜ್ ಸುಪ್ರೀತ್, ಸ್ಥಳ: ಸುರುಚಿ ರಂಗ ಮನೆ, ಕುವೆಂಪುನಗರ, ಸಂಜೆ 6.30ಕ್ಕೆ.
- **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಶಿಬಿರದ ನಿರ್ದೇಶಕರು : ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ, ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ.ಎನ್. ಚಿಕ್ಕಮಾಧು, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಕೆ. ಬಿ. ಸುನೀತಾ ಆಚಾರ್ಯ ಮತ್ತು ಸಿ. ವಿಶ್ವನಾಥ್, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ– ವಿಶ್ವ ಹದಿಹರೆಯದವರ ದಿನದ ಧ್ಯೇಯವಾಕ್ಯ ಮತ್ತು ಹದಿಹರೆಯದವರ ಆರೋಗ್ಯ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಡಾ.ಅಕ್ಷತಾ ಎ. ಅವರೊಂದಿಗೆ ಮಾತುಕತೆ. ನಂತರ ಹದಿಹರೆಯದವರ ಮಾನಸಿಕ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಡಾ. ಗಜಾನನ ಸಭಾಹಿತ್ ಮತ್ತು ಅರ್ಚನಾ ಕಾರ್ತಿಕ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನಬಿಲ್ಲು–ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ವರಮಹಾಲಕ್ಷ್ಮಿ ಹಬ್ಬ ಕುರಿತು ಮೈಸೂರಿನ ಯಶಸ್ವಿನಿ ಮಹಿಳಾ ಸಂಘದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ, 4.30 ವೃತ್ತಿ ಮಾರ್ಗದರ್ಶನ – ಪಶುಸಂಗೋಪನೆ ಡಿಪ್ಲೋಮಾ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕು ಬರಗಿಯಲ್ಲಿರುವ ಸರ್ಕಾರಿ ಪಶುಸಂಗೋಪನಾ ಡಿಪ್ಲೋಮಾ ಕಾಲೇಜಿನ ಪ್ರಾಂಶುಪಾಲರಾದ ಡಾ. ರವಿಕುಮಾರ್.ಸಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹವಾಮಾನ ಮಿತ್ರ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, 7.20 ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ಸಂಸತ್ ಸಮೀಕ್ಷಾ, 8.15 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ನಷ್ಟದಲ್ಲಿ ಮೈಸೂರು ವಿಮಾನ ನಿಲ್ದಾಣ



- ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರುಳೀಧರ್ ಮೋಹಲ್ ಮಾಹಿತಿ
- ಮೈಸೂರು ಸೇರಿ ರಾಜ್ಯದ 4 ವಿಮಾನ ನಿಲ್ದಾಣದಿಂದ 560 ಕೋಟಿ ನಷ್ಟ

ಮೈಸೂರು, ಆ.7(ಬಿಎಲ್‌ಯು, ಆರ್‌ಕೆ, ಬಿಸಿಟಿ)– ಭಾರತೀಯ ವಿಮಾನಯಾನ ಪ್ರಾಧಿಕಾರದಿಂದ ಕಾರ್ಯನಿರ್ವಹಿಸುವ ಮೈಸೂರು ವಿಮಾನ ನಿಲ್ದಾಣವು ಕಳೆದ 10 ವರ್ಷಗಳ ಅವಧಿಯಲ್ಲಿ 73.03 ಕೋಟಿ ರೂಪಾಯಿ ನಷ್ಟ ಅನುಭವಿಸಿದೆ ಎಂಬ ಮಾಹಿತಿಯನ್ನು ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರುಳೀಧರ್ ಮೊಹಲ್ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಸಂಸದ ಜೆ.ಬಿ.ಮಾಥುರ್ ಹಿಶಾಮ್, ಭಾರತದಲ್ಲಿರುವ ವಿಮಾನ ನಿಲ್ದಾಣಗಳು ಕಾರ್ಯಾರಂಭ ಮಾಡಿದ್ದಾಗಿನಿಂದ ಇಲ್ಲಿವರೆಗಿನ ಆರ್ಥಿಕ ಕ್ಷಮತೆ ಸೇರಿದಂತೆ ನಷ್ಟದಲ್ಲಿರುವ ಬಗ್ಗೆ ವಿವರ ಕೇಳಿದ್ದರು.

ಈ ಸಂಬಂಧ ವಿವರ ನೀಡಿದ ಮುರುಳೀಧರ್ ಮೋಹಲ್ ಅವರು, ದೇಶದ ವಿಮಾನ ನಿಲ್ದಾಣಗಳ ಕಾರ್ಯಕ್ಷಮತೆ ಹಾಗೂ ನಷ್ಟದ ಬಗ್ಗೆ ವಿವರ ನೀಡಿದ್ದಾರೆ. ಅದರಲ್ಲಿ ಮೈಸೂರು ವಿಮಾನ ನಿಲ್ದಾಣವು 2015–16 ರಿಂದ 2024–25ರ ಅವಧಿಯಲ್ಲಿ 73.03 ಕೋಟಿ ನಷ್ಟ ಅನುಭವಿಸಿದೆ.

ಹಾಗಾದರೆ ಇಂತಹ ವಿಮಾನ ನಿಲ್ದಾಣಗಳನ್ನು ಮುಚ್ಚಲು, ಮರು ನಿರ್ಮಾಣ ಮಾಡಲು ಇಲ್ಲವೆ ಆರ್ಥಿಕ ನೆರವು ನೀಡಲು ಸರ್ಕಾರ ಮುಂದಾಗಿದೆಯೇ ಎಂದು ಮಾಥುರ್ ಹಿಶಾಮ್ ಪ್ರಶ್ನಿಸಿದರು.

ಈ ಬಗ್ಗೆ ಸ್ಪಷ್ಟ ಉತ್ತರ ನೀಡದ ಮುರುಳೀಧರ್ ಮೊಹಲ್ ಅವರು, 2024–25ರಲ್ಲಿ 81 ವಿಮಾನ ನಿಲ್ದಾಣಗಳು ನಷ್ಟದಲ್ಲಿವೆ. ಕಳೆದ ಹತ್ತು ವರ್ಷದ ಅವಧಿಯಲ್ಲಿ ಇಂತಹ ವಿಮಾನ ನಿಲ್ದಾಣಗಳಿಂದ 10,852 ಕೋಟಿ ನಷ್ಟವಾಗಿದೆ ಎಂದು ತಿಳಿಸಿದರು.

ಕರ್ನಾಟಕದ ಬೆಳಗಾವಿ, ಕಲಬುರ್ಗಿ, ಹುಬ್ಬಳ್ಳಿ ಮತ್ತು ಮೈಸೂರು ವಿಮಾನ ನಿಲ್ದಾಣಗಳಿಂದ ಕಳೆದ 10 ವರ್ಷದ ಅವಧಿಯಲ್ಲಿ 560 ಕೋಟಿ ನಷ್ಟವಾಗಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಅತಿ ಹೆಚ್ಚು ಅಂದರೆ 226.45 ಕೋಟಿ ನಷ್ಟವಾಗಿದೆ. ಬೆಳಗಾವಿ ನಿಲ್ದಾಣದಿಂದ 212.24 ಕೋಟಿ, ಕಲ್ಬುರ್ಗಿ ನಿಲ್ದಾಣದಿಂದ 48,54 ಕೋಟಿ ಹಾಗೂ ಮೈಸೂರು ನಿಲ್ದಾಣದಿಂದ 73.03 ಕೋಟಿ ನಷ್ಟವಾಗಿದೆ.

ಪ್ರಸ್ತುತ ದೇಶದಲ್ಲಿ 162 ವಿಮಾನ ನಿಲ್ದಾಣಗಳು ಕಾರ್ಯಾಚರಿಸುತ್ತಿವೆ ಇದರಲ್ಲಿ ಮೈಸೂರು ಸೇರಿದಂತೆ 81 ವಿಮಾನ ನಿಲ್ದಾಣಗಳು ನಷ್ಟದಲ್ಲಿವೆ. ಪ್ರಸ್ತುತ 22 ವಿಮಾನ ನಿಲ್ದಾಣಗಳಲ್ಲಿ ವಿಮಾನ ಹಾರಾಟ ಸ್ಥಗಿತಗೊಳಿಸಲಾಗಿದೆ ಎಂದು ಮುರುಳೀಧರ್ ಮೊಹಲ್ ಅವರು ಅಂಕಿ–ಅಂಶಗಳ ಸಹಿತ ರಾಜ್ಯಸಭೆಗೆ ಮಾಹಿತಿ ನೀಡಿದರು.

ಮೈಸೂರಿಂದ ಹೈದರಾಬಾದ್, ಚೆನ್ನೈಗೆ ಮಾತ್ರವೇ ಈಗ ವಿಮಾನ ಹಾರಾಟ

ಮೈಸೂರು ವಿಮಾನ ನಿಲ್ದಾಣದಿಂದ ವಿಮಾನಗಳ ಹಾರಾಟ ಗಮನಾರ್ಹವಾಗಿ ಕುಸಿದಿದೆ. ಮೈಸೂರಿನಿಂದ ಹೈದರಾಬಾದ್ ಹಾಗೂ ಚೆನ್ನೈಗೆ ಮಾತ್ರವೇ ಇಂಡಿಗೊ ವಿಮಾನಗಳು ಸಕ್ರಿಯವಾಗಿವೆ ಎಂದು ಮೈಸೂರು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ಮೈಸೂರು ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿದ ಸಂದರ್ಭದಲ್ಲಿ ಗೋವಾ, ಕೊಚ್ಚಿ, ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿ ಸೇರಿದಂತೆ ಇತರೆ ನಗರಗಳಿಗೆ ವಿಮಾನಗಳು ಹಾರಾಟ ನಡೆಸುತ್ತಿದ್ದವು. ಆದರೆ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಕುಸಿದ ಕಾರಣ ಒಂದೆರಡು ವರ್ಷದ ನಂತರ ಈ ಎಲ್ಲಾ ವಿಮಾನ ಹಾರಾಟವನ್ನು ವಿಮಾನಯಾನ ಸಂಸ್ಥೆಗಳು ಸ್ಥಗಿತಗೊಳಿಸಿದವು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣವಾದ ನಂತರ ಎರಡೂ ನಗರಗಳ ನಡುವಿನ ಪ್ರಯಾಣ ಸಮಯ ಕಡಿಮೆಯಾದ ಕಾರಣ ಬಹಳಷ್ಟು ಪ್ರಯಾಣಿಕರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕಾರು ಹಾಗೂ ಕೆಎಸ್‌ಆರ್‌ಟಿಸಿಯ ಫ್ಲೈ ಬಸ್‌ನಲ್ಲಿ ಪ್ರಯಾಣಿಸಿ ಅಲ್ಲಿಂದ ಬೇರೆ ನಗರ ಹಾಗೂ ದೇಶಗಳಿಗೆ ಹೋಗುತ್ತಿದ್ದಾರೆ. ಇದರಿಂದ ಮೈಸೂರಿನಿಂದ ಬೆಂಗಳೂರು ಮುಖೇನ ಬೇರೆ ನಗರಗಳಿಗೆ ಹೋಗುತ್ತಿದ್ದ ವಿಮಾನಗಳಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು.

ಖಾಸಗಿ ವಿಮಾನಯಾನ ಸಂಸ್ಥೆಗಳು ಮೈಸೂರು ವಿಮಾನ ನಿಲ್ದಾಣದಿಂದ ಕಾರ್ಯಾಚರಿಸಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಹಣ ಪಾವತಿ ಮಾಡುತ್ತಿದ್ದವು. ಇದಲ್ಲದೆ ಹಲವು ರೀತಿಯ ಖರ್ಚು–ವೆಚ್ಚಗಳನ್ನು ಭರಿಸಬೇಕಾಗಿತ್ತು. ಆದರೆ ಪ್ರಯಾಣಿಕರ ಸಂಖ್ಯೆ ಕಡಿಮೆಯಾದ ಹಿನ್ನೆಲೆಯಲ್ಲಿ ವಿಮಾನಗಳ ಹಾರಾಟದಲ್ಲಿ ನಷ್ಟ ಎದುರಾಯಿತು. ಜೊತೆಗೆ ಕೇಂದ್ರ ಸರ್ಕಾರದ ಸಬ್ಸಿಡಿ ಬೆಂಬಲ ಕೂಡ ಗಮನಾರ್ಹವಾಗಿ ಕಡಿಮೆಯಾಯಿತು. ಈ ಎಲ್ಲಾ ಕಾರಣಗಳಿಂದ ಖಾಸಗಿ ವಿಮಾನಯಾನ ಸಂಸ್ಥೆಗಳು ನಷ್ಟದ ಹಿನ್ನೆಲೆಯಲ್ಲಿ ಹಲವು ವಿಮಾನಗಳ ಹಾರಾಟವನ್ನು ಸ್ಥಗಿತಗೊಳಿಸಿತು.

ನಷ್ಟದ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ನಾಲ್ಕು ವಿಮಾನ ನಿಲ್ದಾಣಗಳಿಗೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಭದ್ರತಾ ಸಿಬ್ಬಂದಿ ರಕ್ಷಣೆಯನ್ನು ಉಚಿತವಾಗಿ ಕಲ್ಪಿಸಲಾಗಿದೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಮೂಲ ಸೌಕರ್ಯ ಕಲ್ಪಿಸಲು ಸಾಕಷ್ಟು ವೆಚ್ಚವಾಗುತ್ತಿದೆ. ವಿಮಾನ ನಿಲ್ದಾಣ ಆವರಣದ ನಿರ್ವಹಣೆ, ಸೌರ ವಿದ್ಯುತ್ ಬೇಲಿ, ವಾಯು ಸಂಚಾರ ನಿಯಂತ್ರಣ (ಎಟಿಸಿ) ಗೋಪುರ ಮತ್ತು ಅಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿಗೆ ವೇತನ, ಗುತ್ತಿಗೆ ಸಿಬ್ಬಂದಿಯ ಸಂಬಳ ನೀಡಲಾಗುತ್ತಿದೆ. ಇದರ ಮಧ್ಯೆ ದುಬಾರಿಯಾಗಿರುವ ಎಟಿಸಿ ಸಿಗ್ನಲ್ ಟವರ್ ಸಾಫ್ಟ್‌ವೇರ್ ಹೊರೆ ನಿರ್ವಹಣೆಯೂ ಹೆಚ್ಚಿದೆ. ಇಂತಹ ಹಲವು ವೆಚ್ಚಗಳು ಮೈಸೂರು ವಿಮಾನ ನಿಲ್ದಾಣದ ನಷ್ಟಕ್ಕೆ ಪ್ರಮುಖ ಕಾರಣವಾಗಿದೆ.

ವಾಣಿಜ್ಯ ಪೈಲಟ್ ಪರವಾನಗಿ (ಸಿಪಿಎಲ್) ಅಭ್ಯರ್ಥಿಗಳಿಗೆ ತರಬೇತಿ ನೀಡಲು ಮೈಸೂರು ವಿಮಾನ ನಿಲ್ದಾಣ ಬಳಕೆಯಾಗಲಿದ್ದು, ಓರಿಯಂಟ್ ಫ್ಲೈಟ್ಸ್ ಏವಿಯೇಷನ್ ಅಕಾಡೆಮಿಯಿಂದ ಮೈಸೂರು ವಿಮಾನ ನಿಲ್ದಾಣಕ್ಕೆ 2 ರಿಂದ 3 ಕೋಟಿ ಆದಾಯ ಬರುತ್ತಿದೆ ಇದರ ಜೊತೆಗೆ ವಾಣಿಜ್ಯ ವಿಮಾನಗಳನ್ನು ಪರಿಚಯಿಸಿದರೆ ಮೈಸೂರು ವಿಮಾನ ನಿಲ್ದಾಣಕ್ಕೆ ಸ್ವಲ್ಪ ಆದಾಯ ಬರಲಿದೆ. ಇಂತಹ ಆದಾಯದ ಪ್ರಮಾಣ ಹೆಚ್ಚು ಮಾಡಿಕೊಂಡರೆ ಮೈಸೂರು ವಿಮಾನ ನಿಲ್ದಾಣದ ನಷ್ಟ ಬಹಳಷ್ಟು ಕಡಿಮೆಯಾಗುವ ಸಾಧ್ಯತೆ ಇರುತ್ತದೆ.

ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಿಸುವ ಕಾರ್ಯ ಪ್ರಗತಿಯಲ್ಲಿದೆ. ರನ್ ವೇ ವಿಸ್ತರಣೆಗೆ ಅವಶ್ಯವಿರುವ ಭೂಸ್ವಾಧೀನ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಈ ಎಲ್ಲಾ ಪ್ರಕ್ರಿಯೆ ಮುಗಿದರೆ ಕೇಂದ್ರ ಸರ್ಕಾರ ರನ್ ವೇ ವಿಸ್ತರಣೆಗೆ ಹಸಿರು ನಿಶಾನೆ ತೋರಲಿದೆ. ಚಾರ್ಟೆರ್ಡ್ ಫ್ಲೈಟ್, ವಾಣಿಜ್ಯ ಬಳಕೆಯ ವಿಮಾನ ಸೇರಿದಂತೆ ಬೋಯಿಂಗ್ ವಿಮಾನಗಳು ಹಾರಾಟ ನಡೆಸಿದರೆ ಮೈಸೂರು ವಿಮಾನ ನಿಲ್ದಾಣದಿಂದ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಲಿದ್ದು, ಆಗ ಮೈಸೂರು ವಿಮಾನ ನಿಲ್ದಾಣ ನಷ್ಟದಿಂದ ಮುಕ್ತವಾಗುತ್ತದೆ.

ಧರ್ಮಸ್ಥಳದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ

ತಪ್ಪಿತಸ್ಥರ ವಿರುದ್ಧ ಕ್ರಮ: ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಆ.7– ಧರ್ಮಸ್ಥಳದಲ್ಲಿ ಎರಡು ಗುಂಪುಗಳ ನಡುವಿನ ಘರ್ಷಣೆಗೆ ಕಾರಣರಾದವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೇ ತಪ್ಪು ಮಾಡಿದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿರುವ ನಡುವೆ ಬುಧವಾರ ಸಂಜೆ ಧರ್ಮಸ್ಥಳದಲ್ಲಿ ವ್ಯಕ್ತಿಯೊಬ್ಬರನ್ನು ಸಂದರ್ಶಿಸುತ್ತಿದ್ದಾಗ ಕ್ಯಾಮರಾಮನ್ ಸೇರಿದಂತೆ ಮೂವರು ಯೂಟ್ಯೂಬ್ ಚಾನೆಲ್‌ಗಳನ್ನು ಪ್ರತಿನಿಧಿಸುವ ವ್ಯಕ್ತಿಗಳ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಧರ್ಮಸ್ಥಳ ಗ್ರಾಮದ ಪಾಂಗಾಳ ಗ್ರಾಮದ ರಸ್ತೆ ಬಳಿ ಯೂಟ್ಯೂಬರ್‌ಗಳ ಮೇಲೆ ನಡೆದ ಹಲ್ಲೆ ನಂತರ, ಎರಡು ಗುಂಪುಗಳು ಪರಸ್ಪರ ನಿಂದನೆ ಮತ್ತು ಕಲ್ಲು ತೂರಾಟ ನಡೆಸಲು ಪ್ರಾರಂಭಿಸಿದವು. ಪೊಲೀಸರು ಗುಂಪನ್ನು ಚದುರಿಸಲು ಪ್ರಯತ್ನಿಸಿದರು. ಆದರೆ, ಉಲ್ಬಣಗೊಳ್ಳುವ ಪರಿಸ್ಥಿತಿ ಉಂಟಾದಾಗ ಲಘು ಲಾಠಿ ಪ್ರಹಾರ ನಡೆಸಿದ್ದರು.

ಧರ್ಮಸ್ಥಳ ಪೊಲೀಸ್ ಠಾಣೆಯ ಮುಂದೆ ರಾತ್ರಿ ವೇಳೆ ಗುಂಪೊಂದು ಪವಿತ್ರ ಸ್ಥಳದ ಪ್ರತಿಷ್ಠೆಗೆ ಕಳಂಕ ತರುವ ಜನರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿತು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಈ ಕೆಳಗೆ ಉದಾಹರಿಸಿರುವ ಷೆಡ್ಯೂಲ್ ಸ್ವತ್ತಿನ ಸಂಖ್ಯೆ 1, ಖಾತೆ ಜಂಜರ್ ಸಂಖ್ಯೆ–831/1/1 ಯೂನಿಕ್ ಸಂಖ್ಯೆ: 152200427134022763 ಸ್ವತ್ತನ್ನು ಪಿ. ಚೆಲುವರಾಜು ಬಿನ್ ಪುಟ್ಟಸ್ವಾಮಿಗೌಡ, ಜಟ್ಟಿಗುಂಡಿ ಗ್ರಾಮದ ವಾಸಿ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಮೂಲತಃ ಅನುಸೂಚಿ ಸ್ವತ್ತು ಸರ್ವೆ ನಂ: 72/1 ಕುಮಾರಬೀಡು ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ದ್ಯಾವ ನಾಯಕ ಬಿನ್ ರಾಮ ನಾಯಕರವರಿಗೆ ಸೇರಿದ್ದು, ಅವರ ಮರಣ ನಂತರ ಅವರ ಮಕ್ಕಳುಗಳಾದ ಕೆಂಡಗಣ್ಣ ನಾಯಕ, ಬಸವರಾಜ ನಾಯಕ, ದೇವ ನಾಯಕ, ಅಮಾಸೇನಾಯಕ ಮತ್ತು ರಾಮು ನಾಯಕರುಗಳು ಮಾಡಿಕೊಂಡ ಬಾಯಿ ಮಾತಿನ ಮೂಲಕದ ವಿಭಾಗಪತ್ರದ ಸ್ವಾಧೀನಾನುಭವಕ್ಕೆ ಒಳಪಟ್ಟ ಸ್ವತ್ತಾಗಿರುತ್ತದೆ. ನಂತರದಲ್ಲಿ ಸರ್ವೆ ನಂಬರ್ 72/1 5 ಪೋಡಿಗಳಾಗಿ ವಿಂಗಡಣೆಯಾಗಿ ಸರ್ವೆ ನಂಬರ್ 72/1, 72/3, 72/4. 72/5, 72/6 ಆಗಿ ವಿಭಜನೆಯಾದ ನಂತರ ದಿನಾಂಕ: 24–10–2019 ರಂದು ಮೇಲೆ ಹೇಳಿದ ಕೆಂಡಗಣ್ಣ ನಾಯಕರ ಧರ್ಮಪತ್ನಿಯಾದ ಚಿಕ್ಕಮ್ಮ, ಅಮಾ ಸೇನಾಯಕ, ರಾಮಾ ನಾಯಕ, ದಿವಂಗತ ದೇವ ನಾಯಕರವರ ಸೊಸೆಯಾದ ಚಿಕ್ಕಮ್ಮ ಮತ್ತು ಅವರ ಮಕ್ಕಳುಗಳಾದ ಲೀಲಾವತಿ, ರಮೇಶ ಬಿ. ಮತ್ತು ದೇವ ನಾಯಕ ಹಾಗೇಯೇ ದಿವಂಗತ ದ್ಯಾವ ನಾಯಕರ ಹೆಣ್ಣು ಮಕ್ಕಳಾದ ಪುಟ್ಟಸಿದ್ದಮ್ಮ, ಮರದೇವಮ್ಮ ಮತ್ತು ಕೆಂಪಮ್ಮ ರವರೊಡನೆ ಆದ ನೋಂದಾಯಿತ ವಿಭಾಗ ಪತ್ರದ ಅನ್ವಯ ಅಮಾಸೇನಾಯಕ ರವರ ಪಾಲಿಗೆ ಸರ್ವೆ ನಂ: 72/1, 72/3, 72/4, 72/5, 72/6 ಬಂದಿರುತ್ತದೆ. ದಿನಾಂಕ: 19–03–2020ರಂದು ಅಮಾಸೇನಾಯಕ ತಮ್ಮ ಕುಟುಂಬದವರೊಂದಿಗೆ ಸೇರಿ ಮೇಲೆ ಹೇಳಿದ ಸರ್ವೆ ನಂಬರ್‌ಗಳನ್ನು ಚೆಲುವರಾಜು ಪಿ. ರವರಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದು, ನಂತರದಲ್ಲಿ ಸದರಿ ಚೆಲುವರಾಜು ಪಿ. ರವರು ದಿನಾಂಕ: 07–12–2020 ರ ಅರ್ಜಿ ಸಂಖ್ಯೆ: 187987 ರಂತೆ ಮೈಸೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದೇಶವನ್ನು ಪಡೆದಿರುತ್ತಾರೆ. ನಂತರದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದಿತ ನಕ್ಷೆಯನ್ನು ಪಡೆದು ಬಡಾವಣೆ ನಿರ್ಮಿಸಿರುತ್ತಾರೆ.

ಮೇಲೆ ಹೇಳಿದ ಕ್ರಯಕ್ಕೆ ದಿವಂಗತ ದ್ಯಾವ ನಾಯಕ ಇವರ ಕುಟುಂಬದವರಾಗಲಿ, ಅಮಾಸೇನಾಯಕ ಇವರ ಕುಟುಂಬದವರಾಗಲಿ, ದಿವಂಗತ ಕೆಂಡಗಣ್ಣ ನಾಯಕ ಇವರ ಕುಟುಂಬದವರಾಗಲಿ, ದೇವ ನಾಯಕ ಇವರ ಕುಟುಂಬದವರಾಗಲಿ ಯಾವಾರಸುದಾರರಾಗಲಿ, ಇದ್ದಲ್ಲಿ ಇತರೆ ಸಾರ್ವಜನಿಕರಾಗಲಿ, ಬೇರೆ ಯಾರಾದರೂ ಆಸಕ್ತಿ ಮತ್ತು ಕ್ರಯದ ಕರಾರು, ಜಪ್ತಿ, ಆದೇಶಗಳು ಇದ್ದಲ್ಲಿ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿಗೆ ತಕರಾರನ್ನು ಪತ್ರಿಕಾ ಪ್ರಕಟಣೆಯಾದ 7 ದಿನಗಳೊಳಗಾಗಿ ಸಂಬಂಧಪಟ್ಟ ದಾಖಲೆಯೊಂದಿಗೆ ಕಳುಹಿಸಿಕೊಡಬೇಕಾಗಿ ನೀಡಿರುವ ಪ್ರಕಟಣೆ. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಾರೆ. ನಂತರದಲ್ಲಿ ಬರುವ ತಕರಾರನ್ನು ಮಾನ್ಯ ಮಾಡುವುದಿಲ್ಲವೆಂದು ತಿಳಿಯಬಯಸುತ್ತೇವೆ.

ಅನುಸೂಚಿ: ಮೈಸೂರು ತಾಲ್ಲೂಕು, ನಗರ, ಇಲವಾಲ ಹೋಬಳಿ, ಕುಮಾರಬೀಡು ಗ್ರಾಮದ ನಿವೇಶನ ಸಂಖ್ಯೆ 1, ಖಾತೆ ಜಂಜರ್ ಸಂಖ್ಯೆ: 831/1/1 ಯೂನಿಕ್ ಸಂಖ್ಯೆ: 152200427134022763 ಸುತ್ತಳತೆ ಪೂರ್ವ ಪಶ್ಚಿಮ 6.50+6.68/2 ಮೀಟರ್, ಉತ್ತರ ದಕ್ಷಿಣ: 14.48+14.34/2 ಮೀಟರ್ ಒಟ್ಟು 94.96 ಚದರ ಮೀಟರ್ ಇದಕ್ಕೆ ಚೆಕ್ಕುಬಂಧಿ; ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸರ್ವೇ ನಂ: 71/7ರ ಉಳಿಕೆ ಜಮೀನು, ದಕ್ಷಿಣಕ್ಕೆ: ಸರ್ವೇ ನಂ: 71ರ ಜಮೀನು, ಉತ್ತರಕ್ಕೆ: ರಸ್ತೆ.

ಸಹಿ/– ಸುಬ್ರಮಣ್ಯ ಜೆ., ವಕೀಲರು.
ಕಛೇರಿ: 890/4, ಮೊದಲನೇ ಮಹಡಿ ಮೂರನೇ ಹಂತ, 1ನೇ ಮೈನ್, ಲಕ್ಷ್ಮೀಪುರಂ, ಮೈಸೂರು–570004.
Date: 7-8-2025 Mob: 9844154581



ಬದುಕಿದ್ದ ಮಹಿಳೆ ಸತ್ತಳೆಂದು ದಾಖಲೆ ಸೃಷ್ಟಿ!

ಧರ್ಮಸ್ಥಳ ಪ್ರಕರಣ ತನಿಖೆಗೆ ರಚಿತ ಎಸ್‌ಐಟಿಯಿಂದ ಜಿತೇಂದ್ರ ಕುಮಾರ್ ದಯಮ ಕೈಬಿಡಲು ಆಗ್ರಹ

ಗೃಹ ಸಚಿವರು, ಡಿಜಿ, ಸಿಎಸ್‌ಗೆ ಮೈಸೂರು ವಕೀಲ ಪಾಂಡು ಪೂಜಾರಿ ಪತ್ರ

ಮೈಸೂರು, ಆ.7–ಧರ್ಮಸ್ಥಳದಲ್ಲಿ ಶವಗಳನ್ನು ಹೂತಿರುವ ಪ್ರಕರಣದ ತನಿಖೆಗಾಗಿ ರಚಿಸಿರುವ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಐಪಿಎಸ್ ಅಧಿಕಾರಿ ಜಿತೇಂದ್ರ ಕುಮಾರ್ ದಯಮ ಅವರನ್ನು ಕೈಬಿಡಬೇಕೆಂದು ಮೈಸೂರಿನ ಹಿರಿಯ ವಕೀಲ ಬಿ.ಎಸ್.ಪಾಂಡು ಪೂಜಾರಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಗೃಹ ಸಚಿವರು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಮೈಸೂರು ಜಿಲ್ಲೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಜಿತೇಂದ್ರ ಕುಮಾರ್ ಅವರು ಪ್ರೊಬೇಷನರಿ ಎಎಸ್‌ಪಿ ಆಗಿ ಕಾರ್ಯನಿರ್ವಹಿಸುತ್ತಿದ್ದ ವೇಳೆ ಅಸ್ಥಿಪಂಜರವೊಂದು ದೊರೆತ ಪ್ರಕರಣದಲ್ಲಿ ಸುರೇಶ್ ಅಲಿಯಾಸ್ ಕುರುಬ ಸುರೇಶ್ ಎಂಬಾತ ತನ್ನ ಪತ್ನಿಯನ್ನೇ ಹತ್ಯೆ ಮಾಡಿದ್ದಾನೆ ಎಂದು ಆತನ ವಿರುದ್ಧ ವರದಕ್ಷಿಣೆ ಕಿರುಕುಳ ಹಾಗೂ ಕೊಲೆ ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣದಲ್ಲಿ ಪಿರಿಯಾಪಟ್ಟಣ ಠಾಣೆಯ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಅವರು ಸುರೇಶ್ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು. ಆದರೆ ಕೊಲೆಗೀಡಾಗಿದ್ದಾಳೆ ಎನ್ನಲಾದ ಮಹಿಳೆ ಜೀವಂತವಿದ್ದು, ನ್ಯಾಯಾಲಯದ ಮುಂದೆ ಹಾಜರಾಗಿದ್ದಾಳೆ. ಸುಳ್ಳು ಪ್ರಕರಣದಲ್ಲಿ ಜೈಲು ಸೇರಿದ್ದ ಆತನ ಪತಿ ನಂತರ ಬಿಡುಗಡೆಯಾಗಿದ್ದಾನೆ.

ಆ ಪ್ರಕರಣದಲ್ಲಿ ಜಿತೇಂದ್ರ ಕುಮಾರ್, ಬಿ.ಜಿ.ಪ್ರಕಾಶ್, ಮಹೇಶ್ ಕುಮಾರ್ ಮತ್ತು ಪ್ರಕಾಶ್ ಎತ್ತಿನಮಣಿ ಅವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ. ಮೈಸೂರಿನ 5ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಜಿತೇಂದ್ರ ಕುಮಾರ್ ವಿರುದ್ಧ ಇಲಾಖಾ ಕ್ರಮ ಕೈಗೊಳ್ಳುವಂತೆ ದಕ್ಷಿಣ ವಲಯ ಐಜಿಪಿಯವರಿಗೆ ನ್ಯಾಯಾಧೀಶರು ನಿರ್ದೇಶನ ನೀಡಿದ್ದರೂ ಇದುವರೆವಿಗೂ ಅವರ ವಿರುದ್ಧ ಯಾವುದೇ ಕ್ರಮವಾಗಿಲ್ಲ. ಧರ್ಮಸ್ಥಳ ಪ್ರಕರಣದ ತನಿಖೆಗಾಗಿ ರಚಿಸಿರುವ ಎಸ್‌ಐಟಿಯಲ್ಲಿ ಇಂತಹ ಅಧಿಕಾರಿ ಇರುವುದು ಸರ್ಕಾರಕ್ಕೆ ಮತ್ತು ಪೊಲೀಸ್ ಇಲಾಖೆ ಘನತೆಗೆ ಧಕ್ಕೆ ತರುವಂತಹದ್ದಾಗಿದೆ. ಆದ್ದರಿಂದ ಜಿತೇಂದ್ರ ಕುಮಾರ್ ಅವರನ್ನು ಎಸ್‌ಐಟಿಯಿಂದ ಕೈಬಿಟ್ಟು ನ್ಯಾಯಾಲಯದ ಆದೇಶದಂತೆ ಇಲಾಖೆ ತನಿಖೆ ನಡೆಸಬೇಕೆಂದು ವಕೀಲ ಪಾಂಡು ಪೂಜಾರಿ ಕೋರಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ.

ಗುಂಡ : ಇನ್ಸ್‌ಪೆಕ್ಟರ್ ಸಾಹೇಬ್ರೆ ನನಗೆ ಫೋನ್‌ನಲ್ಲಿ ಬೆದರಿಕೆ ಬರ್ತಾ ಇದೆ.

ಇನ್ಸ್‌ಪೆಕ್ಟರ್ : ಯಾರು ಬೆದರಿಕೆ ಹಾಕ್ತಿರೋದು?

ಗುಂಡ : ಕರೆಂಟ್‌ನವರು...! ಬಿಲ್ ಕಟ್ಟದಿದ್ದರೆ ಕಟ್ ಮಾಡ್ತೀವಿ ಅಂತಾರೆ...!

ಮೈಸೂರು ಮಿತ್ರ

ಶುಕ್ರವಾರ, 8 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಮ್ಮ ವ್ಯಕ್ತಿತ್ವ ಮಹಾರಾಜನಂತೆ ಇರಲಿ. ಅಹಂಕಾರ ಸೇವಕನಂತೆ ಇರಲಿ. ಆಗ ನಾವು ಯಶಸ್ಸಿನ ರಾಜ್ಯವನ್ನೇ ಕಟ್ಟಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯೋದೆಲ್ಲ ಚಿನ್ನ ಅಲ್ಲ

ನಿಮ್ಮ ಪತ್ರಗಳು

■ ಚಾಲಕರ, ನಿರ್ವಾಹಕರ ಆರ್ತನಾದ ಆಲಿಸಿ

ಮಾನ್ಯರೆ,

ಕೆಎಸ್‌ಆರ್‌ಟಿಸಿ ನೌಕರರು ಅದರಲ್ಲೂ ಚಾಲಕರು ಮತ್ತು ನಿರ್ವಾಹಕರು ತಮ್ಮ ಜೀವನವನ್ನು ಸಾರ್ವಜನಿಕ ಸೇವೆಗೆ ಮುಡಿಪಾಗಿಟ್ಟಿದ್ದಾರೆ ಎಂದರೆ ತಪ್ಪಾಗಲಾರದು. ಅಹರ್ನಿಶಿ ರಾಜ್ಯದ ಸಾರಿಗೆ ಏಳಿಗೆಗೆ ಶ್ರಮಿಸುತ್ತಿದ್ದಾರೆ. ದಿನಕ್ಕೆ 12 ರಿಂದ 16 ಗಂಟೆಗಳವರೆಗೆ ನಿರಂತರವಾಗಿ ಚಾಲನೆ ಮಾಡುವ ಈ ನೌಕರರು ತಮ್ಮ ಕುಟುಂಬಗಳಿಂದ ದೂರವಿದ್ದು, ತಮ್ಮ ಮಕ್ಕಳ ಭವಿಷ್ಯಕ್ಕಾಗಿ ದುಡಿಯುತ್ತಿದ್ದಾರೆ. ಆದರೆ, ಈ ಶ್ರಮ ಮತ್ತು ನಿಷ್ಠೆಗೆ ಸರ್ಕಾರದಿಂದ ಸಮರ್ಪಕ ಗೌರವ ಸಿಗುತ್ತಿಲ್ಲ ಎಂಬುದು ಅತ್ಯಂತ ದುಃಖದ ಸಂಗತಿ.

ಆಡಳಿತ ಸರ್ಕಾರ ಉನ್ನತ ಅಧಿಕಾರಿಗಳ ಮನೆಗಳಿಗೆ ಉಚಿತ ವಿದ್ಯುತ್, ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣ ಸೇರಿದಂತೆ ಅನೇಕ ಭಾಗ್ಯಗಳನ್ನು ನೀಡುತ್ತಿರುವಾಗ, ಬಡ ಮತ್ತು ಮಧ್ಯಮ ವರ್ಗದ ಕೆಎಸ್‌ಆರ್‌ಟಿಸಿ ನೌಕರರಿಗೆ ಕಾಲಮಿತಿಯೊಳಗಾಗಿ ವೇತನವೂ ನೀಡಲಾಗುವುದಿಲ್ಲ ಎಂದರೆ ಅದು ಅಮಾನವೀಯತೆಯೇ ಸರಿ. ಕೆಎಸ್‌ಆರ್‌ಟಿಸಿ ನೌಕರರು ಅದರಲ್ಲೂ ಚಾಲಕರು ಮತ್ತು ನಿರ್ವಾಹಕರು ವಾಹನಗಳಲ್ಲಿ ತಾಂತ್ರಿಕ ತೊಂದರೆಗಳಾಗಲೀ ಅಥವಾ ಪ್ರಯಾಣದ ಸಮಯದಲ್ಲಿ ಸಾರ್ವಜನಿಕರು ತೋರುವ ಕೋಪವಾಗಲೀ, ಅಸಭ್ಯ ವರ್ತನೆ ಎಲ್ಲವನ್ನೂ ಸಹಿಸಿಕೊಳ್ಳಬೇಕು. ಅಂತರರಾಜ್ಯ ಪ್ರಯಾಣ ಸಂದರ್ಭದಲ್ಲಿ ಬಸ್‌ಗಳಲ್ಲಿ ಮಲಗಬೇಕಾದ ಪರಿಸ್ಥಿತಿ. ಬಸ್‌ನಲ್ಲಿ ವಿಶ್ರಾಂತಿ ಪಡೆಯುವಾಗ ಅನೈರ್ಮಲ್ಯದಿಂದ ಉತ್ಪತ್ತಿಯಾಗುವ ಸೊಳ್ಳೆಗಳ ಕಾಟ ಹಾಗೂ ದೂರದ ಊರಲ್ಲಿ ಶೌಚಾಲಯವಿಲ್ಲದೆ ತೊಂದರೆ, ಕುಡಿಯುವ ನೀರಿನ ಕೊರತೆ, ತುರ್ತು ವೈದ್ಯಕೀಯ ಸೌಲಭ್ಯಗಳ ಲಭ್ಯತೆ ಇಲ್ಲದ ಪರಿಸ್ಥಿತಿ ಎಲ್ಲವನ್ನೂ ಅನುಭವಿಸುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಸಮಯಕ್ಕೆ ವೇತನ ಸಿಗದ ಕಾರಣ ಮಕ್ಕಳ ವಿದ್ಯಾಭ್ಯಾಸದ ಶುಲ್ಕ, ಮನೆ ಬಾಡಿಗೆ, ವೈದ್ಯಕೀಯ ವೆಚ್ಚ ಇತ್ಯಾದಿಗಳನ್ನು ನಿಭಾಯಿಸಲು ಕಷ್ಟಸಾಧ್ಯ ಎನ್ನಬಹುದು. ಇನ್ನು ಇದರಲ್ಲಿ ಸಿಲುಕಿ ನೌಕರರು ಸಾಲದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇಷ್ಟು ಶ್ರಮದ ಬಳಿಕವೂ ಸರ್ಕಾರ ಬಾಕಿ ವೇತನ ನೀಡಲು ತಾತ್ಸಾರ ತೋರುತ್ತಿರುವುದು ಅಮಾನುಷ. ಇದು ನೌಕರರ ಆತ್ಮಾಭಿಮಾನದ ವಿರುದ್ಧವಾದ ನಡೆ. ಹಾಗಾಗಿ ಸರ್ಕಾರ ತಕ್ಷಣವೇ ಕೆಎಸ್‌ಆರ್‌ಟಿಸಿ ನೌಕರರಿಗೆ ಬಾಕಿ ವೇತನ ಬಿಡುಗಡೆ ಮಾಡಬೇಕು. ಅವರ ಜೀವನೋಪಾಯಕ್ಕೆ ಅನುವು ಮಾಡಿಕೊಡಬೇಕು. ಇಲ್ಲವಾದರೆ ಸರ್ಕಾರದ ನೈತಿಕತೆ ಹಾಗೂ ಸಾಮರ್ಥ್ಯದ ಪ್ರಶ್ನೆ ಉದ್ಭವಿಸುತ್ತದೆ ಎಂದರೆ ತಪ್ಪಾಗಲಾರದು.

–ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.

■ ಪ್ರಕೃತಿ ವಿಕೋಪಗಳಿಗೆ ಎಚ್ಚೆತ್ತುಕೊಳ್ಳದ ಮನುಷ್ಯ!!

ಮಾನ್ಯರೇ

ಇತ್ತೀಚಿನ ದಿನಗಳಲ್ಲಿ ಮನುಷ್ಯ ತನ್ನ ಹಿತ ಮತ್ತು ಸ್ವಾರ್ಥಕ್ಕಾಗಿ ಹಣದ ಹಿಂದೆ ಓಡುತ್ತಿದ್ದಾನೆ. ಮಾನವೀಯತೆ ಮೌಲ್ಯಗಳ ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿದೆ. ಆಗಾಗ ಸುನಾಮಿಯಂತಹ ಪ್ರಕೃತಿ ವಿಕೋಪ, ಭೂಕಂಪನ, ಜಲಪ್ರಳಯ, ಕೊರೊನಾ ಹೀಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೊಟ್ಟಿತು. ಇದನ್ನು ಅರಿತುಕೊಂಡು ಸೋದರತ್ವ, ಸಹಬಾಳ್ವೆಯಿಂದ ಬಾಳಬೇಕಾದ ಸಮಯ ಮನುಷ್ಯನ ಮುಂದಿದೆ. ಇದನ್ನು ಅರಿತುಕೊಳ್ಳದೆ ತನ್ನ ದುರಾಸೆಯಿಂದ ಹಣದ ಹಿಂದೆ ಓಡುತ್ತಿದ್ದಾನೆ. ಸರ್ಕಾರಿ ಕೆಲಸಗಳಲ್ಲಿ ಕೆಲವು ಅಧಿಕಾರಿಗಳ ಭ್ರಷ್ಟಾಚಾರ, ಭೂ ಕಬಳಿಕೆಗಳು, ಅತ್ಯಾಚಾರ, ಅನಾಚಾರ ಹಾಗೂ ಲಂಚಾವತಾರ, ಅಧರ್ಮದ ಕೆಲಸಗಳು, ಜಾತಿ ಕಲಹಗಳನ್ನು ಮಾಡಿಕೊಂಡು ಹೋಗುತ್ತಿರುವ ಮನಸ್ಸುಗಳಿಗೆ ಯಾವ ರೀತಿ ಎಚ್ಚರಿಸಬೇಕು.

– ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

■ ಭಾರತದ ಬಗ್ಗೆ ಟ್ರಂಪ್ ನಡೆ ಆಕ್ಷೇಪಾರ್ಹ

ಮಾನ್ಯರೆ,

ಭಾರತದ ಮೇಲೆ 24 ತಾಸಿನಲ್ಲಿ ಇನ್ನಷ್ಟು ಸುಂಕ ವಿಧಿಸಲಾಗಿದೆ. ರಷ್ಯಾದಿಂದ ತೈಲ ಖರೀದಿಸುವ ಭಾರತದ ನಿರ್ಧಾರವನ್ನು ಪ್ರಶ್ನಿಸಿರುವ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ನಡೆ ಖಂಡನೀಯ. ಏಕೆಂದರೆ ಸಾರ್ವಭೌಮ ರಾಷ್ಟ್ರಗಳು ತಮ್ಮದೇ ಆದ ವ್ಯಾಪಾರ ಪಾಲುದಾರರನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಹೊಂದಿವೆ. ಈ ನಿಟ್ಟಿನಲ್ಲಿ ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ನಿರ್ಧಾರವನ್ನು ಪ್ರಶ್ನಿಸುವುದಕ್ಕೆ ಅಮೆರಿಕ ಯಾವ ನೈತಿಕತೆಯನ್ನು ಹೊಂದಿಲ್ಲ. ಹೀಗಾಗಿ ಭಾರತದ ಮೇಲೆ ಟ್ರಂಪ್ ಅವರ ಸುಂಕ ಬೆದರಿಕೆ ಅಸಮರ್ಥನೀಯ ಹಾಗೂ ಆಕ್ಷೇಪಾರ್ಹ.

ಭಾರತ ಕೂಡ ಟ್ರಂಪ್ ಅವರ ಸುಂಕ ಬೆದರಿಕೆಗೆ ಸೊಪ್ಪು ಹಾಕದೆ ದೇಶದ ಆರ್ಥಿಕ ಭದ್ರತೆ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಏನೆಲ್ಲಾ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಭಾರತವು ಮುಂದಿಡುವ ಹೆಜ್ಜೆಗಳಿಗೆ ನಾವೆಲ್ಲರೂ ಸ್ಪಂದಿಸುವ ಹಾಗೂ ಬೆಂಬಲಿಸುವ ಅಗತ್ಯತೆ ಇದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಇವಕ್ಕೆ ಪರಿಹಾರವೇನು?

ಮಾನ್ಯರೆ,

ಸಂಸತ್ತಿನ ಅಧಿವೇಶನ ನಡೆಯುತ್ತಿರುವಾಗಲೇ ದೆಹಲಿಯ ಚಾಣಕ್ಯಪುರಿಯಲ್ಲಿ 4.8.25ರ ಬೆಳಿಗ್ಗೆ ವಾಯುವಿಹಾರ ಮಾಡುತ್ತಿದ್ದ ತಮಿಳುನಾಡಿನ ಸಂಸದೆ ಆರ್.ಸುಧಾ ಅವರ ಸರವನ್ನು ಕಳ್ಳರು ಅಪಹರಣ ಮಾಡಿಕೊಂಡು ಹೋಗಿರುವುದು 5.8.25.ರ ಪತ್ರಿಕೆಗಳಲ್ಲಿ ವರದಿಯಾಗಿದೆ. ಕಳ್ಳರಿಗೆ ಅವರು ಯಾರು ಎನ್ನುವುದಕ್ಕಿಂತ ಕುತ್ತಿಗೆಯಲ್ಲಿ ಧರಿಸಿರುವ ಚಿನ್ನದ ಸರ ಮುಖ್ಯ. ದೇಶದ ರಾಜಧಾನಿ ದೆಹಲಿಯಲ್ಲೇ ಜನಪ್ರತಿನಿಧಿಗಳ ಸರವನ್ನೇ ಕಿತ್ತುಕೊಂಡು ಹೋಗಿದ್ದಾರೆ ಎಂದರೆ ಇನ್ನು ಯಾವುದೇ ರಕ್ಷಣೆ ಇಲ್ಲದ ಜನಸಾಮಾನ್ಯರ ಪಾಡೇನು? ಗಾಂಧಿ ಹೇಳಿದ ಮಧ್ಯರಾತ್ರಿಯಲ್ಲಿ ಯಾವ ಆತಂಕವೂ ಇಲ್ಲದೆ ಒಬ್ಬಂಟಿ ಮಹಿಳೆಯರು ಓಡಾಡುವ ಕಾಲ ಬರುವುದು ಯಾವಾಗ? ಭದ್ರತಾ ವ್ಯವಸ್ಥೆ ಆಧುನೀಕರಣಗೊಂಡಿದ್ದರೂ ಅಪರಾಧ ಸಂಖ್ಯೆಗಳು ಹೆಚ್ಚುತ್ತಲೇ ಇವೆ. ಉದ್ಯೋಗ ಅವಕಾಶಗಳು ಹೆಚ್ಚುತ್ತಲೇ ಇದ್ದರೂ ನಿರುದ್ಯೋಗ ಸಮಸ್ಯೆಗಳು ಕಾಡುತ್ತಲೇ ಇವೆ. ಇವಕ್ಕೆ ಪರಿಹಾರವೇನು?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ವರದಾನಕ್ಕಾಗಿ ವರಮಹಾಲಕ್ಷ್ಮೀ ವ್ರತ!



ಭಗವಾನ್ ವಿಷ್ಣುವಿನ ಆಜ್ಞೆಯಂತೆ ಅಮೃತವನ್ನು ಪಡೆಯಲು ಸಮುದ್ರ ಮಂಥನ ಮಾಡಲು ರಾಕ್ಷಸರು ಹಾಗೂ ದೇವತೆಗಳು ಮಂದಾರ ಪರ್ವತವನ್ನು ಕಡೆಗೋಲಾಗಿ ಮಾಡಿಕೊಂಡು ವಾಸುಕಿಯ ಸಹಾಯದೊಂದಿಗೆ ಸಮುದ್ರವನ್ನು ಕಡೆಯುತ್ತಿರುವಾಗ ಕ್ಷೀರಸಾಗರದಲ್ಲಿ ಪರಿಶುದ್ಧವಾಗಿ ಶ್ವೇತವರ್ಣದಲ್ಲಿ ಮಹೇಂದ್ರನ ಸಂಪತ್ಸ್ವರೂಪಿಣಿಯಾದ ಮಹಾಲಕ್ಷ್ಮಿಯ ಜನನವಾಗಿ, ದೇವತೆಗಳನ್ನು ಅನುಗ್ರಹಿಸಿದ್ದಲ್ಲದೇ, ಮಹಾವಿಷ್ಣುವನ್ನು ವರಿಸುತ್ತಾಳೆ.

ಹಿಂದೂ ಸಂಪ್ರದಾಯದಲ್ಲಿ ಪ್ರತೀ ಹಬ್ಬವೂ ಒಂದು ನಿರ್ದಿಷ್ಟ ಮಾಸದ ನಕ್ಷತ್ರ ಅಥವಾ ತಿಥಿಯಂದು ಆಚರಿಸಿದರೆ, ಕೆಲವು ಹಬ್ಬಗಳು ನಿರ್ದಿಷ್ಟ ದಿನಗಳಲ್ಲಿಯೇ ಆಚರಿಸುವ ಪದ್ಧತಿ ರೂಢಿಯಲ್ಲಿದೆ. ಅಂತೆಯೇ, ಶ್ರಾವಣ ಮಾಸದ ನಾಗರಪಂಚಮಿ ಹಬ್ಬವಾದ ನಂತರ ಪೌರ್ಣಮಿಗಿಂತ ಮುಂಚೆ ಬರುವ ಶುಕ್ರವಾರದಂದು ವರಮಹಾಲಕ್ಷ್ಮೀ ಹಬ್ಬವನ್ನು ಆಚರಿಸಲಾಗುತ್ತದೆ.

ವಿದ್ಯೆಗೆ ಬ್ರಹ್ಮನ ಅರಸಿ ಸರಸ್ವತಿ ಅಧಿದೇವತೆಯಾದರೆ ಸುಖ ಮತ್ತು ಸಂಪತ್ತುಗಳಿಗೆ ವಿಷ್ಣುವಿನ ಪತ್ನಿ ಮಹಾಲಕ್ಷ್ಮಿಯೇ ಅಧಿದೇವತೆ. ಯಾರಿಗೆ ಲಕ್ಷ್ಮಿ ಒಲಿದಿರುತ್ತಾಳೋ ಅಂತಹವರ ಬಾಳು ಹಸನಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಇಂದಿನ ದಿನಗಳಲ್ಲಿ ಬಹುತೇಕರು ಸರಸ್ವತಿಗಿಂತ ಲಕ್ಷ್ಮಿಯನ್ನು ಒಲಿಸಿಕೊಳ್ಳಲು ಬಯಸುತ್ತಿರುವುದು ಆಶ್ಚರ್ಯವಾದರೂ ನಂಬಲೇಬೇಕಾದ ಸತ್ಯವಾಗಿದೆ. ಹಾಗಾಗಿ ಈ ಕಲಿಯುಗದಲ್ಲಿ ಯಾವುದೇ ಜಾತಿಗಳ ತಾರತಮ್ಯವಿಲ್ಲದೆ ಪೂಜಿಸುವ ಏಕೈಕ ದೇವತೆ ಲಕ್ಷ್ಮಿ ಎಂದರೆ ಅತಿಶಯೋಕ್ತಿಯೇನಲ್ಲ.

ಶ್ರೀ ಮಹಾಲಕ್ಷ್ಮಿಯ ಜನನ

ಮುನಿಗಳಲ್ಲಿ ಅತ್ಯಂತ ಕೋಪಿಷ್ಟರೆಂದೇ ಖ್ಯಾತರಾದ ಶ್ರೀ ದುರ್ವಾಸ ಮಹರ್ಷಿಗಳ ಶಾಪದಿಂದಾಗಿ ದೇವೇಂದ್ರನು ರಾಜ್ಯಭ್ರಷ್ಟನಾದಾಗ, ಸ್ವರ್ಗವಾಗಿ ಲಕ್ಷ್ಮಿಯೂ ಸಹ ಸ್ವರ್ಗವನ್ನು ಬಿಟ್ಟು ವೈಕುಂಠವನ್ನು ಸೇರಿಕೊಂಡಾಗ ದೇವಲೋಕಕ್ಕೆ ದಾರಿದ್ರ್ಯ ಕಾಡತೊಡಗುತ್ತದೆ. ಇದರಿಂದ ದುಃಖತಪ್ತರಾದ ದೇವತೆಗಳೆಲ್ಲರೂ ಚತುರ್ಮುಖ ಬ್ರಹ್ಮನನ್ನು ಮುಂದಿಟ್ಟುಕೊಂಡು, ವೈಕುಂಠವಾಸಿ ಮಹಾವಿಷ್ಣುವಿನ ಮೊರೆ ಹೋಗುತ್ತಾರೆ.

ಸಮುದ್ರ ಮಂಥನದಲ್ಲಿ ಹುಟ್ಟಿದ ವರಮಹಾಲಕ್ಷ್ಮಿಯನ್ನು ಕ್ಷೀರಸಮುದ್ರ ಸಂಭವೆ, ಸಮುದ್ರರಾಜನ ಪುತ್ರಿ, ಚಂದ್ರನ ತಂಗಿ, ಕಮಲದಲ್ಲಿ ಆವಿರ್ಭವಿಸಿದವಳು ಎಂದೂ ಕರೆಯಲಾಗುತ್ತದೆ.

ಮಹಾಲಕ್ಷ್ಮೀ ವ್ರತದ ಮಹತ್ವ

ಒಮ್ಮೆ ಶಿವ ಪಾರ್ವತಿಯರು ಏಕಾಂತದಲ್ಲಿದ್ದಾಗ ಈ ಜಗತ್ತಿನ ಉದ್ಧಾರಕ್ಕಾಗಿ ಯಾವ ವ್ರತಮಾಡಿದರೆ ಶ್ರೇಷ್ಠ ಎಂದು ಜಗಜ್ಜನನಿಯಾದ ಪಾರ್ವತಿಯು ಕೇಳುತ್ತಾಳೆ. ತಡಮಾಡದೇ ಸ್ವತಃ ಈಶ್ವರನು ವರಮಹಾಲಕ್ಷ್ಮೀ ವ್ರತವೇ ಅತ್ಯಂತ ಶ್ರೇಷ್ಠವಾದ ವ್ರತ ಎಂದು ತಿಳಿಸಿ, ಆ ವ್ರತದ ಮಹಾತ್ಮೆಯನ್ನು ಪಾರ್ವತಿಗೆ ಕಥೆಯ ರೂಪದಲ್ಲಿ ಹೇಳುತ್ತಾನೆ. ಕುಂಡಿನ ಎಂಬ ಊರಿನಲ್ಲಿ ಚಾರುಮತಿ ಎಂಬ ಬಡ ಮಹಿಳೆ ಇದ್ದಳು. ಬಡತನದಲ್ಲಿ ಆಕೆ ಖಾಯಿಲೆ ಪೀಡಿತ ತನ್ನ ವಯೋವೃದ್ಧ ಅತ್ತೆ–ಮಾವಂದಿರ ಸೇವೆಯನ್ನು ನಿಷ್ಕಲ್ಮಶವಾಗಿ ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದರೂ ಅವರ ಖಾಯಿಲೆಗಳು ವಾಸಿಯಾಗದೇ ಅವರು ನರಳುತ್ತಿದ್ದನ್ನು ನೋಡಿ, ಓ ದೇವರೇ, ದಯವಿಟ್ಟು ನಮ್ಮ ಅತ್ತೆ–ಮಾವನವರ ಖಾಯಿಲೆಯನ್ನು ಗುಣಪಡಿಸು. ಅವರ ನರಳುವಿಕೆಯನ್ನು ನಾನು ನೋಡಲಾರೆ ಎಂದು ಪ್ರತೀ ದಿನವೂ ಕೇಳಿಕೊಳ್ಳುತ್ತಿದ್ದಳು. ಅದೊಂದು ದಿನ ಇದ್ದಕ್ಕಿದ್ದಂತೆಯೇ ಆಕೆಯ ಸ್ವಪ್ನದಲ್ಲಿ ಮಹಾಲಕ್ಷ್ಮಿ ಕಾಣಿಸಿಕೊಂಡು, ಎಲೈ ಚಾರುಮತಿಯೇ ನೀನು ಅತ್ತೆ–ಮಾವಂದಿರನ್ನು ಕಾಳಜಿಯಿಂದ ಸೇವೆ ಮತ್ತು ಶುಶ್ರೂಷೆ ಮಾಡುವುದನ್ನು ಕಂಡು ಮೆಚ್ಚಿದ್ದೇನೆ. ಶ್ರಾವಣ ಮಾಸದ ಹುಣ್ಣಿಮೆಗೂ ಮೊದಲು ಬರುವ ಶುಕ್ರವಾರ ನನ್ನನ್ನು ಪೂಜಿಸು. ನಿನ್ನ ಇಷ್ಟಾರ್ಥಗಳನ್ನೆಲ್ಲಾ ನೆರವೇರಿಸುತ್ತೇನೆ ಎಂದು ಹೇಳಿ ಕಣ್ಮರೆಯಾದಳು.

ಸಾಕ್ಷಾತ್ ಮಹಾಲಕ್ಷ್ಮಿಯೇ ತನ್ನ ಕನಸಿನಲ್ಲಿ ಬಂದು ಅನುಗ್ರಹಿಸಿದ್ದನ್ನು ನೋಡಿ ಸಂತೋಷಗೊಂಡ ಚಾರುಮತಿಗೆ ತನ್ನ ಕನಸಿನ ಬಗ್ಗೆ ತನ್ನೆಲ್ಲಾ ಬಂಧು–ಮಿತ್ರರಿಗೆ ತಿಳಿಸಿ, ಶ್ರಾವಣ ಮಾಸದ ಪೌರ್ಣಮಿ ಗಿಂತ ಮುಂಚೆ ಬರುವ ಶುಕ್ರವಾರ ಬಹಳ ಭಕ್ತಿ ಭಾವಗಳಿಂದ ಮಹಾಲಕ್ಷ್ಮಿ ಯನ್ನು ಆರಾಧನೆ ಮಾಡಿ, ಆ ತಾಯಿಯ ಅನುಗ್ರಹ ಪಡೆಯುತ್ತಾಳೆ.

ತದನಂತರ ಆಕೆಯ ಬಡತನವೂ ನೀಗುವುದಲ್ಲದೆ, ಆಕೆಯ ಅತ್ತೆ ಮತ್ತು ಮಾವನವರ ಖಾಯಿಲೆಗಳೂ ವಾಸಿಯಾಗುತ್ತವೆ. ಅಂದಿನಿಂದ ಪ್ರತೀ ವರ್ಷವೂ ಆಕೆ ತನ್ನ ಬಂಧು–ಮಿತ್ರರೊಡನೆ ತಪ್ಪದೇ ಮಹಾಲಕ್ಷ್ಮಿಯ ವ್ರತಾಚರಣೆ ಮಾಡಿ ಸಕಲ ಆಯುರಾರೋಗ್ಯ, ಐಶ್ವರ್ಯವಂತಳಾಗಿ ಹಲವಾರು ವರ್ಷ ಸುಃಖವಾದ, ನೆಮ್ಮದಿಯಾದ ಜೀವನ ನಡೆಸುತ್ತಾಳೆ.

ಉಪಯೋಗಗಳು

ಲಕ್ಷ್ಮಿ ದೇವಿಯು ಹಿಂದೂ ಪುರಾಣಗಳಲ್ಲಿ ಸಂಪತ್ತು, ಸಮೃದ್ಧಿ, ಫಲವತ್ತತೆ, ಶಕ್ತಿ ಮತ್ತು ಅದೃಷ್ಟದ ದೇವತೆ. ವಿವಾಹಿತ ಮಹಿಳೆಯರು ತಮ್ಮ ಗಂಡನಿಗೆ ದೀರ್ಘ ಮತ್ತು ಸಮೃದ್ಧ ಜೀವನಕ್ಕಾಗಿ ದೇವಿಯನ್ನು ಪ್ರಾರ್ಥಿಸುತ್ತಾರೆ. ಉಪವಾಸವನ್ನು ಆಚರಿಸುವ ಮಹಿಳೆಯರಿಗೆ ಲಕ್ಷ್ಮಿ ದೇವಿಯು ದೀರ್ಘಾಯುಷ್ಯ, ಆರೋಗ್ಯ ಮತ್ತು ಸಂತತಿಯನ್ನು ನೀಡುತ್ತಾಳೆ ಎಂದು ನಂಬಲಾಗಿದೆ. ಈ ವ್ರತವನ್ನು ಸಂಪೂರ್ಣ ಶ್ರದ್ಧಾಭಕ್ತಿಯಿಂದ ಆಚರಿಸಿದರೆ ಮನೆಯಿಂದ ಬಡತನದ ಛಾಯೆಯೂ ದೂರವಾಗುತ್ತದೆ ಮತ್ತು ಅನೇಕ ತಲೆಮಾರುಗಳು ತಮ್ಮ ಜೀವನವನ್ನು ಸಂತೋಷದಿಂದ ಕಳೆಯುತ್ತಾರೆ ಎಂದು ನಂಬಲಾಗಿದೆ.

ಮಕ್ಕಳಿಲ್ಲದ ದಂಪತಿ ಸಂತಾನ ಸುಖವನ್ನು ಪಡೆಯುತ್ತಾರೆ ಮತ್ತು ಅಖಂಡ ಸೌಭಾಗ್ಯವನ್ನು ಪಡೆಯುತ್ತಾರೆ. ಈ ಉಪವಾಸ ಅವಿವಾಹಿತ ಹೆಣ್ಣುಮಕ್ಕಳಿಗೆ ಅಲ್ಲ. ವಿವಾಹಿತ ಮಹಿಳೆಯರು ಮಾತ್ರ ಈ ಉಪವಾಸವನ್ನು ಆಚರಿಸಬಹುದು. ಪತಿ–ಪತ್ನಿಯರಿಬ್ಬರೂ ಒಟ್ಟಾಗಿ ಈ ವ್ರತವನ್ನು ಆಚರಿಸಿದರೆ ತುಂಬಾ ಶುಭ ಫಲಗಳು ದೊರೆಯುತ್ತವೆ.

ವ್ರತಾಚರಣೆ

ವರಮಹಾಲಕ್ಷ್ಮಿ ಹಬ್ಬದ ದಿನ ಶುಕ್ರವಾರದಂದು ಬೆಳಗ್ಗೆಯೇ ಶುಚಿರ್ಭೂತರಾಗಿ ಬೆಳಗಿನಿಂದ ಸಾಯಂಕಾಲದವರೆವಿಗೂ ಉಪವಾಸದಿಂದ ಇದ್ದು ಸಂಜೆ ಸಂಕಲ್ಪ ಮಾಡಿ ದೇವರ ಮನೆ ಅಥವಾ ಮನೆಯ ದೊಡ್ಡದಾದ ಜಾಗದಲ್ಲಿ ಗೋಮೂತ್ರದಿಂದ ಸ್ಥಳ ಶುದ್ಧೀಕರಿಸಿ ರಂಗೋಲಿ ಬಿಡಿಸಿ ಮರದ ಮಣೆ ಅಥವಾ ಕುರ್ಚಿಯ ಮೇಲೆ ಅಗ್ರ ಇರುವ ಎರಡು ಬಾಳೆಎಲೆಗಳನ್ನು ಇಟ್ಟು, ಅದರಲ್ಲಿ ಅಕ್ಕಿ ಹಾಕಿ, ಬೆಳ್ಳಿ ಅಥವಾ ತಾಮ್ರದ ಅದೂ ಇಲ್ಲದಿದ್ದಲ್ಲಿ ಸ್ಟೀಲ್ ಕಲಶ ಇಟ್ಟು, ಆ ಕಲಶದಲ್ಲಿ ಒಣದ್ರಾಕ್ಷಿ, ಗೋಡಂಬಿ, ಬಾದಾಮಿ, ಉತ್ತುತ್ತೇ, ಕಲ್ಲುಸಕ್ಕರೆಗಳನ್ನು ತುಂಬಿ ಅನುಕೂಲ ಇದ್ದಲ್ಲಿ ಬೆಳ್ಳಿ ಅಥವಾ ಬಂಗಾರದ ನಾಣ್ಯ ಹಾಕಿ. ಶುದ್ಧವಾದ ಅರಿಶಿನ ಚಿಟಿಕೆ ಹಾಕಿ. ಶುದ್ಧವಾದ ನೀರು ತುಂಬಬೇಕು.

ಹಾಗೆ ಸ್ಥಾಪಿಸಿದ ಕಲಶದಲ್ಲಿ ಮಾವಿನಸೊಪ್ಪಿನ ಅಗ್ರವನ್ನಿಟ್ಟು ಅದರ ಮೇಲೆ ಅರಿಶಿನ ಹಚ್ಚಿದ ಮತ್ತು ಮೂರೂ ಕಡೆ ಕುಂಕುಮ ಹಚ್ಚಿದ ತೆಂಗಿನಕಾಯಿಯನ್ನು ಜುಟ್ಟು ಮೇಲೆ ಬರುವಂತೆ ಇಟ್ಟು ಅದರ ಮುಂದೆ ಲಕ್ಷ್ಮೀ ದೇವಿಯ ಬೆಳ್ಳಿ ವಿಗ್ರಹವನ್ನೋ ಇಲ್ಲವೇ ಲಕ್ಷ್ಮೀದೇವಿಯ ಬೆಳ್ಳಿ ಮುಖವಾಡವನ್ನೋ ಇಲ್ಲವೇ ಅವೆರಡೂ ಇಲ್ಲದಿದ್ದಲ್ಲಿ ಅರಿಶಿನದಲ್ಲಿ ಲಕ್ಷ್ಮೀ ದೇವಿಯನ್ನು ಮಾಡಿಕೊಂಡು ಇಡಬೇಕು.

ಸಮುದ್ರ ಮಂಥನದ ಸಮಯದಲ್ಲಿ ಮಹಾಲಕ್ಷ್ಮಿ ಶ್ವೇತವಸ್ತ್ರದಲ್ಲಿ ಉದ್ಭವವಾದ ಕಾರಣ, ವರಮಹಾಲಕ್ಷ್ಮಿ ವ್ರತದ ದಿನ ದೇವಿಗೆ ಶ್ವೇತ ವರ್ಣದ ಕೆಂಪು ಅಂಚಿನ ಸೀರೆಯನ್ನು ಉಡಿಸಿ, ಅಲಂಕಾರಕ್ಕಾಗಿ ನಾನಾ ಬಗೆಯ ಹೂವುಗಳ ಹಾರಗಳ ತೋಮಾಲೆಯಲ್ಲದೆ ಮನೆಯಲ್ಲಿರುವ ವಿವಿಧ ಚಿನ್ನಾಭರಣಗಳನ್ನು ತೊಡಿಸುವುದು ಇತ್ತೀಚೆಗೆ ನಡೆದುಕೊಂಡು ಬಂದಿರುವ ರೂಢಿಯಾಗಿದೆ.

ಪೂಜೆ ಆರಂಭಿಸುವ ಮುನ್ನಾ ಬೆಳ್ಳಿಯ ಇಲ್ಲವೇ ಹಿತ್ತಾಳೆಯ ನಂದಾದೀಪವನ್ನು ಹಚ್ಚಿಟ್ಟು ಮೊದಲು ಘಂಟಾನಾದವನ್ನು ಮಾಡಿ ಅವರವರ ಸಂಪ್ರದಾಯದಂತೆ ಅವರ ಮನೆ ದೇವರನ್ನು ನೆನೆದು ವಿಘ್ನವಿನಾಶಕ ವಿನಾಯಕನಿಗೆ ಮೊದಲ ಪೂಜೆಯನ್ನು ಮಾಡಿ, ನಂತರ ಮಹಾಲಕ್ಷ್ಮಿಯನ್ನು ಧ್ಯಾನಿಸಿ, ಆವಾಹನೆ ಮಾಡಿ, ಆನಂತರ ಅರ್ಘ್ಯ– ಪಾದ್ಯವಾದ ನಂತರ ಲಕ್ಷ್ಮಿ ದೇವಿಯ ಚಿಕ್ಕ ವಿಗ್ರಹಕ್ಕೆ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ ಹೀಗೆ ಪಂಚಾಮೃತ ಅಭಿಷೇಕ ಮಾಡಬೇಕು. ಅರಿಶಿನ– ಕುಂಕುಮ, ಗಂಧ ಇತ್ಯಾದಿಗಳಿಂದಲೂ ಹಾಗೂ ಮಲ್ಲಿಗೆ ಇತ್ಯಾದಿ ಪುಷ್ಪಗಳಿಂದಲೂ ದೇವಿಗೆ ಅಲಂಕಾರ ಮಾಡಿ, ಅಂಗ ಪೂಜೆ ಹಾಗೂ ಬಿಲ್ವ, ದವನ, ಮರಗ ಇತ್ಯಾದಿ ಪತ್ರೆಗಳಿಂದ ಅರ್ಚನೆ ಮಾಡಬೇಕು.

ಪೂಜಾನಂತರ ನಾನಾ ವಿಧದ ಬಗೆ ಬಗೆಯ ಕನಿಷ್ಠ ಪಕ್ಷ ಐದಾರು ಹಣ್ಣುಗಳೊಂದಿಗೆ ಮಹಾಲಕ್ಷ್ಮಿ ಹಬ್ಬಕ್ಕೆಂದೇ ಬಹಳ ಮಡಿಯಿಂದ ವಿಶೇಷವಾಗಿ ತಯಾರಿಸಲ್ಪಟ್ಟ ಒಬ್ಬಟ್ಟು ಇಲ್ಲವೇ ಸಜ್ಜಪ್ಪದ ಜೊತೆಗೆ ಬಗೆ ಬಗೆಯ ಉಂಡೆಗಳೊಂದಿಗೆ ದೇವಿಗೆ ನೈವೇದ್ಯ ಮಾಡಿ ಎಲ್ಲರ ಸಮ್ಮುಖದಲ್ಲಿ ದೇವರಿಗೆ ತುಪ್ಪದ ಬತ್ತಿಯಲ್ಲಿ ಮಹಾಮಂಗಳಾರತಿ ಮಾಡಿ, ಮಂತ್ರ ಪುಷ್ಪಾದಿಗಳನ್ನು ಸಮರ್ಪಿಸಬೇಕು.

ಸುಮಾರು ಎರಡು ಗೇಣಿನುದ್ದದ 12 ಹಸೀ ದಾರಗಳನ್ನು ತೆಗೆದುಕೊಂಡು ಅದಕ್ಕೆ 12 ಗಂಟುಗಳನ್ನು ಹಾಕಿ, ಅದನ್ನು ಸ್ವಲ್ಪ ನೀರಿನಲ್ಲಿ ನೆನೆಸಿ ಅರಿಶಿನ ಹಚ್ಚಿ ಅದಕ್ಕೆ ಸೇವಂತಿಕೆ ಹೂವನ್ನು ಕಟ್ಟಿ ದೇವಿಯ ಪಕ್ಕದಲ್ಲಿರಿಸಿ ಪೂಜೆ ಮಾಡಬೇಕು. ಲಕ್ಷ್ಮಿ ಪೂಜೆ ಮಾಡಿದ ನಂತರ ಈ ದಾರವನ್ನು ಮನೆಯ ಎಲ್ಲಾ ಹೆಣ್ಣುಮಕ್ಕಳು ಮತ್ತು ಮುತ್ತೈದೆಯರು, ಹಿರಿಯರಿಂದ ಕಂಕಣದಂತೆ ಬಲಗೈಗೆ ಕಟ್ಟಿಸಿಕೊಂಡು ಮುಂದೆ ಬರುವ ಗೌರೀ ಹಬ್ಬದವರೆಗೂ ಜತನದಿಂದ ಅದನ್ನು ಕಾಪಾಡಿಕೊಂಡು ಬಂದು ಗಣೇಶನ ವಿಸರ್ಜನೆಯ ದಿನ ಭೀಮನ ಅಮಾವಾಸ್ಯೆ, ಗೌರೀ ಹಬ್ಬದ ದಿನ ಕಟ್ಟಿಕೊಂಡ ದಾರದ ಸಮೇತ ಈ ದಾರವನ್ನು ವಿಸರ್ಜಿಸಬೇಕು.

ಪೂಜೆ ಮುಗಿದ ನಂತರ ಮನೆಯ ನೆರೆಹೊರೆಯ ಮುತ್ತೈದೆಯರನ್ನೆಲ್ಲಾ ಕರೆದು ಅವರಿಗೆ ಅರಿಶಿನ, ಕುಂಕುಮ, ಇನ್ನೂ ಕೆಲ ಹಿರಿಯ ಮುತ್ತೈದೆಯರಿಗೆ ಈ ದಾರ ಸಹಿತ ಹಸಿ ಮೊರದಲ್ಲಿ ಅಕ್ಕಿ, ತೆಂಗಿನಕಾಯಿ, ತಾಂಬೂಲ ಸಹಿತ ದಕ್ಷಿಣೆ, ಬಳೆ, ರವಿಕೆ ಕಣ ಅಥವಾ ಸೀರೆ ಇಟ್ಟು ದಾನ ಕೊಡುವ ಮೂಲಕ ವರ ಮಹಾಲಕ್ಷ್ಮಿಯ ಪೂಜೆ ಸಂಪೂರ್ಣವಾಗುತ್ತದೆ.

ಪೂಜೆ ಮಾಡುವಾಗ ಗಮನವಿಡಬೇಕಾದ ಕೆಲ ಅಂಶಗಳು

- ಇದು ಮುತ್ತೈದೆಯರೇ ಆಚರಿಸುವ ವಿಶೇಷವಾದ ವ್ರತವಾದ್ದರಿಂದ ಈ ಪೂಜೆಗೆ ಕುಳಿತುಕೊಳ್ಳುವಾಗ ರೇಷ್ಮೆ ಸೀರೆ ಉಡುವುದು ಶ್ರೇಷ್ಠ.
- ಪೂಜೆಗೆ ಕುಳಿತುಕೊಳ್ಳುವಾಗ ಒದ್ದೆ ಕೂದಲಾಗಲೀ, ಕೂದಲು ಬಿಚ್ಚಿ ಹರಡಿಕೊಳ್ಳಬಾರದು. ಜಡೆ ಹಾಕಿರಬೇಕು.
- ಮುತ್ತೈದೆಯರಿಗೆ ಸಿಂಧೂರವೇ ಪ್ರಾಮುಖ್ಯವಾದ್ದರಿಂದ ಹಣೆಯಲ್ಲಿ ದೊಡ್ಡದಾದ ಕುಂಕುಮವಿರಲಿ.
- ಮನೆಯ ಬಾಗಿಲಿಗೆ ಕಟ್ಟುವ ತೋರಣ ಮತ್ತು ಪೂಜೆಯಲ್ಲಿ ಬಳಸುವ ಬಾಳೆಲೆ, ಬಾಳೆಕಂಬಗಳು ಕೃತಕವಾಗಿ ಪ್ಲಾಸ್ಟಿಕ್ ಮಯವಾಗಿರದೇ ನಿಜವಾದ ಮಾವಿನ ಸೊಪ್ಪು ಹಾಗೂ ಬಾಳೆ ಎಲೆ, ಕಂದುಗಳಿದ್ದರೆ ಪೂಜೆಗೆ ಸಾರ್ಥಕತೆ ದೊರೆಯುತ್ತದೆ.
- ಹಬ್ಬದ ಇಡೀ ದಿನ ಮತ್ತು ಪೂಜಾ ಸಮಯದಲ್ಲಿ ಅಪಶಬ್ದ, ಅನವಶ್ಯಕ ದುರಾಲೋಚನೆಗಳು ಬರದಂತೆ ಎಚ್ಚರ ವಹಿಸಬೇಕು.
- ದಾನದ ರೂಪದಲ್ಲಿ ಪುರೋಹಿತರಿಗೆ ಕೊಡುವ ಸ್ವಯಂಪಾಕದಲ್ಲಿ ಕೊಡುವ ತರಕಾರಿ, ಅಕ್ಕಿ–ಬೇಳೆ ಇತ್ಯಾದಿ ಪದಾರ್ಥಗಳು ಹಾಳಾಗಿರದೆ, ಉತ್ತಮ ಗುಣಮಟ್ಟದಲ್ಲಿ ಬಳಸುವಂತೆ ಇರಬೇಕು. ಸ್ವಯಂಪಾಕ ಪಡೆದವರು ಕನಿಷ್ಠ ಒಂದು ಹೊತ್ತಿನ ಅಡುಗೆ ಮಾಡಿಕೊಂಡು ಊಟ ಮಾಡುವಂತಿರಬೇಕು.
- ಮುತ್ತೈದೆಯರಿಗೆ ಕೊಡುವ ಸೀರೆ ಮತ್ತು ಕುಪ್ಪಸದ ಕಣ ಅಥವಾ ಬ್ರಾಹ್ಮಣರಿಗೆ ನೀಡುವ ಪಂಚೆ–ಶಲ್ಯ ಇತ್ಯಾದಿ ವಸ್ತ್ರಗಳು ಧರಿಸಲು ಯೋಗ್ಯವಾಗಿರುವಂತಿರಬೇಕು.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶ್ರದ್ಧಾ ಭಕ್ತಿಯಿಂದ ಪೂಜಿಸಿದಲ್ಲಿ ಮಾತ್ರವೇ ಪೂಜೆಯ ಸಿದ್ಧಿಗಳು ಪೂಜಿಸಿದವರಿಗೆ ಲಭಿಸಿ ಅದರಿಂದ ಅವರ ಸಕಲ ಆರ್ಥಿಕ ಬಾಧೆಗಳು ನಿವಾರಣೆಯಾಗಿ ವ್ಯಾಪಾರ ಅಭಿವೃದ್ಧಿ ಆಗಿ, ಮನೆಯಲ್ಲಿ ಸಕಲ ಸೌಭಾಗ್ಯ–ಸಂಪತ್ತು ಅಭಿವೃದ್ಧಿ ಆಗಲಿ. ಎಲ್ಲರಿಗೂ ವರಮಹಾಲಕ್ಷ್ಮಿ ವರವನ್ನ ಕರುಣಿಸಲಿ.



ನವೀನ ಹೆಚ್.ಎ.
ಹನುಮನಹಳ್ಳಿ
ಕೆ.ಆರ್.ನಗರ

ಮೈಸೂರು ವಿವಿ ಈಜುಕೊಳ ಮತ್ತೆ ಪ್ರಾರಂಭ!



ಮೈಸೂರು ವಿವಿ ಈಜುಕೊಳ (ಸ್ವಿಮ್ಮಿಂಗ್ ಪೂಲ್)ದಲ್ಲಿ ಎಂದಿನಂತೆ ಸ್ಪರ್ಧೆ ಹಾಗೂ ಕಲಿಕಾ ಚಟುವಟಿಕೆಗಳು ಆರಂಭಗೊಂಡಿವೆ.

'ಮಿತ್ರ'ನ ವರದಿ ಫಲಶ್ರುತಿ

ಮೈಸೂರು,ಆ.7(ಎಂಕೆ)–ನೀರು ಶುದ್ಧೀಕರಣಕ್ಕೆ ಕೆಮಿಕಲ್(ಕ್ಲೋರಿನ್) ಇಲ್ಲವೆಂಬ ಕಾರಣಕ್ಕೆ ಕಳೆದ 10 ದಿನಗಳಿಂದ ಬಂದ್ ಆಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳ (ಸ್ವಿಮ್ಮಿಂಗ್ ಪೂಲ್)ದಲ್ಲಿ ಎಂದಿನಂತೆ ಸ್ಪರ್ಧೆ ಹಾಗೂ ಕಲಿಕಾ ಚಟುವಟಿಕೆಗಳು ಆರಂಭಗೊಂಡಿವೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿವಿ ಈಜುಕೊಳವನ್ನು ಕೆಮಿಕಲ್ ಇಲ್ಲವೆಂಬ ಕಾರಣಕ್ಕೆ ಬಂದ್ ಮಾಡಲಾಗಿತ್ತು. ಅಲ್ಲದೆ ಸ್ವಿಮ್ಮಿಂಗ್ ಪೂಲ್‌ನಲ್ಲಿ ಪಾಚಿ ಕಟ್ಟಿ ನೀರೆಲ್ಲಾ ಹಸಿರು ಬಣ್ಣಕ್ಕೆ ತಿರುಗಿತ್ತು. ಈ ಕುರಿತು ಆ.1ರ 'ಮೈಸೂರು ಮಿತ್ರ'ನ ಸಂಚಿಕೆಯಲ್ಲಿ 'ಮೈಸೂರು ವಿವಿ ತನ್ನ ಸ್ವಿಮ್ಮಿಂಗ್ ಪೂಲ್ ನಿರ್ವಹಣೆ ಮಾಡದಷ್ಟು ಸಂಕಷ್ಟದಲ್ಲಿದೆಯಾ...!?' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಎಚ್ಚೆತ್ತ ಮೈಸೂರು ವಿವಿ ಆಡಳಿತ ಸ್ವಿಮ್ಮಿಂಗ್ ಪೂಲ್‌ಗೆ ಕೆಮಿಕಲ್ ಪೂರೈಕೆಯ ಜವಾಬ್ದಾರಿಯನ್ನು ಗುತ್ತಿಗೆದಾರರಿಗೆ ನೀಡದೆ ತಾನೇ ವಹಿಸಿಕೊಂಡು ಸ್ವಿಮ್ಮಿಂಗ್ ಪೂಲ್‌ನಲ್ಲಿ ಸ್ಪರ್ಧೆ ಹಾಗೂ ಕಲಿಕಾ ಚಟುವಟಿಕೆಗಳನ್ನು ಪುನರಾರಂಭಿಸಿದೆ. ನಿನ್ನೆ(ಆ.6)ಯಿಂದಲೇ ಸ್ವಿಮ್ಮಿಂಗ್ ಪೂಲ್ ಆರಂಭವಾಗಿದೆ.

ಇಲ್ಲಿಯವರೆಗೆ ಕೆಮಿಕಲ್ ಪೂರೈಕೆಗೆ ಟೆಂಡರ್ ಕರೆದು, ಗುತ್ತಿಗೆ ನೀಡಲಾಗುತ್ತಿತ್ತು. ಇನ್ನು ಮುಂದೆ ವಿವಿಯೇ ಕೆಮಿಕಲ್ ಪೂರೈಕೆಯ ಜವಾಬ್ದಾರಿಯನ್ನು ನಿರ್ವಹಿಸಲಿದ್ದು, ಯಾರಿಗೂ ಗುತ್ತಿಗೆ ನೀಡುವುದಿಲ್ಲ. ಇದರಿಂದ ಕೆಮಿಕಲ್ ಕೊರತೆ ಸಮಸ್ಯೆ ಬಗೆಹರಿಯಲಿದೆ. ಜೊತೆಗೆ ವಿವಿಗೆ ಉಳಿತಾಯವೂ ಆಗಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಂದು ಬೆಂಗಳೂರಲ್ಲಿ ಮತಗಳ್ಳತನ ವಿರುದ್ಧ ಕಾಂಗ್ರೆಸ್ ಬೃಹತ್ ಸಮಾವೇಶ

ಬೆಂಗಳೂರು, ಆ.7(ಕೆಎಂಶಿ)– ಕೇಂದ್ರ ಚುನಾವಣಾ ಆಯೋಗ ಪ್ರಾಯೋಜಿತ ಮತಗಳ್ಳತನದ ವಿರುದ್ಧ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ರಾಷ್ಟ್ರದ ಜನತೆಯ ಗಮನ ಸೆಳೆಯಲು ನಾಳೆ (ಶುಕ್ರವಾರ) ನಗರದಲ್ಲಿ ಬೃಹತ್ ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ. ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪಕ್ಷದ ಕಾರ್ಯಕರ್ತರು, ಜನಪ್ರತಿನಿಧಿಗಳು ಮತ್ತು ವಿವಿಧ ಸಮುದಾಯಗಳ ಗಣ್ಯರನ್ನುದ್ದೇಶಿಸಿ ಮಾತನಾಡಲಿದ್ದಾರೆ.



ರಾಹುಲ್ ಗಾಂಧಿ

ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರು ಭಾಗಿಯಾಗಲಿದ್ದಾರೆ.

ಬೆಂಗಳೂರು ಸಮಾವೇಶದ ನಂತರ ಇಡೀ ರಾಷ್ಟ್ರಾದ್ಯಂತ ಸಭೆ–ಸಮಾರಂಭ ನಡೆಸಿ ಚುನಾವಣಾ ಆಯೋಗದ ಮತಗಳ್ಳತನವನ್ನು ಜನರ ಮುಂದಿಡಲು ಹೊರಟಿದ್ದಾರೆ.

ಮತಗಳ್ಳತನಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನು ಸಮಾರಂಭದಲ್ಲೇ ಬಹಿರಂಗಪಡಿಸಿ, ನಂತರ ಕೆಲವು ಮುಖಂಡರೊಂದಿಗೆ ಕಾಲ್ನಡಿಗೆಯಲ್ಲಿ ತೆರಳಿ ರಾಜ್ಯ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಲಿದ್ದಾರೆ. ಮತಗಳ್ಳತನಕ್ಕೆ ಸಂಬಂಧಿಸಿದಂತೆ ರಾಹುಲ್ ಇದುವರೆಗೂ ಹೇಳಿಕೆಗಳನ್ನು ನೀಡುತ್ತಿದ್ದರಾದರೂ ಬೃಹತ್ ಸಮಾವೇಶ ನಡೆಸಿ, ಜನರ ಮುಂದಿಡುವ ಕೆಲಸ ಇದೇ ಮೊದಲ ಬಾರಿಯಾಗಿದೆ.

ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂಬುದಕ್ಕೆ ಕೆಲವು ಪುರಾವೆಗಳನ್ನು ಸಂಗ್ರಹಿಸಿರುವ ರಾಹುಲ್, ಅವುಗಳನ್ನು ಅದೇ ಕ್ಷೇತ್ರದ ವ್ಯಾಪ್ತಿಗೆ ಬರುವ ಸ್ವಾತಂತ್ರ್ಯ ಉದ್ಯಾನವನದಲ್ಲಿ ಜನರ ಮುಂದಿಡುತ್ತಿದ್ದಾರೆ.

ಸಮಾವೇಶ ಯಶಸ್ವಿಗಾಗಿ ಪಕ್ಷ ಎಲ್ಲಾ ಸಿದ್ಧತೆ ಮಾಡಿಕೊಂಡಿದೆ. ಜೊತೆಗೆ ಹೆಚ್ಚಿನ ಬಿಗಿ ಬಂದೋಬಸ್ತ್‌ಗಾಗಿ ಸರ್ಕಾರ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿದೆ.

ಕಾರ್ಯಕ್ರಮ ಯಶಸ್ವಿಗೊಳಿಸುವ ಉದ್ದೇಶದಿಂದ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್, ತಮ್ಮ ಹೈದರಾಬಾದ್ ಪ್ರವಾಸ ರದ್ದುಪಡಿಸಿ ಪಕ್ಷದ ಕಚೇರಿಯಲ್ಲಿ ಕುಳಿತು ಸಮಾವೇಶ ವ್ಯವಸ್ಥೆ ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದರು.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಮತಗಳ್ಳತನ ವಿಚಾರವನ್ನು ನಮ್ಮ ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದು ಮತದಾರರ ಹಕ್ಕಿನ ರಕ್ಷಣೆಗಾಗಿ ಹೊರಟಿದ್ದಾರೆ.

ಆಗಸ್ಟ್ 8ರಂದು ಬೆಳಗ್ಗೆ 10–30ಕ್ಕೆ ಆಗಮಿಸುವ ರಾಹುಲ್, ನೇರವಾಗಿ ಸಮಾವೇಶ ಸ್ಥಳ ತಲುಪಿ, ಕಳೆದ ಲೋಕಸಭಾ ಚುನಾವಣೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ ದಾಖಲೆಗಳ ಸಮೇತ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಲಿದ್ದಾರೆ ಎಂದರು.

ಈ ಮಧ್ಯೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಭಟನೆ ವೇಳೆ ಎಲ್ಲ ಪೊಲೀಸ್ ಭದ್ರತೆ ಕೈಗೊಂಡಿದ್ದು, ಕೇಂದ್ರದಿಂದ ಎಸ್‌ಪಿಜಿ ಬಂದಿದೆ, ಅವರೊಂದಿಗೆ ನಮ್ಮ ಪೊಲೀಸರು ಸಂಪರ್ಕದಲ್ಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದು ವರಮಹಾಲಕ್ಷ್ಮೀ ಹಬ್ಬ: ಪೂಜಾ ಸಾಮಗ್ರಿ ಖರೀದಿಗೆ ಮುಗಿಬಿದ್ದ ಜನತೆ

ಮೈಸೂರು,ಆ.7(ಎಂಟಿವೈ)– ಐಶ್ವರ್ಯ, ಸಂಪತ್ತನ್ನು ವೃದ್ಧಿಸಲೆಂದು ಆಚರಿಸುವ ವರಮಹಾಲಕ್ಷ್ಮೀ ಹಬ್ಬದ ಆಚರಣೆಗಾಗಿ ಮೈಸೂರಲ್ಲಿ ಗುರುವಾರ ಪೂಜಾ ಸಾಮಗ್ರಿಗಳ ಖರೀದಿಗಾಗಿ ಜನ ಮುಗಿ ಬಿದ್ದ ಹಿನ್ನೆಲೆಯಲ್ಲಿ ದೇವರಾಜ ಮಾರುಕಟ್ಟೆ, ಸಯ್ಯಾಜಿ ರಾವ್ ರಸ್ತೆಯಲ್ಲಿ ಜನಜಂಗುಳಿ ಹೆಚ್ಚಾಗಿತ್ತು.

ಹಿಂದೂ ಸಂಪ್ರದಾಯದಲ್ಲಿ ವರಮಹಾಲಕ್ಷ್ಮೀ ಹಬ್ಬ ಆಚರಣೆಗೆ ಮಹತ್ವವಿದ್ದು, ಮನೆಯಲ್ಲಿ ಐಶ್ವರ್ಯ, ಸಂಪತ್ತು ವೃದ್ಧಿಯಾಗಲೆಂದು ಪ್ರಾರ್ಥಿಸಿ, ಮಹಾಲಕ್ಷ್ಮಿಯನ್ನು ಆರಾಧಿಸಲಾಗುತ್ತದೆ. ನಾಳೆ(ಆ.8) ದೇಶದಾದ್ಯಂತ ವರಮಹಾಲಕ್ಷ್ಮಿ ವ್ರತವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ಅದರಲ್ಲೂ ಕರ್ನಾಟಕದಲ್ಲಿ ವರಮಹಾಲಕ್ಷ್ಮೀ ಹಬ್ಬಕ್ಕೆ ಹೆಚ್ಚಿನ ಮಹತ್ವವಿದೆ. ಹಬ್ಬದ ಆಚರಣೆಗಾಗಿ ಕಳೆದ ಎರಡು ದಿನಗಳಿಂದ ಮೈಸೂರಿನ ಜನತೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಹಬ್ಬದ ಮುನ್ನಾ ದಿನವಾದ ಇಂದು ಮೈಸೂರಿನ ವಿವಿಧೆಡೆ ಪೂಜಾ ಸಾಮಗ್ರಿ ಖರೀದಿಗೆ ಮುಗಿ ಬಿದ್ದರು.

ಜನ ಜಂಗುಳಿ: ಮೈಸೂರಿನ ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ ವೃತ್ತ, ಸಯ್ಯಾಜಿರಾವ್ ರಸ್ತೆ, ಆನೆ ಸಾರೋಟ್ (ಬೋಟಿ ಬಜಾರ್) ರಸ್ತೆಯಲ್ಲಿ ಹೂವು ಹಣ್ಣು ಸೇರಿದಂತೆ ಪೂಜಾ ಸಾಮಗ್ರಿ ಖರೀದಿಗಾಗಿ ಜನ ಮುಗಿಬಿದ್ದ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಅದರಲ್ಲೂ ದೇವರಾಜ ಮಾರುಕಟ್ಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರಿಂದ ನೂಕುನುಗ್ಗಲು ಉಂಟಾಗುತ್ತಲೇ ಇತ್ತು. ಇದನ್ನು ಗಮನಿಸಿದ ಪೊಲೀಸರು ಒಂದು ಗೇಟ್‌ನಲ್ಲಿ ಪ್ರವೇಶ, ಮತ್ತೊಂದು ಗೇಟ್‌ನಲ್ಲಿ ನಿರ್ಗಮನಕ್ಕೆ ಸೂಚನೆ ನೀಡುತ್ತಿದ್ದರು. ಆದರೂ, ಬೆಳಗ್ಗೆ 11 ಗಂಟೆಯಿಂದ ಸಂಜೆವರೆಗೂ ದೇವರಾಜ ಮಾರುಕಟ್ಟೆಯಲ್ಲಿ ಪೂಜಾ ಸಾಮಗ್ರಿ, ಹೂವು, ಹಣ್ಣು, ತರಕಾರಿ ಖರೀದಿಗೆ ಜನ ಮುಗಿಬೀಳುತ್ತಲೇ ಇದ್ದರು.



ಮೈಸೂರಿನ ಚಿಕ್ಕಗಡಿಯಾರದ ಮುಂದೆ ವರಮಹಾಲಕ್ಷ್ಮೀ ಹಬ್ಬದ ತಯಾರಿಗಾಗಿ ನಾನಾ ಬಗೆಯ ಪೂಜಾ ಸಾಮಗ್ರಿಗಳ ಖರೀದಿಗೆ ಮುಗಿಬಿದ್ದಿರುವ ಸಾರ್ವಜನಿಕರನ್ನು ಚಿತ್ರದಲ್ಲಿ ಕಾಣಬಹುದು.

ಚಿಕ್ಕ ಗಡಿಯಾರದ ಸುತ್ತಲೂ ಹೂವು, ಹಣ್ಣು, ಅಲಂಕಾರಿಕ ವಸ್ತು, ತರಕಾರಿ, ಪೂಜಾ ಸಾಮಗ್ರಿ ಖರೀದಿಸಲು ಸಾವಿರಾರು ಜನ ಜಮಾಯಿಸಿದ್ದರಿಂದ ಸಯ್ಯಾಜಿ ರಾವ್ ರಸ್ತೆ, ವಿನೋಬಾ ರಸ್ತೆ ಆನೆ ಸಾರೋಟ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸುಗಮ ಸಂಚಾರಕ್ಕೆ ಪೊಲೀಸರು ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಇದಲ್ಲದೆ, ಧನ್ವಂತರಿ ರಸ್ತೆ, ಜೆ.ಕೆ. ಮೈದಾನದ ಬಳಿ, ಎಂ.ಜಿ.ರಸ್ತೆ, ಅಗ್ರಹಾರ ವೃತ್ತ, ರಾಮಸ್ವಾಮಿ ವೃತ್ತ, ಕ್ರಾಫರ್ಡ್ ಹಾಲ್ ಬಳಿ, ಕುಕ್ಕರಹಳ್ಳಿ ಕೆರೆ ರಸ್ತೆ, ನಂಜುಮಳಿಗೆ, ಚಾಮುಂಡಿಪುರಂ, ಸಿದ್ಧಾರ್ಥನಗರ, ಟೆರೇಷಿಯನ್ ಕಾಲೇಜು ವೃತ್ತ ಸೇರಿದಂತೆ ವಿವಿಧೆಡೆ ರಸ್ತೆ ಬದಿ ಮಾರಾಟ ಮಾಡುತ್ತಿದ್ದ ಪೂಜಾ ಸಾಮಗ್ರಿ ಖರೀದಿ ಭರಾಟೆ ಜೋರಾಗಿತ್ತು.

ಲಕ್ಷ್ಮೀ ಮುಖವಾಡ: ವರಮಹಾಲಕ್ಷ್ಮೀ ಹಬ್ಬದ ಆಚರಣೆಗೆ ಲಕ್ಷ್ಮೀ ಮುಖವಾಡ, ಕಳಸ, ಸೀರೆ, ಕುಪ್ಪಸ, ಬಳೆ, ಪಿಚ್ಚಾಲೆ ಖರೀದಿ ಜೋರಾಗಿತ್ತು.

ಗಗನಕ್ಕೇರಿದ ಬೆಲೆ: ವರಮಹಾಲಕ್ಷ್ಮೀ ಹಬ್ಬಕ್ಕೆ ಹೆಚ್ಚಾಗಿ ಬಳಕೆಯಾಗುವ ವೀಳ್ಯದೆಲೆ, ಹೂವು, ನಿಂಬೆಹಣ್ಣು, ವಿವಿಧ ಹಣ್ಣುಗಳ ಬೆಲೆ ಏರಿಕೆಯಾಗಿದೆ. ಅದರಂತೆ ಸೇವಂತಿ 150–180ರೂ.ಗೆ ಏರಿಕೆಯಾಗಿದೆ. ಕನಕಾಂಬರ ಕೆಜಿಗೆ 2200–2500 ರೂಗೆ ಏರಿಕೆಯಾಗಿದ್ದು, ದುಬಾರಿಯಾಗಿದೆ. ಮಲ್ಲಿಗೆ ಕೆಜಿಗೆ 1200, ಗುಲಾಬಿ ಕೆಜಿ 400, ಮರಳೆ 1000, ಕಾಕಡ 1000, ಪನ್ನೀರ್ ಎಲೆ, ತಾವರೆ ಹೂವಿನ ಬೆಲೆಯೂ ಏರಿಕೆಯಾಗಿದೆ. ಲಕ್ಷ್ಮೀ ಹಬ್ಬಕ್ಕೆ ಹೆಚ್ಚು ಬಳಸುವ ತಾವರೆ ಹೂವು 20ರಿಂದ 40ರೂ ಆಗಿದೆ. ವೀಳ್ಯದೆಲೆ ಹಾಗೂ ನಿಂಬೆ ಹಣ್ಣಿನ ಬೆಲೆಯೂ ಹೆಚ್ಚಾಗಿದೆ. ನಿಂಬೆ ಹಣ್ಣು ಗಾತ್ರಕ್ಕೆ ತಕ್ಕಂತೆ 10 ರೂ.ನಿಂದ 5 ರೂ. ವರೆಗೆ ಮಾರಾಟವಾಯಿತು. ವೀಳ್ಯದ ಎಲೆ ಗುಣಮಟ್ಟಕ್ಕೆ ತಕ್ಕಂತೆ ಒಂದು ಕಟ್ಟಿಗೆ 80 ರೂ. ನಿಂದ 180 ರೂ.ವರೆಗೂ ಮಾರಾಟವಾಗುತ್ತಿದೆ. ಮಾವಿನಸೊಪ್ಪು, ಬಾಳೆಕಂದು ಮಾರಾಟವೂ ಜೋರಾಗಿ ನಡೆಯಿತು.

ಹಣ್ಣುಗಳ ಬೆಲೆಯೂ ಏರಿಕೆ: ಹಣ್ಣುಗಳ ಬೆಲೆಯಲ್ಲೂ 10ರಿಂದ 20 ರೂ ಹೆಚ್ಚಳವಾಗಿದೆ. ದಾಳಿಂಬೆ, ಸೇಬು, ಬಾಳೆಹಣ್ಣು, ಮೋಸಂಬಿ ಕಿತ್ತಳೆ ಸೇರಿದಂತೆ ವಿವಿಧ ಹಣ್ಣುಗಳ ಬೆಲೆಯೂ ಏರಿಕೆಯಾಗಿದ್ದು, ಪೂಜೆಗೆ ವಿವಿಧ ಹಣ್ಣುಗಳನ್ನು ಇಡುವ ಪದ್ಧತಿ ಇರುವುದರಿಂದ ವಿವಿಧ ಹಣ್ಣುಗಳ ಖರೀದಿಯೂ ಜೋರಾಗಿತ್ತು. ಬಾಳೆಹಣ್ಣು 100–120, ಸೇಬು ಕೆಜಿಗೆ 200–220 ರೂ, ಮೋಸಂಬಿ 80–100 ರೂ, ಕಿತ್ತಳೆ 100–120 ರೂ, ದಾಳಿಂಬೆ 220–240 ರೂ, ಮರಸೇಬು 150–180 ರೂ, ಸೀತಾಫಲ 80 ರೂ, ಅನಾನಸ್ 50 ರೂಗೆ ಮಾರಾಟವಾಯಿತು. ತರಕಾರಿ ಬೆಲೆಯೂ ಏರಿಕೆಯಾಗಿದೆ.

ಆ.12, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು, ಆ.7–ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನು ಆ.12ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಹೋಟೆಲ್ ರ್‍ಯಾಡಿಸನ್ ಬ್ಲ್ಯೂ(ಏಟ್ರಿಯಾ)ನಲ್ಲಿ ಕರೆಯಲಾಗಿದೆ ಎಂದು ಶಾಸಕಾಂಗ ಪಕ್ಷದ ಕಾರ್ಯದರ್ಶಿ ಅಲ್ಲಮ ಪ್ರಭು ಪಾಟೀಲ್ ತಿಳಿಸಿದ್ದಾರೆ. ಆಗಸ್ಟ್ 11ರಿಂದ 22ರವರೆಗೆ ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಸದನದಲ್ಲಿ ಮಂಡಿಸಬಹುದಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಶಾಸಕಾಂಗ ಸಭೆಯನ್ನು ಕರೆಯಲಾಗಿದೆ. ಶಾಸಕಾಂಗ ಪಕ್ಷದ ನಾಯಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆಯ ಅಧ್ಯಕ್ಷತೆ ವಹಿಸುವರು. ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಪರಿಷತ್ತಿನ ಸಭಾ ನಾಯಕರಾದ ಎನ್.ಎಸ್. ಬೋಸರಾಜು, ಕಾರ್ಯಾಧ್ಯಕ್ಷರು ಭಾಗವಹಿಸಲಿದ್ದು, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸದಸ್ಯರು ಸಭೆಯಲ್ಲಿ ಭಾಗವಹಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಆ.10, ಜೀತ ವಿಮುಕ್ತರಿಗೆ ಪುನರ್ವಸತಿಗೆ ಆಗ್ರಹಿಸಿ ಮೈಸೂರಲ್ಲಿ ಸಮಾವೇಶ

ಮೈಸೂರು, ಆ.7(ಜಿಎ)–ಜೀತದಿಂದ ವಿಮುಕ್ತಿಯಾದವರಿಗೆ ಪುನರ್ವಸತಿ ಕಲ್ಪಿಸಬೇಕು ಮತ್ತು ಜೀತ ವಿಮುಕ್ತರಿಗೆ ಮಾರಕವಾಗಿರುವ ಎಸ್‌ಓಪಿಯನ್ನು ರದ್ದುಗೊಳಿಸಬೇಕು ಎಂಬ ಬೇಡಿಕೆ ಸೇರಿದಂತೆ ಹಲವು ಬೇಡಿಕೆ ಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಮಟ್ಟದ ಸಮಾವೇಶ ಹಾಗೂ ಒಕ್ಕೂಟ ಚುನಾವಣೆಯನ್ನು ಆ.10ರಂದು ನಗರದ ಕಲಾಮಂದಿರ ನಡೆಸಲಾಗುವುದು ಎಂದು ಜೀವಿಕ–ಜೀತ ವಿಮುಕ್ತಿ ಕರ್ನಾಟಕ ಹಾಗೂ ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟ ರಾಜ್ಯ ಸಂಘಟನಾ ಸಂಚಾಲಕರು ಉಮೇಶ್ ಜೀವಿಕ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ರಾಜ್ಯ ಮಟ್ಟದ ಸಮಾವೇಶ ಹಾಗೂ ಚುನಾವಣೆ ನಡೆಯಲಿದ್ದು, ಮೈಸೂರು ಗಾಂಧಿನಗರದ ಉರಿಲಿಂಗಿ ಪೆದ್ದಿಮಠದ ಪೀಠಾಧ್ಯಕ್ಷರಾದ ಜ್ಞಾನಪ್ರಕಾಶ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮಾವೇಶ ಉದ್ಘಾಟಿಸಲಿದ್ದಾರೆ. ಶಾಸಕ ಅನಿಲ್ ಚಿಕ್ಕಮಾದು ಪುಷ್ಪಾರ್ಚನೆ ಮಾಡಲಿದ್ದಾರೆ. ವಿಧಾನಪರಿಷತ್ತು ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಫ್ಲಾಗ್ ಬಿಡುಗಡೆಗೊಳಿಸಲಿದ್ದಾರೆ ಎಂದು ಹೇಳಿದರು.

'ಜೀತ ಸಮಸ್ಯೆ ಕುರಿತು ಜೀವಿಕ ಸಂಸ್ಥಾಪಕ, ಎನ್‌ಎಚ್‌ಆರ್‌ಸಿ ಕೋರ್ ಗ್ರೂಪ್ ಸದಸ್ಯ ಡಾ.ಕಿರಣ್ ಕಮಲ್‌ಪ್ರಸಾದ್ ಮಾತನಾಡಲಿದ್ದಾರೆ. ರಾಜ್ಯ ಸಂಘಟನಾ ಸಂಚಾಲಕ ಉಮೇಶ್ ಬಿ.ನೂರಲಕುಪ್ಪೆ, ಜಿಲ್ಲಾ ಸಂಚಾಲಕ ಬಸವರಾಜು ಭಾಗವಹಿಸಲಿದ್ದಾರೆ. ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟ ಅಧ್ಯಕ್ಷ ಮಹದೇವು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಸದ ಸುನೀಲ್ ಬೋಸ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಶಾಸಕರಾದ ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಓ ಎಸ್.ಯುಕೇಶ್‌ಕುಮಾರ್, ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕರ್ನಾಟಕ ರಾಜ್ಯ ರೈತ ಸಂಘ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹಾಗೂ ಮತ್ತಿತರ ಗಣ್ಯರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸಮಾವೇಶದಲ್ಲಿ ವಿವಿಧ ಬೇಡಿಕೆಗಳಾದ ಜೀತದಿಂದ ವಿಮುಕ್ತರಾಗಿ ಹೊರಬಂದಿರುವ ಜನರಿಗೆ ಪುನರ್ವಸತಿ ಕಲ್ಪಿಸಬೇಕು, ಜೀವನೋಪಾಯಕ್ಕೆ ಕನಿಷ್ಠ ಐದು ಎಕರೆ ಭೂಮಿ, ಸಾಮಾಜಿಕ ಭದ್ರತೆ ನೀಡಬೇಕು. ಎಸ್.ಓ.ಪಿಯನ್ನು ರದ್ದುಗೊಳಿಸುವುದು ಸೇರಿದಂತೆ ಇನ್ನಿತರ ಬೇಡಿಕೆಗಳ ಮನವಿಯನ್ನು ಸಮಾಜ ಕಲ್ಯಾಣ ಸಚಿವರಾಗಿರುವ ಡಾ.ಎಚ್.ಸಿಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ಮಹದೇವ, ಬಸವರಾಜು, ಚಂದ್ರಶೇಖರ್ ಮೂರ್ತಿ, ಗಣೇಶ್ ಕೆ.ಎಡತೊರೆ, ಬಸವರಾಜು ತೆಲಗುಮಸಹಳ್ಳಿ, ಶಿವಣ್ಣ ಯಲಮತ್ತೂರು ಉಪಸ್ಥಿತರಿದ್ದರು.

ಗಾಯತ್ರಿ ಪ್ರತಿಪತ್ ಕಾರ್ಯಕ್ರಮ

ಮೈಸೂರು,ಆ.7–ಜೆ.ಪಿ.ನಗರ ಬ್ರಾಹ್ಮಣ ಸಂಘದ ವತಿಯಿಂದ ಆ.10ರಂದು ಗಾಯತ್ರಿ ಪ್ರತಿಪತ್ ಕಾರ್ಯಕ್ರಮವನ್ನು ಜೆ.ಪಿ.ನಗರದ ಗಾಯತ್ರಿ ಪ್ರಾರ್ಥನಾ ಮಂದಿರದಲ್ಲಿ ಏರ್ಪಡಿಸಲಾಗಿದೆ.

ಗಾಯತ್ರಿ ಮಂತ್ರದ ಮಹತ್ವ ಮತ್ತು ಅದರ ಆಚರಣೆ ಕುರಿತು ಜನರಿಗೆ ಅರಿವು ಮೂಡಿಸುವುದು ಮತ್ತು ಸಾರ್ವತ್ರಿಕ ಶಾಂತಿ, ಉನ್ನತಿ ಬಗ್ಗೆ ಅರಿವು ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಬೆಳಗ್ಗೆ 8ರಿಂದ ವೇದ ಮಾತ ಗಾಯತ್ರಿ ದೇವಿಗೆ ಅಭಿಷೇಕ, ಜಪ, ಹೋಮ, ಸಂಜೆ 6ರಿಂದ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭೂ ಅಕ್ರಮ ತಡೆಯುವಲ್ಲಿ ವಿಫಲ

ಶಾಸಕ ನರೇಂದ್ರಸ್ವಾಮಿ ರಾಜೀನಾಮೆ ನೀಡಲಿ

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕೆ.ಅನ್ನದಾನಿ ಮಾತನಾಡಿದರು.

ಮಂಡ್ಯ, ಆ.7– ತಮ್ಮ ಆಡಳಿತಾವಧಿಯಲ್ಲಿ ಭೂ ಅಕ್ರಮ ನಡೆಯುತ್ತಿದೆ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ಸ್ವತಃ ತಾವೇ ಒಪ್ಪಿಕೊಂಡಿದ್ದು, ಇದನ್ನು ತಡೆಯಲು ವಿಫಲವಾಗಿರುವ ಅವರು ಕೂಡಲೇ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ಒತ್ತಾಯಿಸಿದರು.

ಗುರುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳವಳ್ಳಿ ತಾಲೂಕಿನಲ್ಲಿ ಭೂಗಳ್ಳತನ ನಡೆಯುತ್ತಿದ್ದು, ಸರ್ಕಾರಿ ಭೂಮಿಯನ್ನು ಅಕ್ರಮ ಖಾತೆ ಮಾಡಲಾಗುತ್ತಿದೆ ಎಂದು ನರೇಂದ್ರಸ್ವಾಮಿ ಪದೇ ಪದೇ ಅಕ್ರಮದ ಬಗ್ಗೆ ಪ್ರಚಾರ ಮಾಡುತ್ತಿದ್ದಾರೆ. ಸೈಬರ್ ಸೆಂಟರ್‌ಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ಭೂ ಭೂಕಳ್ಳತನ ಮಾಡಲಾಗುತ್ತಿದೆ ಎಂದು ಆರೋಪಿಸುವ ಮೂಲಕ ಅವರ ಆಡಳಿತದ ವೈಫಲ್ಯ ಹೇಗಿದೆ ಎಂಬುದನ್ನು ಅವರೇ ಸಾರ್ವಜನಿಕರ ಮುಂದೆ ಬಿಚ್ಚಿಟ್ಟಿದ್ದು, ಅವರದ್ದೇ ಸರ್ಕಾರವಿದ್ದರೂ ಮಳವಳ್ಳಿಯಲ್ಲಿ ಸರಿಯಾದ ಆಡಳಿತ ನಡೆಸುತ್ತಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ. ಸರಿಯಾದ ಆಡಳಿತ ನಡೆಸಲು ಯೋಗ್ಯತೆಯಿಲ್ಲದ ಅವರು ಕೂಡಲೇ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಮಳವಳ್ಳಿಯಲ್ಲಿ ಭೂಗಳ್ಳತನ ವಿರುದ್ಧ ಜೆಡಿಎಸ್‌ನಿಂದ ಪ್ರತಿಭಟನೆ ನಡೆಸುವ ವೇಳೆ ಉಪವಿಭಾಗಾಧಿಕಾರಿ ಶಿವಮೂರ್ತಿ ಅವರು ಕ್ರಮ ಜರುಗಿಸುವುದಾಗಿ ಭರವಸೆ ನೀಡಿ, ಅವರ ನೇತೃತ್ವದಲ್ಲಿಯೇ 300 ಆರ್‌ಟಿಸಿಗಳನ್ನು ರದ್ದು ಮಾಡಿಸಲಾಗಿದ್ದು, ಇದು ಜೆಡಿಎಸ್ ಶ್ರಮದ ಫಲವಾಗಿದೆ. ಜಿಲ್ಲಾಧಿಕಾರಿಗಳು 800 ಆರ್‌ಟಿಸಿ ರದ್ದುಪಡಿಸಿ 1000 ಎಕರೆ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ ಎಂದು ಕೆಡಿಪಿ ಸಭೆಯಲ್ಲಿ ಹೇಳಿದ ಸಂಬಂಧ ಪ್ರತಿಕ್ರಿಯೆ ನೀಡಿದ ಅವರು, ಜಿಲ್ಲಾಧಿಕಾರಿಗಳು ಸುಳ್ಳು ಮಾಹಿತಿ ನೀಡಿದ್ದಾರೆ. ಅಕ್ರಮ ಭೂ ಕಬಳಿಕೆ ಸಂಬಂಧ ಒಂದು ನೋಟಿಸನ್ನೂ ನೀಡಿಲ್ಲ. ಅವರು ಸರ್ಕಾರದ ಸುಪರ್ದಿಗೆ ಪಡೆದ ಭೂಮಿಗಳ ಸಂಬಂಧ ಪುರಾವೆ ನೀಡಬೇಕು ಎಂದು ಆಗ್ರಹಿಸಿದರು.

2023ರ ನಂತರ ನರೇಂದ್ರಸ್ವಾಮಿ ಅಧಿಕಾರದ ಅವಧಿಯಲ್ಲಿಯೇ 300ಕ್ಕೂ ಹೆಚ್ಚು ಆರ್‌ಟಿಸಿಗಳು ಅಕ್ರಮವಾಗಿ ಇತರರಿಗೆ ಖಾತೆಯಾಗಿದೆ. ಅಧಿಕಾರಿಗಳಂತೆಯೇ ಶಾಸಕರೂ ಸರ್ಕಾರದ ಅಂಗ. ತಮಗೆ ಬೇಕಾದ ಅಧಿಕಾರಿಗಳನ್ನು ವರ್ಗಾಯಿಸಿಕೊಂಡು, ಅಧಿಕಾರಿಗಳ ದುರ್ಬಳಕೆ ಮಾಡಿ ಅಕ್ರಮವಾಗಿ ಖಾತೆ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಅಕ್ರಮ ಭೂಕಬಳಿಕೆ ವಿರುದ್ಧ ಜೆಡಿಎಸ್ ಪ್ರತಿಭಟನೆಗೂ ಮೊದಲೇ ಮಳವಳ್ಳಿಯ ಕಾಂಗ್ರೆಸ್ಸಿಗರು ಸುದ್ದಿಗೋಷ್ಠಿ ನಡೆಸಿದ ಫಲವಾಗಿ 300 ಆರ್‌ಟಿಸಿ ರದ್ದು ಹೇಳಿಕೆಗೆ ಉತ್ತರಿಸಿದ ಅವರು, ಅವರ ಪ್ರತಿಭಟನೆಗೂ ಮುನ್ನವೇ ಸುದ್ದಿಗೋಷ್ಠಿ ನಡೆಸಿದ ಸಂಬಂಧ ಸಾಕ್ಷಗಳನ್ನು ಬಹಿರಂಗಪಡಿಸಲಿ. ಕೂಡಲೇ ಅವರ ವಿರುದ್ಧ ಆರೋಪ ಮಾಡುವುದು ದ್ವೇಷ ನಿಲ್ಲಿಸುತ್ತೇನೆ ಎಂದು ಸವಾಲೆಸೆದರು.

ನರೇಂದ್ರಸ್ವಾಮಿ ಅವರ ಕುಮ್ಮಕ್ಕಿನಿಂದ ಖಾಸಗಿ ಕಾರ್ಯಕ್ರಮಕ್ಕೆ ನಾಲ್ವರು ವೃತ್ತ ನಿರೀಕ್ಷಕರು ಸೇರಿದಂತೆ ಹಲವು ಪೊಲೀಸ್ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿದೆ. ಖಾಸಗಿ ಕಾರ್ಯಕ್ರಮಕ್ಕೆ ಇಷ್ಟು ಪೊಲೀಸರನ್ನು ಬಳಕೆ ಮಾಡಿಕೊಳ್ಳುವ ಅವಶ್ಯಕತೆ ಏನಿತ್ತು. ತಾಲೂಕಿನ ಪೊಲೀಸರನ್ನು ತನ್ನ ಕಾಲುಬುಡದಲ್ಲಿ ಇಟ್ಟುಕೊಂಡಿರುವ ನರೇಂದ್ರ ಸ್ವಾಮಿ ಅವರು ತಾಲೂಕಿನಲ್ಲಿ ಭ್ರಷ್ಟಾಚಾರ ಪ್ರಶ್ನಿಸುವ ಆರ್‌ಟಿಐ ಕಾರ್ಯಕರ್ತರಿಗೆ ಬೆದರಿಕೆ ಒಡ್ಡುತ್ತಿದ್ದಾರೆ. ಪೊಲೀಸ್ ವರಿಷ್ಠಾಧಿಕಾರಿಗಳು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ತಾಲೂಕಿನ ಪೊಲೀಸ್ ಸಿಬ್ಬಂದಿಯನ್ನು ಹಿಡಿತದಲ್ಲಿರಿಸಿಕೊಳ್ಳುವತ್ತ ಗಮನ ಹರಿಸುವಂತೆ ಸಲಹೆ ನೀಡಿದರು.

ಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಯುವ ಜೆಡಿಎಸ್ ತಾಲೂಕು ಅಧ್ಯಕ್ಷ ಶ್ರೀಧರ್, ಜೆಡಿಎಸ್ ಎಸ್ಸಿ/ಎಸ್ಟಿ ವಿಭಾಗದ ಜಿಲ್ಲಾಧ್ಯಕ್ಷ ಎಸ್.ಡಿ. ಜಯರಾಮ್, ಸಿದ್ದಾಚಾರಿ, ಕಾಂತರಾಜು, ಶಂಕರ್ ಇದ್ದರು.

> ನರೇಂದ್ರಸ್ವಾಮಿ ಅವರು ನನಗೆ ಭೂಗಳ್ಳರಿಂದ ಪ್ರಾಣ ಬೆದರಿಕೆ ಇದೆ ಎಂದು ಬಹಿರಂಗವಾಗಿ ಹೇಳಿಕೊಂಡಿದ್ದು, ಈ ಸಂಬಂಧ ಅವರು ಪೊಲೀಸರಿಗೆ ದೂರು ನೀಡಲಿಲ್ಲವೇಕೆ. ಹೀಗಾಗಿ ಪ್ರಕರಣ ಸಂಬಂಧ ಗೃಹ ಸಚಿವರು ಕೂಡಲೇ ಕ್ರಮ ವಹಿಸಿ ತನಿಖೆ ಮಾಡಲು ಆದೇಶಿಸಬೇಕು. ಪ್ರಾಣ ಬೆದರಿಕೆ ಒಡ್ಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ನರೇಂದ್ರಸ್ವಾಮಿ ದೂರು ನೀಡದೇ ಸಾರ್ವಜನಿಕ ವಲಯದಲ್ಲಿ ಅನುಕಂಪ ಗಳಿಸಲು ಈ ರೀತಿ ನಾಟಕ ಮಾಡುವುದನ್ನು ಬಿಟ್ಟು ಕೂಡಲೇ ದೂರು ನೀಡಿ ತನಿಖೆ ಮಾಡಿಸಿ, ಇಲ್ಲವಾದಲ್ಲಿ ಸುಳ್ಳು ಹೇಳುತ್ತಿರುವುದಾಗಿ ಬಹಿರಂಗವಾಗಿ ಒಪ್ಪಿಕೊಳ್ಳಲಿ. ಶಾಸಕರಿಗೆ ಪ್ರಾಣ ಬೆದರಿಕೆ ಒಡ್ಡಿದ್ದೇ ಆದರೆ ಸಾಮಾನ್ಯ ಜನರ ಪಾಡೇನು. ಶಾಸಕರು ದೂರು ನೀಡದಿದ್ದರೆ, ಅವರ ಬಹಿರಂಗ ಹೇಳಿಕೆ ಆಧರಿಸಿ ಪೊಲೀಸರೇ ಸುಮೊಟೊ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು. – ಕೆ.ಅನ್ನದಾನಿ, ಮಾಜಿ ಶಾಸಕ.

ಆ.10, ಕನ್ನಡ ಅಕ್ಷರ ಜಾತ್ರೆ, ಪ್ರಶಸ್ತಿ ಪ್ರದಾನ

ಮಂಡ್ಯ, ಆ.7– ಡಾ.ಜೀಶಂಪ ಸಾಹಿತ್ಯ ವೇದಿಕೆ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಸ್ವಾತಂತ್ರ್ಯ ದಿನದ ಅಂಗವಾಗಿ ಆ.10ರಂದು ಬೆಳಗ್ಗೆ 10.30ಕ್ಕೆ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ 13ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ, ವಿವಿಧ ಪ್ರಶಸ್ತಿ ಪ್ರದಾನ ಮತ್ತು ಮೂರು ಕಿರು ಚಿತ್ರಗಳನ್ನು ಬಿಡುಗಡೆ ಮಾಡಲಾಗುವುದು ಎಂದು ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಅಂದು ಅಕ್ಷರ ಜಾತ್ರೆ ಕಾರ್ಯಕ್ರಮವನ್ನು ಸಮಾಜ ಸೇವಕ ಹಾಗೂ ಅಂತಾರಾಷ್ಟ್ರೀಯ ಕ್ರೀಡಾಪಟು ಡಾ.ರೇವಣ್ಣ (ವಾಲಿಬಾಲ್) ಉದ್ಘಾಟಿಸಲಿದ್ದು, ಖ್ಯಾತ ಕವಿ ಮತ್ತು ವೈದ್ಯ ಡಾ.ಚಂದ್ರಶೇಖರ್ ಪ್ರಧಾನ ಭಾಷಣ ಮಾಡುವರು. ಸಾಹಿತಿ ಹಾಡ್ಯ ಎಸ್. ಮುದ್ದೇಗೌಡ ನೇಗಿಲ ಧರ್ಮ ಕೃತಿ ಬಿಡುಗಡೆ ಮಾಡುವರು. ಕವಯತ್ರಿ ಬಿ.ಆರ್. ಉಮಾ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷತೆ ವಹಿಸುವರು ಎಂದು ಹೇಳಿದ್ದಾರೆ.

ಶಾಸಕ ಪಿ.ರವಿಕುಮಾರ್ ಗಣಿಗ ಕನ್ನಡರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದು, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಕರ್ನಾಟಕ ಸೇವಾ ಭೂಷಣ ಪ್ರಶಸ್ತಿ ಪ್ರದಾನ ಮಾಡುವರು. ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ ಸಮ್ಮೇಳನಾಧ್ಯಕ್ಷರಿಗೆ ಗೌರವ ಸಲ್ಲಿಸಲಿದ್ದು, ಎಸ್.ಕೃಷ್ಣಸ್ವರ್ಣ ಸಂದ್ರ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಡಾ.ರೇವಣ್ಣ (ವಾಲಿಬಾಲ್), ಪ್ರವೀಣ್ ಚಕ್ರವರ್ತಿ, ಬಿ.ರಾಜಣ್ಣ, ಡಾ.ಆರ್.ಮನೋಹರ್, ಶಂಕರ್ ಹೆಮ್ಮಿಗೆ, ಡಾ.ತನ್ಮಯ ಕೃಷ್ಣ ಪಾಲನೇತ್ರ ಸೋಮಶೇಖರಮೂರ್ತಿ, ಉಮಾ, ಸೌಭಾಗ್ಯ ಸಿದ್ದರಾಜು, ಮುನಿರಾಜಪ್ಪ, ಚೈತ್ರ ಪ್ರಸನ್ನ, ದೀಪಕ್‌ಗೌಡ, ಎಂ.ಡಿ.ನಾಗೇಂದ್ರ, ಭಾರ್ಗವಿ ಅವರನ್ನು ಅಭಿನಂದಿಸಲಾಗುವುದು ಎಂದಿದ್ದಾರೆ.

ಬೋಳಮಾರನಹಳ್ಳಿ ಡೇರಿಗೆ ಪೂರ್ಣಿಮಾ ಅಧ್ಯಕ್ಷೆ



ಬೋಳಮಾರನಹಳ್ಳಿ ಡೇರಿ ಅಧ್ಯಕ್ಷೆಯಾಗಿ ಪೂರ್ಣಿಮಾ ಆಯ್ಕೆಯಾದರು.

ಕೆ.ಆರ್.ಪೇಟೆ, ಆ.7– ತಾಲೂಕಿನ ಬೋಳಮಾರನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಪೂರ್ಣಿಮಾ ಜಗದೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ರೋಹಿಣಿ ಮಂಜುನಾಥ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಪೂರ್ಣಿಮಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು.

ನೂತನ ಅಧ್ಯಕ್ಷೆ ಪೂರ್ಣಿಮಾ ಅವರನ್ನು ಉಪಾಧ್ಯಕ್ಷೆ ಕುಮಾರಿ, ನಿರ್ದೇಶಕರಾದ ನಾಗರತ್ನ, ಮಂಜುಳ, ರಂಗಮ್ಮ, ಸಣ್ಣಮ್ಮ, ಗೀತಾ, ವರಲಕ್ಷ್ಮೀ, ಸಂಘದ ಕಾರ್ಯದರ್ಶಿ ಜಯಮ್ಮ, ಮುಖಂಡರಾದ ಗೌಡರಶೇಖರಣ್ಣ, ಬಿ.ಎಸ್.ಪುಟ್ಟೇಗೌಡ, ಶ್ರೀನಿವಾಸ್, ಶಂಕರಲಿಂಗೇಗೌಡ, ಬಿ.ಎಸ್.ಮಂಜುನಾಥ್, ಬಿ.ಎಂ.ಕಿರಣ್, ಲಿಂಗೇಗೌಡ ಮತ್ತಿತರರು ಅಭಿನಂದಿಸಿದರು.

ನೂತನ ಅಧ್ಯಕ್ಷೆ ಪೂರ್ಣಿಮಾ ಮಾತನಾಡಿ, ಸಂಘದ ಸದಸ್ಯರು ಹೆಚ್ಚಿನ ಹಾಲು ಉತ್ಪಾದಕರ ಕಡ್ಡಾಯವಾಗಿ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕು. ಅಮೃತ ಸಮಾನವಾದ ಹಾಲನ್ನು ಕಲಬೆರಕೆ ಮಾಡಬಾರದು. ಗುಣಮಟ್ಟದ ಹಾಲು ಪೂರೈಕೆ ಮಾಡಿ ಸಂಘ ಹಾಗೂ ಹಾಲು ಒಕ್ಕೂಟದ ಅಭಿವೃದ್ಧಿಗೆ ಸಹಕರಿಸಬೇಕು. ಜೊತೆಗೆ ನನ್ನನ್ನು ಸಂಘದ ಅಧ್ಯಕ್ಷೆಯನ್ನಾಗಿ ಅವಿರೋಧ ಆಯ್ಕೆ ಮಾಡಲು ಸಹಕಾರ ನೀಡಿದ ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಸಂಘದ ಎಲ್ಲಾ ನಿರ್ದೇಶಕರು ಹಾಗೂ ಗ್ರಾಮದ ಮುಖಂಡರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಮಾಂಗಲ್ಯ ಸರ ಅಪಹರಣ

ನಾಗಮಂಗಲ, ಆ.7– ದುಷ್ಕರ್ಮಿಗಳು ದನ ಮೇಯಿಸಲು ಹೋಗುತ್ತಿದ್ದ ಮಹಿಳೆಯ ಚಿನ್ನದ ಮಾಂಗಲ್ಯ ಸರ ಅಪಹರಿಸಿರುವ ಘಟನೆ ತಾಲೂಕಿನ ಪಡುವಲಪಟ್ಟಣ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸಣ್ಣ ಹುಡುಗ ಎಂಬುವರ ಪತ್ನಿ ಜಯಮ್ಮ ಮಾಂಗಲ್ಯ ಸರ ಕಳೆದುಕೊಂಡವರು. ಈಕೆ ಗುರುವಾರ ಮಧ್ಯಾಹ್ನ ದನ ಮೇಯಿಸಲು ಕರೀಗೌಡರ ಕ್ರಷರ್ ಬಳಿ ಹೋಗುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಜಯಮ್ಮ ಅವರ ಮೇಲೆ ಸ್ಪ್ರೇ ಸಿಂಪಡಿಸಿ ಪ್ರಜ್ಞೆ ತಪ್ಪಿಸಲು ಮುಂದಾದಾಗ ಆಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ವೇಳೆ ಓರ್ವ ದುಷ್ಕರ್ಮಿ ಬೈಕ್‌ನಿಂದ ಇಳಿದು ಚಾಕುವಿನಿಂದ ಮುಖ, ಕೈಗಳ ಮೇಲೆ ಹಲ್ಲೆ ಮಾಡಿ ಆಕೆ ಕುತ್ತಿಗೆಯಲ್ಲಿದ್ದ 40 ಗ್ರಾಂ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ವೇಳೆ ದಾರಿಯಲ್ಲಿ ಬಿದ್ದಿದ್ದ ಜಯಮ್ಮಳನ್ನು ದಾರಿ ಹೋಕರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಳ್ಳೂರಿನ ಆದಿಚುಂಚನಗಿರಿ ಆಸ್ಪತ್ರೆಗೆ ಸೇರಿಸಿದ್ದಾರೆ. ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಮಕಾತಿ ಪರೀಕ್ಷೆಗಾಗಿ ಅರ್ಜಿ ಆಹ್ವಾನ

ಮಂಡ್ಯ, ಆ.7– ಭಾರತ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗದಿಂದ ಜೂನಿಯರ್ ಇಂಜಿನಿಯರ್ ಸ್ಪರ್ಧಾತ್ಮಕ ಪರೀಕ್ಷೆಯನ್ನು ಅಕ್ಟೋಬರ್‌ನಲ್ಲಿ ಆಯೋಜಿಸಲಾಗುತ್ತಿದೆ.

ನೇಮಕಾತಿ ಪರೀಕ್ಷೆಗಾಗಿ ಅಭ್ಯರ್ಥಿಗಳು https://ssc.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ http://sscdkkr.kar.nic.in. ವೆಬ್‌ಸೈಟ್, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ದೂ: 08232–220126, 9164642684, 9113875775 / 080–25520653 / 25502520 ಹಾಗೂ ಬೆಂಗಳೂರಿನ ಕೋರಮಂಗಲದ ಕೇಂದ್ರೀಯ ಸದನದ 'ಇ' ವಿಂಗ್ ಮೊದಲ ಮಹಡಿಯಲ್ಲಿನ ಸ್ಟಾಫ್ ಸೆಲೆಕ್ಷನ್ ಕಮೀಷನ್ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಮಹದೇಶ್ವರಪುರ ಡೇರಿ ಅಧಿಕಾರ ಜೆಡಿಎಸ್ ವಶಕ್ಕೆ

ನೂತನ ನಿರ್ದೇಶಕರಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದನೆ



ಮಹದೇಶ್ವರಪುರ ಡೇರಿ ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ, ಆ.7– ತಾಲೂಕಿನ ಮಹದೇಶ್ವರಪುರ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಭರ್ಜರಿ ಜಯಗಳಿಸಿದ ಜೆಡಿಎಸ್ ಬೆಂಬಲಿತ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಡೇರಿಯ ಒಟ್ಟು 10 ಸ್ಥಾನಗಳ ಪೈಕಿ ಲಕ್ಷ್ಮಿ ಹಾಗೂ ಹೊನ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 8 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ನಿರ್ದೇಶಕರಾದ ಎಂ.ಆರ್.ದೇವರಾಜ್, ಎಂ.ಎಚ್.ಲಕ್ಷ್ಮೀಗೌಡ, ಎಂ.ಎಸ್.ಜಯರಾಮು, ಎಂ.ಎಸ್.ಕೃಷ್ಣ, ಎಂ.ಹೆಚ್.ವಿಜಯಕುಮಾರ್, ನಾಗಮ್ಮ, ಚೇತನಕುಮಾರಿ ಆಯ್ಕೆಯಾದರೆ, ಉಳಿದ ಒಂದು ಸ್ಥಾನ ರೈತ ಸಂಘದ ಬೆಂಬಲಿತ ನಿರ್ದೇಶಕ ಎಂ.ಪಿ.ಕುಮಾರ್ ಆಯ್ಕೆಯಾದರು.

ಇದೇ ವೇಳೆ ಮಹದೇಶ್ವರಪುರ ಡೇರಿ ನೂತನ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಮಹದೇಶ್ವರಪುರ ಡೇರಿಲ್ಲಿ ಆಯ್ಕೆಯಾದ ಎಲ್ಲಾ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಿಗೆ ಅಭಿನಂದನೆಗಳು. ಹಾಲು ಉತ್ಪಾದಕರ ಸಹಕಾರ ಸಂಘಗಳು ರೈತರ ಬೆನ್ನೆಲುಬಾಗಿದ್ದು, ನೂತನ ನಿರ್ದೇಶಕರು ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೆಚ್.ಮಂಜುನಾಥ್, ಮುಖಂಡರಾದ ಸಿ.ನಾಗರಾಜು, ಮಂಜುನಾಥ್, ಶ್ರೀಕಂಠಪ್ಪ, ಕುಮಾರ್, ಎಲ್‌ಐಸಿ. ಗಿರೀಶ್, ಉಮೇಶ್, ಕೆಚ್ಚೇಗೌಡ, ಬೆಣ್ಣೆ ಜಯರಾಮ್, ಲೋಕೇಶ್, ಎಂ.ಆರ್. ಸತೀಶ್ ಸೇರಿದಂತೆ ಹಲವು ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.

ಒಂದನೇ ಪುಟದಿಂದ

ವಿಶೇಷ ಸಂಪುಟ ಸಭೆ

ಸಿಸಿ ಲೈನಿಂಗ್ ಮತ್ತು ಪುನರ್‌ನಿರ್ಮಾಣಕ್ಕೆ 65 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಮಂಡ್ಯ ಜಿಲ್ಲೆ ಮದ್ದೂರು ಕೆರೆ ಅಡಿಯಲ್ಲಿರುವ ಚಾಮನಹಳ್ಳಿ, ಬೈರಾನ್ ಹಾಗೂ ವೈದ್ಯನಾಥಪುರ ಕಾಲುವೆಗಳ ಆಧುನೀಕರಣಕ್ಕೆ 49.50 ಕೋಟಿ ರೂ. ಬಿಡುಗಡೆ ಮಾಡಿದೆ ಎಂದರು.

ಪಾಂಡವಪುರದಲ್ಲಿ ಒಳಚರಂಡಿ ಕಾಮಗಾರಿ: ಪಾಂಡವಪುರ ಪಟ್ಟಣದ ಒಳಚರಂಡಿ ಕಾಮಗಾರಿಗೆ 11.62 ಕೋಟಿ ರೂ. ಸಂಪುಟ ಬಿಡುಗಡೆ ಮಾಡಿದೆ.

ತಲಕಾಡು ಪಪಂ: ಟಿ.ನರಸೀಪುರ ತಾಲೂಕಿನ ತಲಕಾಡು ವ್ಯಾಪ್ತಿಯ ಬಿ.ಶೆಟ್ಟಳ್ಳಿ, ಟಿ.ಬೆಟ್ಟಳ್ಳಿ, ಕುರುಬಾಳನಕುಂಡಿ ಗ್ರಾಮಗಳನ್ನು ಸೇರ್ಪಡೆ ಮಾಡಿ ತಲಕಾಡು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೇರಿಸಲು ಹಸಿರು ನಿಶಾನೆ ತೋರಲಾಗಿದೆ.

ರಾಜ್ಯದ 15 ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ 87.06 ಕೋಟಿ ರೂ. ವೆಚ್ಚದಲ್ಲಿ ಕಟ್ಟಡಗಳ ನಿರ್ಮಾಣ, ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ 36 ಕೋಟಿ ರೂ. ವೆಚ್ಚದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಕ್ಯಾನ್ಸರ್ ಆಸ್ಪತ್ರೆ

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಆಸ್ಪತ್ರೆಯನ್ನು 91.25 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸುವುದು, ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ವಿದ್ಯಾರ್ಥಿ ನಿಲಯಗಳಿಗೆ 40 ಕೋಟಿ ರೂ. ವೆಚ್ಚದಲ್ಲಿ ಹಾಸಿಗೆ, ದಿಂಬು, ಮಂಚ ಖರೀದಿಗೆ ಅನುಮತಿ ನೀಡಿದೆ ಎಂದರು.

ಹುಣಸೂರು ತಾಲೂಕು ನಾಲೆಗಳ ಆಧುನೀಕರಣ, ದುರಸ್ತಿಗೆ 139.85 ಕೋಟಿ ಅನುದಾನ; ಸಂಪುಟ ಅನುಮೋದನೆ

ಶಾಸಕ ಜಿ.ಡಿ. ಹರೀಶ್‌ಗೌಡರಿಂದ ರಾಜ್ಯ ಸರ್ಕಾರಕ್ಕೆ ಅಭಿನಂದನೆ



ಬೃಹತ್ ನೀರಾವರಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿನಂದನೆ ಸಲ್ಲಿಸಿದರು.

ಮೈಸೂರು,ಆ.7(ಪಿಎಂ)– ಹುಣಸೂರು ತಾಲೂಕಿನ ನಾಲೆಗಳ ಆಧುನೀಕರಣ ಹಾಗೂ ದುರಸ್ತಿಗಾಗಿ 139.85 ಕೋಟಿ ರೂ.ಗಳ ಅನುದಾನ ಕಲ್ಪಿಸಲು ರಾಜ್ಯ ಸರ್ಕಾರದ ಸಚಿವ ಸಂಪುಟ ಅನುಮೋದನೆ ನೀಡಿದೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಹುಣಸೂರು ತಾಲೂಕಿನ ಜನತೆಯ ಪರವಾಗಿ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅಭಿನಂದನೆ ತಿಳಿಸಿದ್ದಾರೆ. ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಮತ್ತು ಮರೂರು ನಾಲಾ ಭಾಗದ ರೈತರ ಭೂಮಿಗೆ ನೀರಾ ವರಿ ಕಲ್ಪಿಸುವ ಸಂಬಂಧ ಡಿಸಿಎಂ ಹಾಗೂ ಬೃಹತ್ ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು ಈ ಸಂಬಂಧ ಅನುದಾನ ಕಲ್ಪಿಸಲು ಗುರುವಾರ ನಡೆದ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ತಾಲೂಕಿನ ಕಟ್ಟೆಮಳಲ ವಾಡಿ ಅಣೆಕಟ್ಟು ನಾಲೆ ಮತ್ತು ವಡಕೆಕಟ್ಟೆ ಹೈಲೆವೆಲ್ ನಾಲೆಗಳ ಆಧುನೀಕರಣ ಕಾಮ ಗಾರಿ ಹಾಗೂ ಅಡ್ಡಮೋರಿಗಳ ಅಭಿವೃದ್ಧಿ ಕಾಮಗಾರಿಗೆ 49.85 ಕೋಟಿ ರೂ. ಹಾಗೂ ಹಾರಂಗಿ ಬಲದಂಡೆ ನಾಲೆಯಡಿ ಬರುವ ಮರೂರು ಶಾಖಾ ನಾಲಾ ಹಾಗೂ ಅದರಡಿ ಬರುವ ವಿತರಣಾ ಕಾಮಗಾರಿ ಸಂಬಂಧ 90 ಕೋಟಿ ರೂ. ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಚಿವ ಸಂಪುಟ ನಿರ್ಧರಿಸಿದೆ.

ಮುಖ್ಯ ಚುನಾವಣಾಧಿಕಾರಿ ಸೂಚನೆ

ನೀವು ಸಲ್ಲಿಸುವ ಪ್ರಮಾಣ ಪತ್ರದಲ್ಲಿ ಅಕ್ರಮವಾಗಿ ಸೇರಿಸ ಲಾಗಿರುವ ಅಥವಾ ಅಳಿಸಲಾಗಿರುವ ಮತದಾರರ ಹೆಸರು, ಚುನಾವಣಾ ಐಡಿ ನಂಬರ್ ಮತ್ತು ಮತದಾರರ ಪಟ್ಟಿಯ ಸೀರಿಯಲ್ ನಂಬರ್‌ನಂತಹ ವಿವರಗಳು ಒಳಗೊಂಡಿರಬೇಕು. ಈ ಮಾಹಿತಿ ಯನ್ನು ಒದಗಿಸಿದರೆ ಮಾತ್ರ ಮುಂದಿನ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಇದರ ಜೊತೆಗೆ ತಪ್ಪು ಅಥವಾ ಆಧಾರರಹಿತ ಮಾಹಿತಿ ಯನ್ನು ಒದಗಿಸಿದರೆ, ಸೆಕ್ಷನ್ 31 ಆರ್‌ಪಿ ಆಕ್ಟ್ 1950 ಮತ್ತು ಸೆಕ್ಷನ್ 227 ಭಾರತೀಯ ನ್ಯಾಯ ಸಂಹಿತೆ (BNS) ಅಡಿಯಲ್ಲಿ ಕಠಿಣ ಶಿಕ್ಷೆಗೆ ಗುರಿಯಾಗಬಹುದು ಎಂದು ಎಚ್ಚರಿಕೆ ನೀಡಿದ್ದಾರೆ.

ಗಾಂಧಿ ಬಯಲು ಮಾಡಿದ ಮತಗಳ್ಳತನ!

ಮನವರಿಕೆಯಾಗಿದೆ ಎಂದು ಆರೋಪಿಸಿದ್ದಾರೆ. ಕರ್ನಾಟಕದಲ್ಲಿ ವಿವಿಧ ಮತಗಟ್ಟೆಗಳ ಮತದಾರರ ಪಟ್ಟಿಯಲ್ಲಿ ಒಂದೇ ವ್ಯಕ್ತಿಯ ಹೆಸರು ಇದೆ ಎಂದು ರಾಹುಲ್ ಹೇಳಿದ್ದಾರೆ. ಹಲವೆಡೆ ಜನರ ಫೋಟೋಗಳು ಕಾಣೆಯಾಗಿವೆ. ಹಲವೆಡೆ ನಕಲಿ ವಿಳಾಸಗಳನ್ನು ಬರೆಯಲಾಗಿದೆ.

ಕರ್ನಾಟಕದ ಮಹದೇವಪುರ ವಿಧಾನ ಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಪರದೆಯ ಮೇಲೆ ತೋರಿಸಿದ ರಾಹುಲ್, ಇಲ್ಲಿನ 6.5 ಲಕ್ಷ ಮತಗಳಲ್ಲಿ 1 ಲಕ್ಷ ಮತಗಳು ಕಳುವಾಗಿವೆ ಎಂದು ಹೇಳಿದರು. ಕಾಂಗ್ರೆಸ್ ಸಂಶೋಧನೆಯ ಸುಮಾರು ಒಂದು ಲಕ್ಷ ತಪ್ಪು ವಿಳಾಸಗಳು ಮತ್ತು ಬೃಹತ್ ಮತದಾರರು ಮತ್ತು ನಕಲಿ ಮತದಾರ ರನ್ನು ಒಂದೇ ವಿಳಾಸದಲ್ಲಿ ಬಹಿರಂಗಪಡಿಸಿದೆ.

ಕರ್ನಾಟಕದಲ್ಲಿ ನಾವು 16 ಸ್ಥಾನಗಳನ್ನು ಗೆಲ್ಲುತ್ತಿದ್ದೆವು, ಆದರೆ ನಾವು ಕೇವಲ 9 ಸ್ಥಾನಗಳನ್ನು ಗೆದ್ದಿದ್ದೇವೆ. ಕಳೆದುಹೋದ ಈ ಏಳು ಸ್ಥಾನಗಳಲ್ಲಿ ಒಂದನ್ನು ನಾವು ತನಿಖೆ ಮಾಡಿದ್ದೇವೆ, ಆ ಸ್ಥಾನ ಬೆಂಗಳೂರು ಕೇಂದ್ರವಾಗಿತ್ತು. ಈ ಸ್ಥಾನದಲ್ಲಿ ಕಾಂಗ್ರೆಸ್ 6,26,208 ಮತಗಳನ್ನು ಗಳಿಸಿದರೆ, ಬಿಜೆಪಿ 6,58,915 ಮತಗಳನ್ನು ಗಳಿಸಿತು. ಎರಡೂ ಪಕ್ಷಗಳ ಮತಗಳ ನಡುವಿನ ವ್ಯತ್ಯಾಸ ಕೇವಲ 32,707. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮತದಾನ ನಡೆದಾಗ ಎರಡೂ ಪಕ್ಷಗಳ ನಡುವಿನ ಮತಗಳ ನಡುವಿನ ವ್ಯತ್ಯಾಸ 1,14,046 ಆಗಿತ್ತು. ಆ ಕ್ಷೇತ್ರದಲ್ಲಿ 1 ಲಕ್ಷಕ್ಕೂ ಹೆಚ್ಚು ಮತಗಳನ್ನು ಕದ್ದಿದ್ದಾರೆ.

ಈ ಮತ ಕಳ್ಳತನವನ್ನು ಐದು ರೀತಿಯಲ್ಲಿ ಮಾಡಲಾಗಿದೆ ಎಂದರು.

ಮಹದೇವಪುರ ಕ್ಷೇತ್ರದಲ್ಲಿ ತನಿಖೆ ನಡೆಸಿದಾಗ ಕಾಂಗ್ರೆಸ್ 1,15,586 ಮತಗಳನ್ನು ಪಡೆದರೆ, ಬಿಜೆಪಿ 2,29,632 ಮತಗಳನ್ನು ಪಡೆದುಕೊಂಡಿದೆ. ಕಾಂಗ್ರೆಸ್‌ಗಿಂತ ಬಿಜೆಪಿ 1,14,046 ಮತಗಳ ಬಹುಮತ ಪಡೆದುಕೊಂಡಿದೆ. ಈ ಮತಗಳಲ್ಲಿ 11,965 ನಕಲಿ ಮತದಾರರು, 40,009 ನಕಲಿ ವಿಳಾಸದ ಮತಗಳು, ಒಂದೇ ವಿಳಾಸದಲ್ಲಿ ಹತ್ತಾರು ಮತಗಳಿರುವಂತಹ 10,452 ಮತಗಳು, ಫೋಟೋ ಇಲ್ಲದಿರುವ 4,132 ಹಾಗೂ ಫಾರಂ 6 ದುರ್ಬಳಕೆಯಾದ 33,692 ಮತಗಳಿವೆ ಎಂದು ಸ್ಫೋಟಕ ಆರೋಪ ಮಾಡಿದರು.

ಮಹಾರಾಷ್ಟ್ರದಲ್ಲಿ, ಕೆಲವೇ ತಿಂಗಳುಗಳಲ್ಲಿ ಲಕ್ಷಾಂತರ ಮತದಾರರ ಹೆಸರುಗಳು ಪಟ್ಟಿಗೆ ಸೇರ್ಪಡೆಗೊಂಡಿದ್ದು, ಇದು ಸಾಕಷ್ಟು ಆತಂಕಕಾರಿಯಾಗಿದೆ. 40 ಲಕ್ಷ ಮತದಾರರು ನಿಗೂಢರಾಗಿದ್ದಾರೆ. ಐದು ತಿಂಗಳಲ್ಲಿ ಇಲ್ಲಿ ಅನೇಕ ಮತದಾರರು ಸೇರ್ಪಡೆಗೊಂಡಿದ್ದಾರೆ. ಚುನಾವಣಾ ಆಯೋಗವು ಈ ಮತದಾರರ ಪಟ್ಟಿಯ ಬಗ್ಗೆ ಉತ್ತರಿಸಬೇಕು. ಮತದಾರರ ಪಟ್ಟಿ ಸರಿಯೋ ತಪ್ಪೋ ಎಂದು ಅವರು ಹೇಳಬೇಕು.

ಸಂಜೆ 5 ಗಂಟೆಯ ನಂತರ ಮತದಾನದ ಪ್ರಮಾಣ ಹೆಚ್ಚಳವೂ ಆಶ್ಚರ್ಯಕರವಾಗಿದೆ. ಸಂಜೆ 5 ಗಂಟೆಯ ನಂತರ ಮತದಾನ ಏಕೆ ಹೆಚ್ಚಾಗುತ್ತದೆ. ಚುನಾವಣಾ ಆಯೋಗ ಇದಕ್ಕೆ ಉತ್ತರಿಸಬೇಕು. ಮತಗಳ ಕಳ್ಳತನದ ಬಗ್ಗೆ ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗಕ್ಕೆ ಪ್ರಶ್ನೆಗಳನ್ನು ಕೇಳಿದೆ, ಆದರೆ ಆಯೋಗವು ಒಂದೇ ಒಂದು ಉತ್ತರವನ್ನು ನೀಡಿಲ್ಲ. ಮತಗಳ ಕಳ್ಳತನವನ್ನು ಹಿಡಿಯಲು ನಮಗೆ ಆರು ತಿಂಗಳು ಬೇಕಾಯಿತು ಎಂದರು.


ಡೇಟಾ ಒದಗಿಸದ ಕಾರಣ ಅಕ್ರಮ: ಚುನಾವಣಾ ಆಯೋಗವು ಮತದಾರರ ಡೇಟಾವನ್ನು ಒದಗಿಸದ ಕಾರಣ ಈ ಅಕ್ರಮಗಳು ಸಂಭವಿಸಿವೆ. ಇದರಿಂದಾಗಿ ಮತಗಳು ಕದಿಯಲ್ಪಡುತ್ತಿವೆ ಎಂದ ಅವರು, ಹರಿಯಾಣದಲ್ಲಿ ಕಾಂಗ್ರೆಸ್ ಸೋಲಿಗೆ ಈ ಅಕ್ರಮಗಳೇ ಕಾರಣ ಎಂದು ಅವರು ಆರೋಪಿಸಿದರು.

ಚುನಾವಣಾ ಆಯೋಗವು ಎಲೆಕ್ಟ್ರಾನಿಕ್ ಡೇಟಾವನ್ನು ಏಕೆ ಒದಗಿಸುವುದಿಲ್ಲ. ನಾವು ಆಯೋಗವನ್ನು ಪದೇ ಪದೇ ಡೇಟಾವನ್ನು ಕೇಳಿದೆವು ಆದರೆ ಅದನ್ನು ನಮಗೆ ನೀಡಲಾಗಿಲ್ಲ. ಚುನಾವಣಾ ಆಯೋಗವು ನಮಗೆ ಉತ್ತರಿಸಲು ಸಹ ನಿರಾಕರಿಸಿತು.

ದೇಶದಲ್ಲಿ ನಕಲಿ ಮತದಾನ ನಡೆಯುತ್ತಿದೆ. ಈ ಕಳ್ಳತನವನ್ನು ಹಿಡಿಯಲು ನಮಗೆ ಬಹಳ ಸಮಯ ಹಿಡಿಯಿತು. ಈ ಮತದಾರರ ಪಟ್ಟಿಯಲ್ಲಿ ಅನೇಕ ಜನರ ತಂದೆಯ ಹೆಸರಿನ ಮುಂದೆ ಏನೋ ಬರೆಯಲಾಗಿದೆ. ಮತದಾರರ ಪಟ್ಟಿಯಲ್ಲಿ ಅನೇಕ ಮನೆಗಳ ವಿಳಾಸ ಶೂನ್ಯವಾಗಿದೆ. ನಕಲಿ ಮತದಾರರ ಸಂಖ್ಯೆ ತುಂಬಾ ಹೆಚ್ಚಾಗಿದೆ. ಮೂರು ಬಾರಿ ಮತ ಚಲಾಯಿಸಿದ 11 ಸಾವಿರ ಅನುಮಾನಾಸ್ಪದ ಜನರಿದ್ದಾರೆ. ಈ ಜನರು ಎಲ್ಲಿಂದ ಬರುತ್ತಿದ್ದಾರೆ. ಒಂದೇ ವಿಳಾಸದಲ್ಲಿ 46 ಮತದಾರರಿದ್ದಾರೆ.

ಮತಗಳ್ಳತನವಾಗಿರುವುದನ್ನು ರಾಹುಲ್ ಗಾಂಧಿ ದಾಖಲೆಗಳು ಸಾರಿಸಾರಿ ಹೇಳುತ್ತವೆ...

ಕಳೆದ ಲೋಕಸಭಾ ಚುನಾವಣೆಯಲ್ಲಿ ಇಡೀ ದೇಶಾದ್ಯಂತ ಯಾವ ರೀತಿ ಮತಗಳ್ಳತನ ನಡೆದಿದೆ ಎಂಬುದನ್ನು ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ, ದಾಖಲೆಗಳ ಸಹಿತ ಇಂದು ದೇಶದ ಜನರ ಮುಂದಿಟ್ಟಿದ್ದಾರೆ. ಈ ಎಲ್ಲಾ ಮಾಹಿತಿಗಳು ಚುನಾವಣಾ ಆಯೋಗವೇ ನೀಡಿದ ದಾಖಲೆಗಳಾಗಿವೆ.



ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದ ವಿರುದ್ಧ ವ್ಯಾಪಕವಾದ ಜನಾಕ್ರೋಶ ವಿದ್ದರೂ ಅವರು ಹೇಗೆ ಮತಗಳ್ಳತನದ ಮೂಲಕ ಅಧಿಕಾರದ ಗದ್ದುಗೆ ಏರಲು ಸಾಧ್ಯವಾಯಿತು ಎನ್ನುವುದಕ್ಕೆ ಇಂದು ರಾಹುಲ್ ಗಾಂಧಿ ಅವರು ಬಿಡುಗಡೆ ಮಾಡಿರುವ ದಾಖಲೆಗಳು ಸಾಕ್ಷಿ.

ಚುನಾವಣಾ ಆಯೋಗದ ದುರುಪಯೋಗ, ಮತ ಕಳವು ಮತ್ತು ಅಧಿಕಾರ ದುರ್ಬಳಕೆಯ ಮೂಲಕ ಪ್ರಧಾನಿ ಯಾಗಿರುವ ಮೋದಿ ಅವರಿಗೆ ತಮ್ಮ ಹುದ್ದೆಯಲ್ಲಿ ಮುಂದು ವರೆಯಲು ಯಾವ ನೈತಿಕತೆಯೂ ಇಲ್ಲ. ಈ ಕೂಡಲೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಹಾಗೂ ಸರ್ಕಾರ ವಿಸರ್ಜನೆ ಮಾಡಬೇಕು ಎಂದು ಆಗ್ರಹಿಸುತ್ತೇನೆ. ಈ ಬಗ್ಗೆ ಕಾಂಗ್ರೆಸ್ ಪಕ್ಷ ದೇಶಾದ್ಯಂತ ಧ್ವನಿಯೆತ್ತಿ, ಬಿಜೆಪಿಯ ಈ ಎಲ್ಲಾ ಅನಾಚಾರಗಳನ್ನು ಪ್ರತಿಯೊಬ್ಬರಿಗೂ ಅರ್ಥ ಮಾಡಿಸುವ ಕೆಲಸ ಮಾಡಲಿದೆ.

ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ದಾಖಲೆಗಳನ್ನು, ರಾಹುಲ್ ಗಾಂಧಿ ಅವರ ಮಾರ್ಗದರ್ಶನದಲ್ಲಿ ಸುದೀರ್ಘ 6 ತಿಂಗಳ ಕಾಲ ಹಲವು ಮಂದಿ ಅಧ್ಯಯನ ನಡೆಸಿ, ಮತಗಳ್ಳತನದ ಇಂಚಿಂಚೂ ಮಾಹಿತಿಯನ್ನು ಪತ್ತೆಹಚ್ಚಲಾಗಿದೆ. ಲೋಕ ಸಭಾ ಚುನಾವಣೆ ಯಲ್ಲಿ ಬಿಜೆಪಿ ಪಕ್ಷ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಕೇವಲ ಮೂರೂವರೆ ಲಕ್ಷ ಮತದಾರರಿರುವ ಮಹದೇವಪುರ ಕ್ಷೇತ್ರದಲ್ಲಿ 1ಲಕ್ಷದ 250 ಮತಗಳನ್ನು ಅಕ್ರಮವಾಗಿ ಪಡೆದುಕೊಂಡು ಚುನಾವಣೆಯಲ್ಲಿ ಜಯಿಸಿದೆ. ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಕಲಿ ಮತದಾರರು, ನಕಲಿ ವಿಳಾಸ ಹೊಂದಿರುವ ಮತದಾರರು, ಒಂದೇ ವಿಳಾಸದಲ್ಲಿ ನೂರಾರು ಮಂದಿ ಮತದಾರರ ವಾಸ, ಗುರುತು ಹಿಡಿಯಲು ಸಾಧ್ಯವೇ ಇಲ್ಲದಂತಹ ಮತದಾರರ ಫೋಟೋಗಳು ಹಾಗೂ ಫಾರ್ಮ್ 6ರಡಿ ಮೊದಲ ಬಾರಿಗೆ ಮತ ಚಲಾಯಿಸಿದ ವಯೋವೃದ್ಧರು– ಹೀಗೆ 5 ರೀತಿಯಲ್ಲಿ ಚುನಾವಣಾ ಅಕ್ರಮ ಎಸಗಲಾಗಿದೆ.

ರಾಜ್ಯದಲ್ಲಿ ಅಧಿಕಾರ ಹಸ್ತಾಂತರ ಅನಿವಾರ್ಯವಾದರೆ ಮುಂದೇನು?

ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್‌ರಿಂದ ಮಾಹಿತಿ ಪಡೆದ ಗೃಹ ಸಚಿವ ಅಮಿತ್ ಶಾ

ಬೆಂಗಳೂರು, ಆ.7(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ಸಮಯ ಎದುರಾದರೆ ಕರ್ನಾಟಕದಲ್ಲಿನ ರಾಜಕೀಯ ಬೆಳವಣಿಗೆ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಹಿತಿ ಪಡೆದಿದ್ದಾರೆ.



ಇಂದು ಸಂಸತ್ ಭವನದ ತಮ್ಮ ಕಚೇರಿಗೆ ವಿಧಾನಸಭೆಯ ವಿಪಕ್ಷ ನಾಯಕ ಆರ್. ಅಶೋಕ್ ಅವರನ್ನು ತುರ್ತಾಗಿ ಕರೆಸಿಕೊಂಡ ಶಾ, ಈ ಕುರಿತು ಮಾತುಕತೆ ನಡೆಸಿದರು. ಸಿದ್ದರಾಮಯ್ಯ ಮುಖ್ಯಮಂತ್ರಿಗಾದಿಯಿಂದ ಇಳಿಯದಿದ್ದರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮುಂದಿನ ನಡೆಯೇನು.

ನಾಯಕನ ಆಯ್ಕೆ ವಿಚಾರದಲ್ಲಿ ಕಾಂಗ್ರೆಸ್ ಶಾಸಕರ ಅಭಿಪ್ರಾಯ ಯಾರ ಪರ ಮೂಡಬಹುದು. ಒಂದು ವೇಳೆ ಅವರಲ್ಲಿ ಒಡಕು ಉದ್ಭವಿಸಿದರೆ, ಮುಂದಿನ ನಡೆಗಳ ಬಗ್ಗೆಯೂ ವಿವರಣೆ ಪಡೆದಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರ ಹಗರಣಗಳ ಮಾಹಿತಿ ಪಡೆದಿದ್ದಲ್ಲದೆ, ಸೋಮವಾರದಿಂದ ಆರಂಭವಾಗಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಬಿಜೆಪಿ ಹೋರಾಟ ಕುರಿತ ಕಾರ್ಯಕ್ರಮಗಳ ಮಾಹಿತಿ ಪಡೆದಿದ್ದಾರೆ.

ಅಮಿತ್ ಶಾ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ್, ಕರ್ನಾಟಕದ ಇತ್ತೀಚಿನ ರಾಜಕೀಯ ಬೆಳವಣಿಗೆ ಕುರಿತು ತಮ್ಮಿಂದ ಮಾಹಿತಿ ಪಡೆದುಕೊಂಡರು.

ಚಾಮುಂಡಿಬೆಟ್ಟದಲ್ಲಿ ಉರುಳಿದ ಬಸ್



ಉರುಳಿ ಬಿದ್ದ ಬಸ್ ಅನ್ನು ಕ್ರೇನ್ ಮೂಲಕ ಎಳೆದೊಯ್ಯುತ್ತಿರುವುದು.

ಆದರೆ ಚಾಮುಂಡಿಬೆಟ್ಟದ ನಾಯಕರ ಬೀದಿ ನಿವಾಸಿಯಾಗಿರುವ ವಿದ್ಯಾರ್ಥಿನಿ ಬಿಂದು(19) ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದು, ಅವರು ಚೇತರಿಸಿಕೊಂಡಿದ್ದಾರೆ.


ಮೈಸೂರಿನಿಂದ ಬೆಟ್ಟಕ್ಕೆ ಹೋಗುವ ರಸ್ತೆ ಗಾಳಿ ಗೋಪುರದಿಂದ ತಿರುವು ಪಡೆದುಕೊಳ್ಳುವಾಗಲೇ ಅದರ ವೇಗ 30 ಕಿ.ಮೀ.ಗಿಂತ ಕಡಿಮೆಯಾಗಿದೆ. ಬಸ್ ಮೇಲೇರುತ್ತಿತ್ತು. ಹಠಾತ್ತನೆ ಸ್ಟೇರಿಂಗ್ ಲಾಕ್ ಆದ ಕಾರಣ ಬಸ್ ಬಲಭಾಗಕ್ಕೆ ಸಾಗಿ ತಡೆಗೋಡೆಯನ್ನು ಉಜ್ಜಿಕೊಂಡು ಹೋಗಿ ಕೊನೆಗೆ ತಡೆಗೋಡೆ ಕುಸಿದು 5 ಅಡಿ ಆಳವಿರುವ ಕೆಳ ಭಾಗದ ರಸ್ತೆಗೆ ಉರುಳಿ ಬಿದ್ದಿದೆ.

ತುಂಡಾದ ಕ್ರೇನ್ ರೋಪ್: ಇದರ ಪರಿಣಾಮವಾಗಿ ಚಾಮುಂಡಿಬೆಟ್ಟದಿಂದ ಮೈಸೂರು ಕಡೆಗೆ ಈ ರಸ್ತೆಯಲ್ಲಿ ಬರುವ ವಾಹನ ಸಂಚಾರ ಕೆಲ ಸಮಯ ಸ್ಥಗಿತಗೊಂಡಿತ್ತು. ಬಸ್ ಅನ್ನು ಮೇಲೆತ್ತಲು ಕೆಎಸ್‌ಆರ್‌ಟಿಸಿಯ ಕ್ರೇನ್ ಅನ್ನು ತರಲಾಯಿತು. ಉರುಳಿ ಬಿದ್ದಿದ್ದ ಬಸ್ ಅನ್ನು ಕ್ರೇನ್ ಮೂಲಕ ಮೇಲೆತ್ತುತ್ತಿದ್ದಂತೆಯೇ ಅದರ ರೋಪ್ ತುಂಡರಿಸಿದ ಪರಿಣಾಮ ಬಸ್ ಮತ್ತೆ ಕೆಳಗೆ ಬಿದ್ದಿದೆ. ಅದೃಷ್ಟವಶಾತ್ ಈ ಸಂದರ್ಭದಲ್ಲಿ ಬಸ್‌ನ ಕೆಳ ಭಾಗ ಹಾಗೂ ಅಕ್ಕಪಕ್ಕದಲ್ಲಿ ಯಾರೂ ಇಲ್ಲದ ಕಾರಣ ಯಾವುದೇ ಅನಾಹುತ ಸಂಭವಿಸಿಲ್ಲ.

ನೂತನ ತಂತ್ರಜ್ಞಾನದ ಬಸ್ಸಂತೆ!: ಕಳೆದ 6 ತಿಂಗಳ ಹಿಂದಷ್ಟೇ ಖರೀದಿಸಿರುವ ಬಸ್‌ಗಳು ಸುಸಜ್ಜಿತ ಹಾಗೂ ನೂತನ ತಂತ್ರಜ್ಞಾನವಿರುವ ಬಸ್‌ಗಳು ಎಂದು ಕೆಎಸ್‌ಆರ್‌ಟಿಸಿ ಹೇಳಿಕೊಂಡಿತ್ತು ಸಹಜ ವಾಗಿ ಇಂತಹ ಬಸ್‌ಗಳ ಇಂಜಿನ್ ಆಫ್ ಆದಾಗ ಮಾತ್ರ ಸ್ಟೇರಿಂಗ್ ಲಾಕ್ ಆಗುತ್ತದೆ ಎಂದು ಹೇಳಲಾಗಿದ್ದು, ಚಾಲನೆಯಲ್ಲಿರುವಾಗಲೇ ಸ್ಟೇರಿಂಗ್ ಲಾಕ್ ಆಗಿರುವುದು ಹೊಸ ತಂತ್ರಜ್ಞಾನದ ಬಗ್ಗೆ ಅನುಮಾನ ಬರುವಂತಾಗಿದೆ.

ಘಟನಾ ಸ್ಥಳಕ್ಕೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಸುಂದರ ರಾಜ್, ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ಸಿದ್ಧಾರ್ಥನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಶ್ರೀಧರ್, ಕೆಎಸ್‌ಆರ್‌ಟಿಸಿ ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಪಿ. ವೀರೇಶ್, ಡಿಎಂವಿ ಜಯಕುಮಾರ್, ಕುವೆಂಪುನಗರ ಡಿಪೋ ಮ್ಯಾನೇಜರ್ ಚೇತನ್ ಕುಮಾರ್ ಭೇಟಿ ನೀಡಿದ್ದರು.

ಯುವತಿಗೆ ಮೆಸೇಜ್; ಯುವಕನ ಮೇಲೆ ಆಕೆಯ ಲವರ್ ಅಂಡ್ ಗ್ಯಾಂಗ್ ಅಟ್ಯಾಕ್



ಮೈಸೂರು, ಆ.7(ಬಿಎಲ್‌ಯು)– ಯುವತಿಗೆ ಮೆಸೇಜ್ ಮಾಡಿದ ಯುವಕ ಮತ್ತು ಆತನ ಸ್ನೇಹಿತರ ಮೇಲೆ ಆಕೆಯ ಲವರ್ ಅಂಡ್ ಗ್ಯಾಂಗ್ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಶಾರದಾದೇವಿನಗರದಲ್ಲಿ ನಡೆದಿದೆ.

ಶಾರದಾದೇವಿನಗರದ ವಿನೋದ್ ಎಂಬಾತ ತನಗೆ ಪರಿಚಯವಿದ್ದ ಯುವತಿಗೆ ಮೆಸೇಜ್ ಮಾಡಿದ್ದಾನೆ. ಈ ವಿಚಾರವನ್ನು ಯುವತಿ ತನ್ನ ಪ್ರೇಮಿ ಕಾರ್ತಿಕ್‌ಗೆ ತಿಳಿಸಿದ್ದಾಳೆ.

ಈ ವಿಷಯ ತಿಳಿದು ಕೋಪೋದ್ರಿಕ್ತನಾದ ಕಾರ್ತಿಕ್ ತನ್ನ ಸ್ನೇಹಿತರಾದ ಅರ್ಜುನ, ಪ್ರಶಾಂತ್, ಗುರು, ತರುಣ್ ಜೊತೆ ಗುಂಪು ಕಟ್ಟಿಕೊಂಡು ಶಾರದಾದೇವಿನಗರದ ಬ್ಯಾಂಕರ್ಸ್ ಕ್ಲಬ್ ಬಳಿ ಹೋಗಿದ್ದಾನೆ. ಅಲ್ಲಿ ತನ್ನ ಸ್ನೇಹಿತರಾದ ಅಭಿಲಾಷ್ ಹಾಗೂ ಗುರು ಜೊತೆ ನಿಂತಿದ್ದ ವಿನೋದ್ ಮೇಲೆ ರಾಡ್‌ನಿಂದ ಹಲ್ಲೆ ನಡೆಸಿದ್ದಾರೆ. ಈ ವೇಳೆ ತಡೆಯಲು ಬಂದ ವಿನೋದ್ ಸ್ನೇಹಿತರಾದ ಅಭಿಲೇಷ್ ಹಾಗೂ ಗುರು ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ರಕ್ತಸ್ರಾವದಿಂದ ಕುಸಿದು ಬಿದ್ದಿದ್ದ ವಿನೋದ್, ಅಭಿಲಾಷ್ ಹಾಗೂ ಗುರುವನ್ನು ಸ್ಥಳೀಯರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಕಾರ್ತಿಕ್ ಮತ್ತು ಗ್ಯಾಂಗ್ ಮೇಲೆ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನವದೆಹಲಿಯಲ್ಲಿ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಭೇಟಿ ಮಾಡಿದ ಸಂಸದ ಯದುವೀರ್

ಮೈಸೂರು-ತಿರುಪತಿ ನಡುವೆ ಹೆಚ್ಚಿನ ರೈಲು ಸೇವೆ ಒದಗಿಸಲು ಮನವಿ

ನವದೆಹಲಿ, ಆ.7(ಬಿಎಲ್ ಯು)– ಸಾಂಸ್ಕೃತಿಕ ನಗರಿ ಮೈಸೂರಿನಿಂದ ದೇಶದ ಖ್ಯಾತ ಧಾರ್ಮಿಕ ಕ್ಷೇತ್ರವಾದ ತಿರುಪತಿಗೆ ಹೆಚ್ಚುವರಿ ರೈಲು ಸೇವೆ ಒದಗಿಸುವಂತೆ ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಇಂದು ಅಶ್ವಿನ್ ವೈಷ್ಣವ್ ಅವರನ್ನು ಭೇಟಿ ಮಾಡಿದ ಯದುವೀರ್ ಅವರು ಮೈಸೂರಿನ ಜನರಿಗೆ ತಿರುಪತಿಗೆ ಪ್ರಯಾಣಿಸಲು ಹೆಚ್ಚುವರಿ ರೈಲಿನ ಆಗತ್ಯತೆಯನ್ನು ಮನದಟ್ಟು ಮಾಡಿದರು.

ಮೈಸೂರು ಹಾಗೂ ಸುತ್ತಮುತ್ತಲಿನ ಜನರು ತಿರುಪತಿಗೆ ನಿರಂತರವಾಗಿ ಭೇಟಿ ನೀಡುತ್ತಿರುತ್ತಾರೆ. ಭಕ್ತರ ದೀರ್ಘಕಾಲದ ಬೇಡಿಕೆಯಂತೆ ತಿರುಪತಿ–ಬೆಂಗಳೂರು ವಂದೇ ಭಾರತ್ ರೈಲು ಸಂಚಾರವನ್ನು ಮೈಸೂರಿನವರೆಗೆ ವಿಸ್ತರಿಸಬೇಕು ಎಂದು ಮನವಿ ಮಾಡಿದರು.

ಪ್ರಸ್ತುತ ಸಂಚರಿಸುತ್ತಿರುವ ರೈಲುಗಳು ವಿರಳವಾಗಿದ್ದು, ಕೆಲವು ದೀರ್ಘ ಪ್ರಯಾಣದ ಅವಧಿಯಾಗಿದೆ. ಇದರಿಂದ ಹಿರಿಯ ನಾಕರಿಕರು, ಭಕ್ತರು ಹಾಗೂ ಪ್ರವಾಸಿಗರಿಗೆ ಅನಾನುಕೂಲವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಿಂದ ತಿರುಪತಿಗೆ ಹೆಚ್ಚಿನ ರೈಲು ಸೇವೆ ಅತ್ಯವಶ್ಯವಾಗಿದೆ ಎಂದು ಯದುವೀರ್ ಅವರು ಅಶ್ವಿನ್ ವೈಷ್ಣವ್ ಅವರಿಗೆ ಪರಿಸ್ಥಿತಿ ಮನವರಿಕೆ ಮಾಡಿಕೊಟ್ಟರು.



ನವದೆಹಲಿಯಲ್ಲಿ ಗುರುವಾರ ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರನ್ನು ಭೇಟಿ ಮಾಡಿದ ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೈಸೂರು–ತಿರುಪತಿ ನಡುವೆ ಹೆಚ್ಚಿನ ರೈಲು ಸೇವೆ ಒದಗಿಸಬೇಕೆಂದು ಮನವಿ ಮಾಡಿದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್ ಫಾರಂ ಲಭ್ಯತೆ ಮತ್ತು ನಿರ್ವಹಣಾ ಸೌಲಭ್ಯ ಪರಿಗಣಿಸಿ, ಮೈಸೂರು–ರೇಣಿಗುಂಟ, ತಿರುಪತಿ– ಮೈಸೂರು ವಂದೇ ಭಾರತ್ ಎಕ್ಸ್ ಪ್ರೆಸ್ ರೈಲು ಸಂಚಾರ ಆರಂಭಿಬಹುದಾಗಿದೆ. ಈ ಹಿನ್ನೆಲೆ ವಂದೇ ಭಾರತ್ ಎಕ್ಸ್ ಪ್ರೆಸ್ ಸೇವೆ ವಿಸ್ತರಿಸುವಂತೆ ಮನವಿ ಮಾಡಿದರು.

ಇದರಿಂದ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯ ಜನರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮೈಸೂರು–ರೇಣಿಗುಂಟ, ತಿರುಪತಿ ವಂದೇ ಭಾರತ್ ಎಕ್ಸ್ ಪ್ರೆಸ್ ರೈಲು ಆರಂಭವಾದರೆ ಕರ್ನಾಟಕದ ಮೈಸೂರು ಭಾಗದಿಂದ ಸಾವಿರಾರು ಭಕ್ತರು ತೆರಳಿ ದೇವರ ದರ್ಶನ ಪಡೆಯಲು ಅನುಕೂಲವಾಗುತ್ತದೆ ಎಂದು ಯದುವೀರ್ ಸಮಗ್ರ ವಿವರಣೆ ನೀಡಿದರು.

ಯದುವೀರ್ ಅವರ ಮನವಿಗೆ ಸಕರಾತ್ಮಕವಾಗಿ ಸ್ಪಂದಿಸಿದ ಅಶ್ವಿನ್ ವೈಷ್ಣವ್ ಅವರು, ಅತೀ ಶೀಘ್ರದಲ್ಲಿ ಈ ಕುರಿತಂತೆ ಸೂಕ್ತ ನಿರ್ಧಾರ ಮಾಡುತ್ತೇನೆ ಎಂದು ಭರವಸೆ ನೀಡಿದರು.

ರಾಮೇಶ್ವರ್‌ವರೆಗೂ ರೈಲು ಸೇವೆಗೆ ಮನವಿ– ತಮಿಳುನಾಡಿನ ಪವಿತ್ರ ಯಾತ್ರಾ ಕ್ಷೇತ್ರವಾದ ರಾಮೇಶ್ವರಂಗೆ ಮೈಸೂರಿನಿಂದ ಇದೂವರೆಗೆ ಯಾವುದೇ ನೇರ ರೈಲು ಸಂಪರ್ಕವಿಲ್ಲ. ಇದರಿಂದ ಮೈಸೂರು ಭಾಗದ ಜನರಿಗೆ ಆ ತೀರ್ಥ ಕ್ಷೇತ್ರಕ್ಕೆ ತೆರಳಲು ಅನಾನುಕೂಲವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು– ರಾಮೇಶ್ವರಂ ನಡುವೆ ನೇರ ರೈಲು ಸಂಚಾರ ಆರಂಭಿಸಬೇಕು ಎಂದು ಯದುವೀರ್ ಅವರು ಅಶ್ವಿನ್ ವೈಷ್ಣವ್ ಅವರಿಗೆ ಮನವಿ ಸಲ್ಲಿಸಿದರು. ಮೈಸೂರು–ಚಾಮರಾಜನಗರ ರೈಲು ಮಾರ್ಗದ ವಿದ್ಯುದ್ದೀಕರಣ ತ್ವರಿತಗೊಳಿಸುವಲ್ಲಿ ಕಾರಣರಾದ ಅಶ್ವಿನ್ ವೈಷ್ಣವ್ ಅವರಿಗೆ ಇದೇ ವೇಳೆ ಯದುವೀರ್ ಅವರು ಕೃತಜ್ಞತೆ ಸಲ್ಲಿಸಿದರು. ಈ ಕಾರ್ಯದಿಂದ ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆಗೆ ನಿರ್ಣಾಯಕ ಹೆಜ್ಜೆಯಾಗಿದೆ. ಇದರಿಂದ ದೀರ್ಘಕಾಲಿಕ ಸಮಸ್ಯೆ ಪರಿಹಾರವಾಗಿದೆ ಎಂದು ತಿಳಿಸಿದರು.

ಮಾದಕ ವಸ್ತು ವಿರುದ್ಧ ಮುಂದುವರೆದ ಮೈಸೂರು ಪೊಲೀಸರ ಸಮರ



ಮೈಸೂರು, ಆ.7– ಮೈಸೂರಲ್ಲಿ ಮಾದಕ ವಸ್ತು ಜಾಲದ ವಿರುದ್ಧ ಪೊಲೀಸರ ಕಾರ್ಯಾಚರಣೆ ಮುಂದುವರೆದಿದ್ದು, ಇಂದು ಗಾಂಜಾ ಪೆಡ್ಲರ್‌ಗಳ ಬಂಧನದ ಜೊತೆಗೆ ಕೆಲವರ ಗಡಿಪಾರಿಗೂ ಆದೇಶಿಸಲಾಗಿದೆ.

ಗುರುವಾರ ಇಬ್ಬರು ಗಾಂಜಾ ಪೆಡ್ಲರ್‌ಗಳನ್ನು ಬಂಧಿಸಿ, 83 ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಖಾಲಿ ಜಾಗದಲ್ಲಿ ಬೆಳೆಯಲಾಗಿದ್ದ ಒಂದೂವರೆ ಕೆಜಿ ಗಾಂಜಾ ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 129 ಮಂದಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, 14 ಮಂದಿ ವಿರುದ್ಧ ಮಾದಕ ವಸ್ತು ಸೇವನೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಕೆಲ ಗಾಂಜಾ ಪೆಡ್ಲರ್‌ಗಳ ಗಡಿಪಾರಿಗೆ ಆದೇಶಿಸಲಾಗಿದೆ.

ಇಂದು ವಿಶೇಷವಾಗಿ ವಿವಿಧ ಬಡಾವಣೆಗಳಲ್ಲಿ ನಿಲುಗಡೆ ಮಾಡಿದ್ದ ಆಟೋಗಳು, ಟ್ರಕ್‌ಗಳು ಇನ್ನಿತರ ವಾಹನಗಳನ್ನು ಪರಿಶೀಲಿಸಲಾಗಿದೆ. ಸಂಚಾರ ಪೊಲೀಸರೂ ವಿಶೇಷ ಕಾರ್ಯಾಚರಣೆ ನಡೆಸಿ, ಟ್ರಿಬ್ಬಲ್ ಡ್ರೈವಿಂಗ್, ರ್‍ಯಾಶ್ ಡ್ರೈವಿಂಗ್ ಮಾಡುತ್ತಿದ್ದವರ ವಶಕ್ಕೆ ಪಡೆದು, ಪ್ರಕರಣ ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ ನೀಡಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಮಹಿಳೆಗೆ ಇರಿತ; ಯುವಕನ ಬಂಧನ

ಯುವಕ ಮಾದಕ ವಸ್ತು ವ್ಯಸನಿ; ಪೊಲೀಸರಿಗೆ ದೂರು

ಮೈಸೂರು, ಆ.7(ವಿವಿಹೆಚ್)– ಕ್ಷುಲ್ಲಕ ಕಾರಣಕ್ಕಾಗಿ ಯುವಕನೋರ್ವ ಮಹಿಳೆಯನ್ನು ಡ್ರ್ಯಾಗರ್‌ನಿಂದ ಇರಿದ ಘಟನೆ ಮೈಸೂರಿನ ಗಾಂಧಿ ನಗರ 8ನೇ ಕ್ರಾಸ್‌ನಲ್ಲಿ ನಡೆದಿದ್ದು, ನರಸಿಂಹರಾಜ ಠಾಣೆ ಪೊಲೀಸರು ಯುವಕನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಹಿಳೆಯ ಮನೆ ಮುಂದೆ ಯುವಕ ಸಿಗರೇಟ್ ಸೇದುತ್ತಾ ಕುಳಿತಿದ್ದ ಎಂದು ಹೇಳಲಾಗಿದ್ದು, ಅದನ್ನು ಆಕ್ಷೇಪಿಸಿದ್ದಕ್ಕಾಗಿ ಮಹಿಳೆಯ ತಾಯಿ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿದ್ದಾನೆ. ಬಿಡಿಸಲು ಬಂದ 47 ವರ್ಷದ ಮಹಿಳೆಯನ್ನು ಡ್ರ್ಯಾಗರ್‌ನಿಂದ ಇರಿದಿದ್ದು, ಸ್ಥಳೀಯರು ಯುವಕನಿಂದ ಮಹಿಳೆಯನ್ನು ಬಿಡಿಸಿ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ತೆರಳಿ ಯುವಕನನ್ನು ಬಂಧಿಸಿದ್ದಾರೆ. ಈ ವೇಳೆ ತಾನು ಪಾನಮತ್ತನಾಗಿದ್ದು, ಮಹಿಳೆ ನಿಂದಿಸಿದ ಕಾರಣದಿಂದ ಡ್ರ್ಯಾಗರ್‌ನಿಂದ ಇರಿದಿದ್ದಾಗಿ ಪೊಲೀಸರಿಗೆ ತಿಳಿಸಿದ್ದಾನೆ. ಆದರೆ ಯುವಕ ಗಾಂಜಾ ಸೇವನೆ ಮಾಡುತ್ತಿದ್ದ ಎಂದು ಮಹಿಳೆ ದೂರಿನಲ್ಲಿ ತಿಳಿಸಿರುವುದರಿಂದ ನಾಳೆ (ಆ.8) ಆತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ. ಗಾಂಜಾ ಸೇವಿಸಿರುವುದು ಸಾಬೀತಾದರೆ ಮಾದಕ ವಸ್ತು ಸೇವನೆ ಕಾಯ್ದೆಯಡಿ ಕೂಡ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಡೆದ ಸ್ಥಳದಲ್ಲಿರುವ ಪಾರ್ಕ್‌ನಲ್ಲಿ ಪುಂಡರು ಗಾಂಜಾ ಸೇವನೆ ಮಾಡುತ್ತಾರೆ. ಅದನ್ನು ಪೊಲೀಸರು ತಡೆಗಟ್ಟಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಇಂದು ಮಹಿಳೆಯನ್ನು ಡ್ರ್ಯಾಗರ್‌ನಲ್ಲಿ ಇರಿದಿರುವ ಯುವಕನೂ ಕೂಡ ಮಾದಕ ವಸ್ತುವಿನ ದಾಸನಾಗಿದ್ದು, ಪದೇ ಪದೆ ಗಲಾಟೆ ಮಾಡಿಕೊಳ್ಳುತ್ತಾನೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

> ಪಾನಮತ್ತನಾಗಿದ್ದಾಗ ಮಹಿಳೆ ತನ್ನನ್ನು ನಿಂದಿಸಿದ್ದರಿಂದ ಕೋಪಗೊಂಡು ಆಕೆಯನ್ನು ಇರಿದಿದ್ದಾಗಿ ಆರೋಪಿ ಹೇಳಿದ್ದಾನೆ. ಆದರೆ ಆತ ಗಾಂಜಾ ಸೇವನೆ ಮಾಡಿದ್ದಾನೆ ಎಂದು ದೂರಿನಲ್ಲಿ ತಿಳಿಸಿರುವುದರಿಂದ ನಾಳೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆರೋಪಿ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟರೆ ಮಾದಕ ವಸ್ತು ಸೇವನೆ ಸೆಕ್ಷನ್ ಅನ್ನು ಕೂಡ ಎಫ್‌ಐಆರ್‌ನಲ್ಲಿ ಸೇರಿಸಲಾಗುತ್ತದೆ. ಹಲ್ಲೆಗೊಳಗಾಗಿರುವ ಸಂತ್ರಸ್ತೆಗೆ ಕಾನೂನಿನಡಿ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಮಹಿಳೆಯು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.
>
> – ಲಕ್ಷ್ಮೀಕಾಂತ ತಳವಾರ್, ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್.

ಪೊಲೀಸ್ ಕಚೇರಿ ಅನತಿ ದೂರದಲ್ಲಿ ಗಾಂಜಾ ಸಾಗಿಸುತ್ತಿದ್ದ ಪೆಡ್ಲರ್ ಬಂಧನ

ಮೈಸೂರು, ಆ.7– ಡ್ರಗ್ಸ್ ಫ್ಯಾಕ್ಟ್ರಿ ಪತ್ತೆಯಾದ ಬಳಿಕ ಪೊಲೀಸರು ವ್ಯಾಪಕ ಕಾರ್ಯಾಚರಣೆ ನಡೆಸುತ್ತಿದ್ದರೂ ಎಸಿಪಿ ಕಚೇರಿ ಸಮೀಪವೇ ನಿರ್ಭಯವಾಗಿ ಗಾಂಜಾ ಸಾಗಿಸುತ್ತಿದ್ದ ಪೆಡ್ಲರ್ ಅನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸೆಂಟ್ರಿಂಗ್ ಸಾಮಗ್ರಿಗಳನ್ನು ಬಾಡಿಗೆ ನೀಡುವ ಮಂಡಿಮೊಹಲ್ಲಾ ನಿವಾಸಿ ಇರ್ಫಾನ್ ಪಾಷಾ ಅಲಿಯಾಸ್ ಬಟಾಣಾ(31) ಎಂಬಾತನನ್ನು ಬುಧವಾರ ವಶಕ್ಕೆ ಪಡೆದು, ಆತನಿಂದ ಸುಮಾರು 860 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಎನ್.ಆರ್.ಉಪವಿಭಾಗದ ಎಸಿಪಿ ಹಾಗೂ ಸಿಸಿಬಿ ಕಚೇರಿಯಿಂದ ಕೇವಲ 100 ಮೀಟರ್ ದೂರದಲ್ಲಿರುವ ಅಶೋಕ ರಸ್ತೆ, ಪಶ್ಚಿಮ 21ನೇ ಕ್ರಾಸ್, ಕಾಂತರಾಜ ಪಾರ್ಕ್ ಬಳಿ ಬುಧವಾರ ಮಧ್ಯಾಹ್ನ 3.40ರ ವೇಳೆಯಲ್ಲಿ ಇರ್ಫಾನ್ ಕೈಯ್ಯಲ್ಲಿ ಕವರ್ ಹಿಡಿದು ನಿಂತಿದ್ದ. ಹಳೇ ಆರೋಪಿಯಾದ ಆತನನ್ನು ಗಮನಿಸಿದ ಸಿಸಿಬಿ ಸಿಬ್ಬಂದಿ ರಾಜು, ವಿಚಾರಿಸಲೆಂದು ಸಮೀಪಕ್ಕೆ ಹೋಗುವಾಗ ಆತ ಅಲ್ಲಿಂದ ಕಾಲ್ಕೀಳಲು ಪ್ರಯತ್ನಿಸಿದ್ದಾನೆ. ಅನುಮಾನಗೊಂಡ ರಾಜು, ಆತ ಹಿಡಿದಿದ್ದ ಕವರ್ ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ.

ಕೂಡಲೇ ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಅವರಿಗೆ ವಿಷಯ ತಿಳಿಸಿದ್ದು, ಅವರು ಸಬ್‌ಇನ್ಸ್‌ಪೆಕ್ಟರ್ ಲೇಪಾಕ್ಷ ಹಾಗೂ ಹೆಡ್‌ಕಾನ್ಸ್‌ಟೆಬಲ್ ಮಧು ಕುಮಾರ್ ಜೊತೆ ಸ್ಥಳಕ್ಕೆ ದೌಡಾಯಿಸಿದ್ದಾರೆ. ನಿಯಮಾನುಸಾರ ಸಾಕ್ಷಿದಾರರ ಸಮ್ಮುಖದಲ್ಲಿ ಗಾಂಜಾ ವಶಪಡಿಸಿಕೊಂಡು, ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫಾರಿನರ್ ಸಿಗರೇಟ್ ಕೊಟ್ಟರು!

ಮೈಸೂರು, ಆ.7– ಪಾರ್ಕ್‌ನಲ್ಲಿ ಮಾದಕ ವಸ್ತು ಸೇವಿಸಿ ಪೊಲೀಸರಿಗೆ ಸಿಕ್ಕಿಬಿದ್ದ ಯುವಕ, ಅದನ್ನು ಫಾರಿನರ್(ವಿದೇಶಿ) ಒಬ್ಬರು ನೀಡಿದ್ದಾಗಿ ತಿಳಿಸಿದ್ದಾನೆ.

ಲಕ್ಷ್ಮೀಪುರಂ ಪೊಲೀಸ್ ಠಾಣೆ ಸಿಬ್ಬಂದಿ ರಾಜು ಮಾಳಗಿ ಹಾಗೂ ಬಸವರಾಜ ಮುನ್ಯಾಳ್ ಬುಧವಾರ ಸಂಜೆ 7 ಗಂಟೆ ಸಮಯದಲ್ಲಿ ಗಸ್ತಿನಲ್ಲಿದ್ದಾಗ ಕೃಷ್ಣಮೂರ್ತಿಪುರಂ, ಬಲ್ಲಾಳ್ ಸರ್ಕಲ್ ಬಳಿಯ ಮೈಸೂರು ಅನಂತಸ್ವಾಮಿ ಪಾರ್ಕ್‌ನಲ್ಲಿ ಯುವಕನೊಬ್ಬ ನಶೆಯಲ್ಲಿದ್ದನ್ನು ಗಮನಿಸಿದ್ದಾರೆ. ಆತನ ಬಳಿ ಹೋದಾಗ ಮಾದಕ ವಸ್ತು ಸೇವಿಸಿರುವುದು ತಿಳಿದಿದೆ. ಹೆಚ್ಚಿನ ವಿಚಾರಣೆ ನಡೆಸಿದಾಗ ತಾನು ಕೃಷ್ಣ, ಎಳನೀರು ವ್ಯಾಪಾರಿ, ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಯಾರೋ ಫಾರಿನರ್ ಮಾದಕ ವಸ್ತು ತುಂಬಿದ ಸಿಗರೇಟ್ ನೀಡಿದ್ದಾಗಿ ತಿಳಿಸಿದ್ದಾನೆ.

ನಗರದ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲೂ ಮಾದಕ ವ್ಯಸನಿಗಳು ಸಿಕ್ಕಿ ಬೀಳುತ್ತಿದ್ದಾರೆ. ನಿತ್ಯ ಹತ್ತಾರು ಮಂದಿ ವಿರುದ್ಧ ಪ್ರಕರಣ ದಾಖಲಾಗುತ್ತಿದೆ. ಆದರೂ ಪಾರ್ಕ್, ಗಲ್ಲಿ, ಮೈದಾನ, ಹೀಗೆ ಎಲ್ಲೆಂದರಲ್ಲಿ ಮಾದಕ ವಸ್ತು ಸೇವಿಸಿ, ನಶೆಯಲ್ಲಿ ತೇಲುತ್ತಿದ್ದಾರೆ. ಪೊಲೀಸರು ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದರೂ ವ್ಯಸನಿಗಳಿಗೆ ಇಷ್ಟು ಸುಲಭವಾಗಿ ಕೈಸೇರುತ್ತಿರುವುದು ಹೇಗೆ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಆ.12ರಿಂದ ರಾಜ್ಯದಾದ್ಯಂತ ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ

ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಮೈಸೂರು, ಆ.7(ಜಿಎ)–ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಆ.12ರಿಂದ 14ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಎಐಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಾದ್ಯಂತ ನಡೆಯುವ ಅಹೋರಾತ್ರಿ ಧರಣಿಯನ್ನು ಜಿಲ್ಲಾ ಸಮಿತಿ ಹಮ್ಮಿಕೊಂಡಿದ್ದು, ಮೈಸೂರಿನ ಗಾಂಧಿ ವೃತ್ತದ ಬಳಿ ಧರಣಿ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ವೇತನ ಪರಿಷ್ಕರಣೆ ಹಾಗೂ ವಿವಿಧ ಬೇಡಿಕೆಗಳಿಗಾಗಿ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಗಿತ್ತು. ಸರ್ಕಾರ ಹೋರಾಟಕ್ಕೆ ಸ್ಪಂದಿಸಿ, ಪ್ರತಿ ಆಶಾ ಕಾರ್ಯಕರ್ತೆಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡುವ ವೇತನವನ್ನು ಕ್ರೋಢಿಕರಿಸಿ 10 ಸಾವಿರ ರೂ ನಿಗದಿ ಮಾಡಿ, ಬಜೆಟ್‌ನಲ್ಲಿ ವಿಶಿಷ್ಟ ಯೋಜನೆಯನ್ನು ಏಪ್ರಿಲ್‌ನಲ್ಲಿ ನೀಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದರು. ಈವರೆಗೂ ಯಾವುದೇ ಆದೇಶ, ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

2025ರ ಬಜೆಟ್‌ನಲ್ಲಿ ಎಲ್ಲಾ ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನವಾಗಿ 1 ಸಾವಿರ ರೂ. ಹೆಚ್ಚುವರಿಯಾಗಿ ನೀಡುವುದಾಗಿ ತಿಳಿಸಿದ್ದು, ಅದರಲ್ಲಿ ಆಶಾ ಕಾರ್ಯಕರ್ತೆಯರನ್ನು ಸೇರಿಸಿದ್ದು ಇದೀಗ ಕೈಬಿಡಲಾಗಿದೆ. ಮತ್ತೊಂದೆಡೆ ಒಂದು ಸಾವಿರ ಜನಸಂಖ್ಯೆಗೆ ಒಬ್ಬ ಆಶಾ ಕಾರ್ಯಕರ್ತೆಯರನ್ನು ನೇಮಿಸಿಕೊಂಡಿದ್ದು, ರಾಜ್ಯದಲ್ಲಿ 42 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಕಾರ್ಯಕರ್ತೆಯರಿಗೆ ಭರವಸೆ ನೀಡಿದ ಸರ್ಕಾರ ಗ್ಯಾರಂಟಿ ಯೋಜನೆಯ ಆರ್ಥಿಕ ಹೊಡೆತ ಉಂಟಾಗಿ, ಸುಮಾರು 15 ಸಾವಿರ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆದು ಹಾಕುವ ಒಳಸಂಚು ರೂಪಿಸುತ್ತಿದೆ ಎಂದು ಆರೋಪಿಸಿದರು.

ಆಶಾ ಕಾರ್ಯಕರ್ತೆಯರಾಗಿ ಕಾರ್ಯ ನಿರ್ವಹಿಸಲು, ಕನಿಷ್ಠ 10ನೇ ತರಗತಿ ಓದಿರಬೇಕು ಹಾಗೂ ಅವರ ಕಾರ್ಯವೈಖರಿಯನ್ನು ಪರಿಶೀಲಿಸಬೇಕೆಂದು, ಕಾರ್ಯಕರ್ತೆಯರನ್ನು ಬೀದಿಪಾಲು ಮಾಡಲು ನಿರ್ಣಯ ಮಾಡುತ್ತಿದ್ದಾರೆ. ಆರೋಗ್ಯ ಸಚಿವರು ಉಡಾಫೆ ಮಾತುಗಳನ್ನಾಡುತ್ತಿದ್ದಾರೆ. ಅಧಿಕಾರಿಗಳು ಸರ್ಕಾರ ಶಿಫಾರಸ್ಸಿನ ಮೇರೆಗೆ ಕಾರ್ಯನಿರ್ವಹಿಸುವುದಾಗಿ, ಸಬೂಬು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧವಾಗಿ ಅಹೋರಾತ್ರಿ ಧರಣಿ ನಡೆಸಲು ತೀರ್ಮಾನಿಸಿದ್ದು, ಬೇಡಿಕೆಗಳು ಈಡೇರುವವರೆಗೂ ಧರಣಿ ಕೂರಲಾಗುತ್ತದೆ ಎಂದರು.

ಕನಿಷ್ಠ 10ಸಾವಿರ ರೂ. ಕಡ್ಡಾಯವಾಗಿ ನಿಗದಿಯಾಗಬೇಕು. ಬಿಸಿಯೂಟ ಕಾರ್ಯಕರ್ತೆರಿಗೆ ನೀಡಿದ 1 ಸಾವಿರ ರೂ. ಪ್ರೋತ್ಸಾಹ ಧನವನ್ನು ಆಶಾ ಕಾರ್ಯಕರ್ತೆಯರಿಗೂ ನೀಡಬೇಕು. ತರ್ಕಬದ್ಧಗೊಳಿಸಿ ಆಶಾ ಕಾರ್ಯರ್ತೆಯರ ಸಂಖ್ಯೆಯನ್ನು ಕಡಿತಗೊಳಿಸಬಾರದು, ಅವೈಜ್ಞಾನಿಕ ಕಾರ್ಯನಿರ್ವಹಣಾ ಮೌಲ್ಯಮಾಪನ ಕೈಬಿಡಬೇಕು ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಧರಣಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾಗ್ಯ, ಮಣಿಲಾ, ಕೋಮಲ, ಪಿ.ಎಸ್.ಸಂಧ್ಯಾ, ಪವಿತ್ರಾ, ಸೀಮಾ ಉಪಸ್ಥಿತರಿದ್ದರು.

ಶೈಕ್ಷಣಿಕ ಚಟುವಟಿಕೆ ಉಸ್ತುವಾರಿಗೆ ಇತರೆ ಇಲಾಖಾ ಅಧಿಕಾರಿಗಳ ನಿಯೋಜನೆ ಆದೇಶ ಹಿಂಪಡೆಯಲು ಎಂಎಲ್‌ಸಿ ವಿವೇಕಾನಂದ ಆಗ್ರಹ

ಮೈಸೂರು, ಆ.7(ಎಂಕೆ)– ಶೈಕ್ಷಣಿಕ ಕ್ಷೇತ್ರದ ಚಟುವಟಿಕೆಗಳನ್ನು ವೀಕ್ಷಿಸಲು ಇತರೆ ಇಲಾಖೆ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸಿರುವ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆಯುವಂತೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮನವಿ ಮಾಡಿದ್ದಾರೆ.



ಕೆ.ವಿವೇಕಾನಂದ

ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಸರ್ಕಾರ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, ಶೈಕ್ಷಣಿಕ ಕೇತ್ರದ ಅಭಿವೃದ್ಧಿ ದೃಷ್ಟಿಯಿಂದ ಹೊಸ ಹೊಸ ಆಲೋಚನೆಗಳನ್ನು ಅನುಷ್ಠಾನಗೊಳಿಸಲು ಹಲವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿರುವುದು ಸರಿಯಾದರೂ ಹೊಸ ಆಲೋಚನೆಗಳನ್ನು ಅನುಷ್ಠಾನ ಮಾಡುವ ಮೊದಲು ಶಿಕ್ಷಣ ತಜ್ಞರ, ಶಿಕ್ಷಕರ, ಪದವೀಧರ ಕ್ಷೇತ್ರದ ಶಾಸಕರು, ಶಿಕ್ಷಕರ ಸಂಘಟನೆಯ ಪದಾಧಿಕಾರಿಗಳ ಸಭೆ ಕರೆದು ಸಾಧಕ–ಭಾಧಕಗಳ ಬಗ್ಗೆ ಚರ್ಚಿಸಿ ಶಿಕ್ಷಕ ಸ್ನೇಹಿ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಈ ಮೊದಲು ಹಲವು ಬಾರಿ ತಮಗೆ ಮನವಿ ಮಾಡಲಾಗಿತ್ತು.

ಆದರೆ, ಯಾವುದೇ ಸಭೆ ಕರೆಯದೆ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಶೈಕ್ಷಣಿಕ ಕೇತ್ರದ ಹಿತದೃಷ್ಟಿಯಿಂದ ಸರಿಯಲ್ಲವೆಂದು ನನ್ನ ಅಭಿಪ್ರಾಯವಾಗಿದ್ದು, ತಾವುಗಳು ಉಲ್ಲೇಖಿತ ಆದೇಶದಲ್ಲಿ ಶಾಲೆಯ, ಮುಖ್ಯ ಶಿಕ್ಷಕರ–ಸಹ ಶಿಕ್ಷಕರ ಕಾರ್ಯಚಟುವಟಿಕೆಗಳ ವೀಕ್ಷಣೆಗೆ ಇತರೆ ಇಲಾಖೆಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯನ್ನಾಗಿ ನಿಯುಕ್ತಿಗೊಳಿಸಿರುವುದು ಸರಿಯಾದ ಕ್ರಮವಲ್ಲ. ಇದರಿಂದ ಶಿಕ್ಷಕರ ಮನೋಸ್ಥೈರ್ಯವನ್ನು ಕುಗ್ಗಿಸಿದಂತಾಗುತ್ತದೆ. ಅಲ್ಲದೆ ಅಲ್ಲದೆ ಇತರೆ ಇಲಾಖೆಯ ನೋಡಲ್ ಅಧಿಕಾರಿಗಳಿಗೆ ಶಿಕ್ಷಣ ಇಲಾಖೆಯ ಕಾರ್ಯವ್ಯಾಪ್ತಿಯ ಬಗ್ಗೆ ಗೊತ್ತಿರುವುದಿಲ್ಲ. ಹಾಗಾಗಿ ತಮ್ಮ ಇಲಾಖೆಯಲ್ಲಿಯೇ ವಿವಿಧ ಸ್ತರದ ಶಿಕ್ಷಣಾಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳು ಇರುವಾಗ ಇತರೆ ಇಲಾಖೆಯ ಅಧಿಕಾರಿಗಳನ್ನು ನೋಡಲ್‌ಗಳನ್ನಾಗಿ ನಿಯುಕ್ತಿಗೊಳಿಸಿರುವುದು ಸರಿಯಾದ ಕ್ರಮವಲ್ಲವೆಂದು ಮತ್ತೊಮ್ಮೆ ತಮಗೆ ಈ ಮೂಲಕ ತಿಳಿಸಿ, ಈ ಉಲ್ಲೇಖಿತ ಆದೇಶವನ್ನು ಮಾರ್ಪಾಡು ಮಾಡಿ ಅನುಷ್ಠಾನಗೊಳಿಸುವಂತೆ ಪತ್ರದಲ್ಲಿ ಕೋರಿದ್ದಾರೆ.

ಆ.10, ಆಶಾಮಂದಿರ ವಾರ್ಷಿಕ ಮಹಾಸಭೆ

ಮೈಸೂರು.ಆ.7– ಆಶಾಮಂದಿರ ನಿವೇಶನ ಮತ್ತು ವಸತಿದಾರರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯನ್ನು ಆ.10ರಂದು ಬೆಳಿಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ಬೋರೇಗೌಡರ ಅಧ್ಯಕ್ಷತೆಯಲ್ಲಿ ಹೆಬ್ಬಾಳು 2ನೇ ಹಂತದಲ್ಲಿರುವ ಉಮಾ ಮಹೇಶ್ವರಿ ದೇವಸ್ಥಾನದ ಆವರಣದಲ್ಲಿ ಕರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದಿನಿಂದ ಶ್ರೀ ಶನೇಶ್ವರ ಸ್ವಾಮಿಯ ಆರಾಧನಾ ಮಹೋತ್ಸವ

ಮೈಸೂರು: ಮೈಸೂರು ತಾಲೂಕು ವರುಣ ಹೋಬಳಿ ಸಜ್ಜೆಹುಂಡಿ ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಳಿ ವತಿಯಿಂದ ಆ.8 ಮತ್ತು 9ರಂದು ಗ್ರಾಮದಲ್ಲಿ 16ನೇ ವರ್ಷದ ಶ್ರೀ ಶನೇಶ್ವರ ಸ್ವಾಮಿಯ ಶ್ರಾವಣ ಮಾಸದ ಆರಾಧನಾ ಮಹೋತ್ಸವ ಏರ್ಪಡಿಸಲಾಗಿದೆ.

ಆ.8ರಂದು ಸಂಜೆ 5.30ರಿಂದ ಗಣಪತಿ ಪೂಜೆ, ದೇವತಾ ನಾಂದಿ, ಕಲಶ ಸ್ಥಾಪನೆ, ರುದ್ರಾಭಿಷೇಕಸಹಿತ ಗಣಪತಿ ಹೋಮದೊಂದಿಗೆ ಆರಾಧನಾ ಮಹೋತ್ಸವವನ್ನು ಆಚರಿಸಲಾಗುವುದು. ಮರುದಿನ ಅಂದರೆ ಆ.9ರಂದು ಮುಂಜಾನೆ 4.30ರಿಂದ ಶ್ರೀ ಸ್ವಾಮಿಯ ದಿವ್ಯಾಲಂಕಾರದೊಂದಿಗೆ ನವಗ್ರಹ ಪುರಸ್ಸರ, ಶ್ರೀ ಛಾಯಾಸೂರ್ಯ ನಾರಾಯಣ ಸ್ವಾಮಿ ಸಹಿತ ಶ್ರೀ ಶನೇಶ್ವರ ಹೋಮ ಮತ್ತು ಪೂರ್ಣಾಹುತಿ ನಂತರ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಯೋಗಿಸಲಾಗುವುದು. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ರಾತ್ರಿ 9 ಗಂಟೆಗೆ ಬಿ.ಚಂದ್ರಶೇಖರ ಶಾಸ್ತ್ರಿ ಅವರಿಂದ ಶನಿ ಪ್ರಭಾವ ಅಥವಾ ರಾಜಾ ವಿಕ್ರಮ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದ್ದು, ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ.

ಪ್ರಧಾನಿ ಮೋದಿ, ನಡ್ಡಾಗೆ ಉಪ ರಾಷ್ಟ್ರಪತಿ ಅಭ್ಯರ್ಥಿ ಆಯ್ಕೆ ಅಧಿಕಾರ

ನವದೆಹಲಿ, ಆ.7– ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ(ಎನ್‌ಡಿಎ) ಗುರುವಾರ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಆಡಳಿತ ಪಕ್ಷದ ಉಪ ರಾಷ್ಟ್ರಪತಿ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅಧಿಕಾರ ನೀಡಿದೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ಸಂಸತ್ ಸಂಕೀರ್ಣದಲ್ಲಿ ನಡೆದ ಪ್ರಮುಖ ಬಿಜೆಪಿ ನಾಯಕರು ಮತ್ತು ಅದರ ಮಿತ್ರ ಪಕ್ಷಗಳ ನಾಯಕರ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಇದು ಸರ್ವಾನುಮತದ ನಿರ್ಧಾರ ಎಂದು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ.

ನಡ್ಡಾ ಜೊತೆಗೆ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ಅಮಿತ್ ಶಾ, ಜೆಡಿ(ಯು)ನ ಲಾಲನ್ ಸಿಂಗ್, ಶಿವಸೇನೆಯ ಶ್ರೀಕಾಂತ್ ಶಿಂಧೆ, ಟಿಡಿಪಿಯ ಲಾವು ಶ್ರೀ ಕೃಷ್ಣ ದೇವರಾಯಲು ಮತ್ತು ಎಲ್‌ಜೆಪಿ (ರಾಮ್‌ವಿಲಾಸ್)ನ ಚಿರಾಗ್ ಪಾಸ್ವಾನ್ ಅವರು ಈ ಸಭೆಯಲ್ಲಿ ಭಾಗವಹಿಸಿದ್ದರು. ರಾಜನಾಥ್ ಸಿಂಗ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸೆ.9ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಆ.1ರಂದು ತಿಳಿಸಿದೆ. ಆ.7ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿದ್ದು, 21ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮೈಸೂರು ಕಿರುರಂಗಮಂದಿರದಲ್ಲಿ 'ಶೇಷಗ್ರಸ್ಥರು', 'ಶರ್ಮಿಷ್ಠೆ' ನಾಟಕ

ಮೈಸೂರು, ಆ.7(ಜಿಎ)–ಬೆಂಗಳೂರಿನ ರಂಗಸಂಪದ ರಂಗತಂಡದಿಂದ ಮೈಸೂರಿನ ಕಿರುರಂಗಮಂದಿರದಲ್ಲಿ 'ಶೇಷಗ್ರಸ್ಥರು' ಮತ್ತು 'ಶರ್ಮಿಷ್ಠೆ' ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ತಂಡದ ಖಜಾಂಚಿ ಶಿವಲಿಂಗ ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ರಂಗಾ ಆಸಕ್ತಿ ನೋಡಿದ ತಂಡಕ್ಕೆ ಮೈಸೂರಿನ ಪ್ರದರ್ಶನಗಳನ್ನು ಆಯೋಜಿಸಬೇಕು ಎಂಬ ದೃಷ್ಟಿಯಿಂದ ಆ.9ರಂದು ಸಂಜೆ 7 ಗಂಟೆಗೆ 'ಶೇಷಗ್ರಸ್ಥರು' ಮತ್ತು ಆ.10ರಂದು ಸಂಜೆ 7 ಗಂಟೆಗೆ 'ಶರ್ಮಿಷ್ಠೆ' ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈಗಾಗಲೇ ನಟಿ ಉಮಾಶ್ರೀ ಅಭಿನಯಿಸಿರುವ 'ಶರ್ಮಿಷ್ಠೆ' ನಾಟಕವು ಮೈಸೂರಿನಲ್ಲಿ ಸಾಕಷ್ಟು ಪ್ರದರ್ಶನ ಕಂಡಿದ್ದು, ರಂಗಾಭಿಮಾನಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಏರ್ಪಡಿಸಲಾಗಿದೆ ಎಂದರು.

'ಶೇಷಗ್ರಸ್ಥರು' ನಾಟಕವು ಬೆಂಗಳೂರಿನಲ್ಲಿ 8 ಪ್ರದರ್ಶನಗಳನ್ನು ಕಂಡಿದ್ದು, ಮೊದಲ ಬಾರಿ ಮೈಸೂರಿನ ಪ್ರದರ್ಶನ ನಡೆಯುತ್ತಿದೆ. 'ಶೇಷಗ್ರಸ್ಥರು' ನಾಟಕದಲ್ಲಿ ಕೋವಿಡ್ ಸಂದರ್ಭದಲ್ಲಿ ತಂದೆ–ಮಗ ನಡುವೆ ನಡೆಯುವ ಸನ್ನಿವೇಶವನ್ನು ಅದ್ಭುತವಾಗಿ ಕಟ್ಟಿಕೊಡಲಾಗಿದ್ದು ಎರಡು ತಲೆಮಾರಿನ ಬಗ್ಗೆ ತಿಳಿಸಲು ಪ್ರಯತ್ನಿಸಲಾಗಿದೆ ಎಂದರು.

ಬುಕ್ ಮೈ ಶೋನಲ್ಲಿ ಟಿಕೆಟ್ ಲಭ್ಯವಿದ್ದು, ಎರಡು ನಾಟಕ ವೀಕ್ಷಣೆಗಾಗಿ ರಿಯಾಯಿತಿ ನೀಡಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ 9448030970 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಅಕ್ಮಲ್ ಪಾಷ, ಎಂ.ಚಂದ್ರಕಾಂತ್, ಬಿ.ವಿಠಲ ಮತ್ತಿತರರು ಉಪಸ್ಥಿತರಿದ್ದರು.

ಆ.25ಕ್ಕೆ ಮೈಸೂರಲ್ಲಿ 'ಪರಮೋತ್ಸವ ಅಭಿಮಾನದ ಸಂಭ್ರಮ'

ಮೈಸೂರಲ್ಲಿ ಪೋಸ್ಟರ್ ಬಿಡುಗಡೆ, ವಿವಿಧ ಕಾರ್ಯಕ್ರಮಗಳ ವಿವರಣೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಪರಮೋತ್ಸವ ಅಭಿಮಾನದ ಸಂಭ್ರಮ' ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ.

ಮೈಸೂರು, ಆ.7(ಜಿಎ)–ಮೈಸೂರು ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗ ಮೈಸೂರು ವತಿಯಿಂದ ಕಲಾಮಂದಿರದಲ್ಲಿ ಆ.25 ಬೆಳಗ್ಗೆ 10.30ಕ್ಕೆ 'ಪರಮೋತ್ಸವ ಅಭಿಮಾನದ ಸಂಭ್ರಮ' ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಿದ್ದಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಗೃಹಮಂತ್ರಿ ಡಾ.ಜಿ ಪರಮೇಶ್ವರ್ ಅವರ 74ನೇ ಹುಟ್ಟುಹಬ್ಬವನ್ನು ಬಿಳಿಕೆರೆ ರಾಜು ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದು, ಉರಿಲಿಂಗ ಪೆದ್ದಿಮಠ ಪೀಠಾಧ್ಯಕ್ಷರಾದ ಜ್ಞಾನ ಪ್ರಕಾಶ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮವನ್ನು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಉದ್ಘಾಟಿಸಲಿದ್ದಾರೆ. ಗೃಹ ಮಂತ್ರಿ ಡಾ.ಜಿ.ಪರಮೇಶ್ವರ್ ಹಾಗೂ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ತುಮಕೂರು ಆಡಳಿತ ಮಂಡಳಿ ಸದಸ್ಯೆ ಕನ್ನಿಕಾಪರಮೇಶ್ವರಿ ಉಪಸ್ಥಿತರಿರಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವ ಡಾ.ಕೆ.ಹೆಚ್.ಮುನಿಯಪ್ಪ ಅಭಿನಂದನಾ ಗ್ರಂಥವನ್ನು ಲೋಕಾರ್ಪಣೆಗೊಳಿಸಲಿದ್ದಾರೆ. 15 ನಿಮಿಷದ ಸಾಕ್ಷ್ಯಚಿತ್ರವನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಿಡುಗಡೆಗೊಳಿಸಲಿದ್ದಾರೆ. ಅಭಿನಂದನಾ ಗೀತೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಲಿದ್ದಾರೆ ಎಂದರು.

ಪಶುಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಅಭಿನಂದನಾ ನುಡಿಯನ್ನು ಶಾಸಕ ತನ್ವೀರ್ ಸೇಠ್ ಆಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದ ಸುನೀಲ್ ಬೋಸ್, ಶಾಸಕ ಪಿ.ಎಂ. ನರೇಂದ್ರಸ್ವಾಮಿ ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ಎಚ್.ಎಂ.ಗಣೇಶ್ ಪ್ರಸಾದ್, ಡಿ.ರವಿಶಂಕರ್, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್ ಹಾಗೂ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ವಿ.ಅಯ್ಯಣ್ಣ ಅವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನಂತರ ಪರಮೋತ್ಸವ ಅಭಿನಂದನಾ ಸಮಿತಿ ಅಧ್ಯಕ್ಷ ಬಿಳಿಕೆರೆ ರಾಜು ಮಾತನಾಡಿ, ಡಾ.ಜಿ.ಪರಮೇಶ್ವರ್ ಅವರ ಹುಟ್ಟುಹಬ್ಬವನ್ನು ಯಾವುದೇ ರಾಜಕೀಯಪ್ರೇರಿತ ಹಾಗೂ ಬಲ ಪ್ರದರ್ಶನದ ಕಾರಣಕ್ಕಾಗಿ ಪರಮೋತ್ಸವ ನಡೆಸುತ್ತಿಲ್ಲ. ಕೆಲವು ವರ್ಷಗಳಿಂದಲೂ, ಈ ಕಾರ್ಯಕ್ರಮ ಮಾಡುವ ಆಶಯವಿತ್ತು. ಕಾಲ ಕೂಡಿ ಬಂದಿರಲಿಲ್ಲ. ಈ ಬಾರಿ ಡಾ.ಜಿ ಪರಮೇಶ್ವರ್ ಅವರನ್ನು ಬಲವಂತವಾಗಿ ಒಪ್ಪಿಸಿ ಅದ್ದೂರಿ ಹುಟ್ಟುಹಬ್ಬ ಆಚರಣೆ ಮಾಡುತ್ತಿದ್ದೇವೆ ಎಂದರು.

ಇದು ಪಕ್ಷಾತೀತವಾದ ಕಾರ್ಯಕ್ರಮವಾಗಿದ್ದು ಎಲ್ಲರನ್ನು ಆಹ್ವಾನಿಸುತ್ತಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಲಾಗಿದ್ದು, ಅವರಿಗೆ ಬೇರೊಂದು ಕಾರ್ಯದ ನಿಮಿತ್ತವಿರುವ ಕಾರಣ ಕಾರ್ಯಕ್ರಮಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.

ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗ ಜಿಲ್ಲಾಧ್ಯಕ್ಷ ಮಂಜುನಾಥ್, ನಾಗರಾಜು, ಪದ್ಮನಾಭ್, ಪರಂಜ್ಯೋತಿ, ಕೆ.ಮಹೇಶ್, ಕೃಷ್ಣ ಉಪಸ್ಥಿತರಿದ್ದರು.

ಇಂದು ಒಳಮೀಸಲಾತಿ ವರದಿ ಕುರಿತು ಸಭೆ


ಮೈಸೂರು,ಆ.7(ಪಿಎಂ)–ಒಳಮೀಸಲಾತಿ ಸಂಬಂಧ ಅವೈಜ್ಞಾನಿಕವಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ಆರೋಪಿಸಿರುವ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ, ಆ.8ರಂದು ಸಂಜೆ 5 ಗಂಟೆಗೆ ಮೈಸೂರಿನ ನೂತನ ಜಲದರ್ಶಿನಿ ಸಭಾಂಗಣದಲ್ಲಿ ಹೊಲಯ (ಬಲಗೈ) ಸಮುದಾಯದ ಪ್ರಮುಖರ ಸಭೆ ಆಯೋಜಿಸಿದೆ. ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಭೆ ನೇತೃತ್ವ ವಹಿಸಲಿದ್ದು, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಚರ್ಚಿಸಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಆದ್ದರಿಂದ ಬಲಗೈ ಸಮುದಾಯದ ಮುಖಂಡರು, ಸಾಹಿತಿಗಳು, ಬರಹಗಾರರು ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರು, ನಿವೃತ್ತ ನೌಕರರು, ವಕೀಲರು ವಿದ್ಯಾರ್ಥಿ ಮುಖಂಡರು, ಸಂಘ–ಸಂಸ್ಥೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆಗಳನ್ನು ನೀಡಬಹುದು ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಮೈಸೂರು ನಗರಾಧ್ಯಕ್ಷ ಜೆ.ಪ್ರಭು, ಜಿಲ್ಲಾಧ್ಯಕ್ಷ ಕೆ.ಗಂಗಾಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿಕೇರಿ ರಾಜಾಸೀಟ್‌ನಲ್ಲಿ 'ಗ್ಲಾಸ್ ಬ್ರಿಡ್ಜ್'ಗೆ ಬಿಜೆಪಿ ವಿರೋಧ

ಬೃಹತ್ ಹೋರಾಟ, ನ್ಯಾಯಾಲಯದ ಮೊರೆ ಹೋಗುವ ಎಚ್ಚರಿಕೆ ನೀಡಿದ ಮಾಜಿ ಸಚಿವ ಎಂ.ಪಿ. ಅಪ್ಪಚ್ಚುರಂಜನ್

ಮಡಿಕೇರಿ,ಆ.7– ರಾಜಾಸೀಟ್‌ನಲ್ಲಿ 'ಗ್ಲಾಸ್ ಬ್ರಿಡ್ಜ್' ನಿರ್ಮಾಣಕ್ಕೆ ನಮ್ಮ ತೀವ್ರ ವಿರೋಧವಿದ್ದು ಉದ್ದೇಶಿತ ಯೋಜನೆ ಜಾರಿಗೆ ಮುಂದಾದಲ್ಲಿ ನಗರದ ನಿವಾಸಿಗಳ ಸಹಕಾರದೊಂದಿಗೆ ಬೃಹತ್ ಹೋರಾಟ ರೂಪಿಸಲಾಗುತ್ತದೆ. ಮಾತ್ರವಲ್ಲದೆ ಯೋಜನೆ ಕುರಿತು ನ್ಯಾಯಾಲಯದ ಕದ ತಟ್ಟುತ್ತೇವೆ ಎಂದು ಮಾಜಿ ಸಚಿವ ಎಂ.ಪಿ.ಅಪ್ಪಚ್ಚುರಂಜನ್ ಎಚ್ಚರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜಾಸೀಟ್ ನಡುವಿನ ಸ್ಮಾರಕ ಪುರಾತತ್ವ ಇಲಾಖೆಗೆ ಒಳಪಡುತ್ತದೆ. ಯಾವುದೇ ಪುರಾತನ ಸ್ಮಾರಕಗಳ ವ್ಯಾಪ್ತಿಯಲ್ಲಿ ಯಾವುದೇ ನಿರ್ಮಾಣ ಕಾರ್ಯಗಳನ್ನು ನಡೆಯಬಾರದು ಎನ್ನುವ ನಿಯಮವಿದೆ. ಹೀಗಿದ್ದೂ ಕಾಂಗ್ರೆಸ್ ಆಡಳಿತ ವ್ಯವಸ್ಥೆ ಜನರಿಗೆ ಸಂಕಷ್ಟವನ್ನು ತಂದೊಡ್ಡುವ 'ಗ್ಲಾಸ್ ಬ್ರಿಡ್ಜ್' ಅನ್ನು ಅಭಿವೃದ್ಧಿಯ ಹೆಸರಿನಲ್ಲಿ ನಿರ್ಮಿಸಲು ಮುಂದಾಗಿರುವುದು ಸರಿಯಾದ ಕ್ರಮವಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ರಾಜಾಸೀಟ್ ಬಳಿಯಲ್ಲೇ ಇರುವ ಚಾಮುಂಡೇಶ್ವರಿ, ಇಂದಿರಾನಗರ ಬಡಾವಣೆ ವ್ಯಾಪ್ತಿಯಲ್ಲಿ ಕೆಲವು ವರ್ಷಗಳ ಹಿಂದಿನ ಭಾರಿ ಮಳೆಯ ಸಂದರ್ಭ ಬರೆ ಕುಸಿತಕ್ಕೊಳಗಾಗಿತ್ತು ಅದರ ಪಾರ್ಶ್ವದಲ್ಲಿ ಇರುವ ರಾಜಾಸೀಟ್‌ನಲ್ಲಿ ಇದೀಗ 'ಗ್ಲಾಸ್ ಬ್ರಿಡ್ಜ್' ನಿರ್ಮಾಣವಾದಲ್ಲಿ ಭವಿಷ್ಯದಲ್ಲಿ ಅವಘಡಗಳು ಸಂಭವಿಸುವ ಎಲ್ಲಾ ಅಪಾಯಗಳಿರುವುದಾಗಿ ಆತಂಕ ವ್ಯಕ್ತಪಡಿಸಿದರು.



ಬಾಂಗ್ಲಾದೇಶಿಗರನ್ನು ಪತ್ತೆ ಹಚ್ಚಿ: ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ನಕಲಿ ಆಧಾರ್ ಕಾರ್ಡ್ ದಾಖಲೆಗಳೊಂದಿಗೆ 10 ಸಾವಿರಕ್ಕೂ ಹೆಚ್ಚಿನ ಬಾಂಗ್ಲಾದೇಶಿಯರು ಇರಬಹುದೆನ್ನುವ ಆತಂಕ ವ್ಯಕ್ತಪಡಿಸಿದ ಅಪ್ಪಚ್ಚುರಂಜನ್, ಈ ಬಗ್ಗೆ ತಕ್ಷಣವೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಕಾರ್ಯಪ್ರವೃತ್ತವಾಗಬೇಕು. ನಕಲಿ ದಾಖಲೆಗಳೊಂದಿಗೆ ನೆಲೆಸಿರುವ ಬಾಂಗ್ಲಾದೇಶಿಗರನ್ನು ಪತ್ತೆ ಹಚ್ಚಿ ಕಾನೂನು ಕ್ರಮಕ್ಕೆ ಒಳಪಡಿಸಬೇಕು. ಜಿಲ್ಲೆಯ ತೋಟದ ಮಾಲೀಕರು ತಮ್ಮ ತೋಟಕ್ಕೆ ಬರುವ ಕಾರ್ಮಿಕರಿಂದ ಆಧಾರ್ ಕಾರ್ಡ್‌ಗಳನ್ನು ಪೊಲೀಸ್ ಇಲಾಖೆಗೆ ನೀಡುವ ಕೆಲಸ ಮಾಡಬೇಕೆಂದು ಅಭಿಪ್ರಾಯಿಸಿದರು.

> **ಬಿಟ್ಟಿ ಭಾಗ್ಯಗಳ ರಾಜ್ಯದ ಕಾಂಗ್ರೆಸ್ ಸರ್ಕಾರದಿಂದ ದುರಾಡಳಿತ, ವ್ಯಾಪಕ ಭ್ರಷ್ಟಾಚಾರಗಳು ನಡೆಯುತ್ತಿವೆ. ಜನಪರವಾದ ಯಾವುದೇ ಕೆಲಸ ಕಾರ್ಯಗಳು ಕ್ರಮಬದ್ಧವಾಗಿ ನಡೆಯುತ್ತಿಲ್ಲ. ಆಡಳಿತ ನಡೆಸಲಾಗದಿದ್ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಲಿ. ಧರ್ಮಸ್ಥಳ ಪ್ರಕರಣ ಮುಂದಿಟ್ಟು ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರದ ಬಗ್ಗೆ ಅತ್ಯಂತ ಕೀಳು ಮಟ್ಟದ ಹೇಳಿಕೆಗಳನ್ನು ನೀಡುವವರನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕು.**
> –ಅಪ್ಪಚ್ಚುರಂಜನ್, ಮಾಜಿ ಸಚಿವ.

ಭೂ ಪರಿವರ್ತನೆಗೆ ದೊಡ್ಡ ಮೊತ್ತ: ಮುಖ್ಯದಿಂದ 1 ಏಕರೆ ಭೂ ಪರಿವರ್ತನೆಗೆ ದೊಡ್ಡ ಮೊತ್ತದ ಹಣವನ್ನು ಪಡೆಯುತ್ತಿರುವ ವಿಚಾರ ಗಮನಕ್ಕೆ ಬಂದಿದೆ. ಇದನ್ನು ಪತ್ತೆ ಹಚ್ಚಿ ಜನರ ಮುಂದಿರುವ ಕೆಲಸ ಮಾಡುವುದಾಗಿ ಅಪ್ಪಚ್ಚುರಂಜನ್ ತಿಳಿಸಿದರು. ಕೊಡಗಿನ ಬಹುತೇಕ ರಸ್ತೆಗಳು ಹದಗೆಟ್ಟು ಹೋಗಿವೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್.

ಲೋಕೋಪಯೋಗಿ ಇಲಾಖೆಗೆ ರಸ್ತೆಗಳ ನಿರ್ವಹಣೆಗೆ ಪ್ರತಿ ಕಿ.ಮೀ.ಗೆ 66 ಸಾವಿರ ರೂ. ಅನುದಾನ ಲಭ್ಯವಿದೆ. ಹೀಗಿದ್ದೂ ರಸ್ತೆಗಳ ನಿರ್ವಹಣೆ ಸಮರ್ಪಕವಾಗಿಲ್ಲ. ರಸ್ತೆ ಬದಿಯ ಕಾಡುಗಳನ್ನು ಕಡಿದು ಸಂಚಾರವನ್ನು ಸುಗಮವಾಗಿರುವಂತೆ ನೋಡಿಕೊಳ್ಳುವ ಕನಿಷ್ಠ ಕಾಯಕವನ್ನು ನಡೆಯುತ್ತಿಲ್ಲ. ಈ ಬಗ್ಗೆ ಜಿಲ್ಲೆಯ ಇಬ್ಬರು ಶಾಸಕರು ಗಮನ ಹರಿಸಿ ರಸ್ತೆ ನಿರ್ವಹಣೆಗೆ ಇರುವ ಲೋಕೋಪಯೋಗಿ ಇಲಾಖೆಯ ಅನುದಾನ ಏನಾಗಿದೆ ಎಂದು ತಿಳಿದುಕೊಳ್ಳುವುದು ಅಗತ್ಯ ಎಂದು ತೀಕ್ಷ್ಣವಾಗಿ ನುಡಿದರು. ಕಾಡಾನೆ ಹಾವಳಿ ತಡೆಗೆ ನಿರ್ಮಿಸಲಾಗುವ ಕಂದಕಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಬೇಕು. ಈ ಹಿಂದೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸರ್ಕಾರವೇ ನಡೆಯದಿರುವುದರಿಂದ ಕಾಡಾನೆಗಳ ಹಾವಳಿ ಹೆಚ್ಚಲು ಕಾರಣವೆಂದು ಅಪ್ಪಚ್ಚುರಂಜನ್ ಆರೋಪಿಸಿದರು. ಕಾಡಾನೆಗಳ ನಿರಂತರ ಹಾವಳಿಯಿಂದಾಗಿ ಇಲ್ಲಿಯವರೆಗೆ 14 ಮಂದಿ ಸಾವನ್ನಪ್ಪಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಗ್ಲಾಸ್ ಬ್ರಿಡ್ಜ್ ಪರ ಕಾಂಗ್ರೆಸ್: ಮಡಿಕೇರಿ ನಗರಸಭಾ ಉಪಾಧ್ಯಕ್ಷ ಮಹೇಶ್ ಜೈನಿ ಮಾತನಾಡಿ, ಗ್ಲಾಸ್ ಬ್ರಿಡ್ಜ್‌ಗೆ ಸಂಬಂಧಿಸಿದಂತೆ ನಗರಸಭೆಯಲ್ಲಿ ಕರೆಯಲಾಗಿದ್ದ ತುರ್ತು ಸಭೆ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಸಭೆಗೆ ವಿರೋಧ ವ್ಯಕ್ತಪಡಿಸಿ ಸಭೆಯನ್ನೆ ನಡೆಸಬಾರದೆಂದು ಆಗ್ರಹಿಸಿದ್ದರು. ಇವರ ವರ್ತನೆಗಳನ್ನು ಗಮನಿಸಿದರೆ ನಿರ್ಮಾಣದ ಪರವಾಗಿ ಇರುವಂತೆ ಕಾಣುತ್ತದೆ ಎಂದು ಸಂಶಯ ವ್ಯಕ್ತಪಡಿಸಿದರು. ಪ್ರಸ್ತುತ ಯೋಜನೆಯ ಬಗ್ಗೆ ಕನಿಷ್ಠ ಮಾಹಿತಿಯನ್ನೂ ನೀಡದೆ ನಗರಸಭೆಯನ್ನು ಕತ್ತಲಲ್ಲಿ ಇಡಲಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಗ್ಲಾಸ್ ಬ್ರಿಡ್ಜ್ ನಿರ್ಮಾಣಕ್ಕೆ ರಾಜಾಸೀಟಿನಲ್ಲಿ ಜೆಸಿಬಿಗಳನ್ನು ಓಡಿಸಿದಲ್ಲಿ ಅಲ್ಲಿನ ಪರಿಸರಕ್ಕೆ ಗಂಭೀರ ಅಪಾಯ ಎದುರಾಗುವ ಸಾಧ್ಯತೆಗಳು ಅಧಿಕವಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಅಧ್ಯಕ್ಷೆ ಕಲಾವತಿ, ಬಿಜೆಪಿ ನಗರ ಮಂಡಲದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಜಗದೀಶ್, ಕವನ್ ಕಾವೇರಪ್ಪ ಉಪಸ್ಥಿತರಿದ್ದರು.

ಕಾಡಾನೆ ದಾಳಿಯಿಂದ ವಯೋವೃದ್ಧ ಸಾವು

ಅರಣ್ಯ ಇಲಾಖೆಯ ನಿರ್ಲಕ್ಷ್ಯದಿಂದ ರೊಚ್ಚಿಗೆದ್ದ ಗ್ರಾಮಸ್ಥರಿಂದ ಆಸ್ಪತ್ರೆ ಮುಂದೆ ಪ್ರತಿಭಟನೆ



ಶಾಸಕ ಎ.ಎಸ್. ಪೊನ್ನಣ್ಣ ಆಸ್ಪತ್ರೆಗೆ ಭೇಟಿ ನೀಡಿ ಕಾಡಾನೆ ದಾಳಿಯಿಂದ ಸಾವನ್ನಪ್ಪಿದ ವ್ಯಕ್ತಿಯ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿದರು.

ಮಡಿಕೇರಿ,ಆ.7– ಸಂಪಾಜೆ ಹೋಬಳಿ ಚೆಂಬು ಗ್ರಾಮದ ದಬ್ಬಡ್ಕದಲ್ಲಿ ಕಾಡಾನೆ ದಾಳಿಗೆ ಸಿಲುಕಿ ವಯೋವೃದ್ಧರೋರ್ವರು ಮೃತಪಟ್ಟ ಘಟನೆ ಬುಧವಾರ ರಾತ್ರಿ ನಡೆದಿದೆ. ಅಲ್ಲಿನ ನಿವಾಸಿ ಶಿವಪ್ಪ(73) ಎಂಬವರೇ ಮೃತಪಟ್ಟ ವ್ಯಕ್ತಿಯಾಗಿದ್ದು, ಸಂಪಾಜೆ ಭಾಗದಲ್ಲಿ ಕಾಡಾನೆ ದಾಳಿಗೆ ವ್ಯಕ್ತಿ ಬಲಿಯಾದ ಮೊದಲ ಪ್ರಕರಣ ಇದಾಗಿದೆ. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭ ಇಲಾಖೆ ವಿರುದ್ಧ ಅಲ್ಲಿನ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ ಘಟನೆಯೂ ನಡೆದಿದೆ.

ಘಟನೆ ಹಿನ್ನೆಲೆ: ಕಳೆದ 1 ತಿಂಗಳಿಂದ ಸಂಪಾಜೆ ಹೋಬಳಿಯ ಚೆಂಬು, ದಬ್ಬಡ್ಕ, ಊರುಬೈಲು, ಕಾನ್‌ಬೈಲ್ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ಕಂಡು ಬಂದಿತ್ತು. ಅಲ್ಲಿನ ತೋಟಗಳಿಗೆ ದಾಳಿ ಮಾಡುತ್ತಿದ್ದ ಕಾಡಾನೆಯಿಂದ ಕೃಷಿ ಫಸಲು ನಷ್ಟ ಸಂಭವಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಕಾಡಾನೆ ಸೆರೆ ಹಿಡಿದು ಸ್ಥಳಾಂತರಿಸುವಂತೆ ಅರಣ್ಯ ಇಲಾಖೆಗೆ ನಿರಂತರ ಒತ್ತಡ ಹೇರಿದ್ದರೂ ಯಾವುದೇ ಕ್ರಮವಾಗಿರಲಿಲ್ಲ ಎನ್ನಲಾಗಿದೆ. ಬುಧವಾರ ರಾತ್ರಿ 9.30ರ ವೇಳೆಗೆ ದಬ್ಬಡ್ಕ ಗ್ರಾಮಕ್ಕೆ ಕಾಡಾನೆ ಬಂದಿದ್ದು, ಅಲ್ಲಿನ ನಿವಾಸಿಗಳು ಪಟಾಕಿ ಸಿಡಿಸಿ ಕಾಡಾನೆಯನ್ನು ಓಡಿಸುವ ಪ್ರಯತ್ನ ನಡೆಸಿದ್ದರು.

ಈ ವೇಳೆ ಶಿವಪ್ಪ ಅವರ ಸಮೀಪ ಪಟಾಕಿ ಸದ್ದು ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಶಿವಪ್ಪ ಅವರು ಮನೆಯಿಂದ ಹೊರ ತೆರಳಿ ಪರಿಶೀಲನೆಗೆ ಮುಂದಾಗಿದ್ದಾರೆ. ಈ ವೇಳೆ ಕತ್ತಲಿನ ನಡುವೆ ಏಕಾಏಕಿ ಕಾಡಾನೆ ಶಿವಪ್ಪ ಅವರ ಮೇಲೆ ದಾಳಿ ನಡೆಸಿದ್ದು, ಶಿವಪ್ಪ ಅವರು ಗಂಭೀರ ಸ್ವರೂಪದಲ್ಲಿ ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಶಿವಪ್ಪ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಅವರುಗಳು ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಜಿಲ್ಲಾಸ್ಪತ್ರೆಯಲ್ಲಿನ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಪ್ರತಿಭಟನೆಗೆ ಮುಂದಾದ ಗ್ರಾಮಸ್ಥರು: ಶಿವಪ್ಪ ಅವರು ಸಾವನ್ನಪ್ಪಿದ ಮಾಹಿತಿ ಅರಿತ ಅಲ್ಲಿನ ಗ್ರಾಮಸ್ಥರು ಮಡಿಕೇರಿ ಜಿಲ್ಲಾಸ್ಪತ್ರೆ ಮುಂದೆ ಜಮಾಯಿಸಿ ಅರಣ್ಯ ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. 1 ತಿಂಗಳಿನಿಂದ ಗ್ರಾಮದಲ್ಲಿ ಆನೆ ಹಾವಳಿ ಇದ್ದು, ಅದನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವಂತೆ ಆಗ್ರಹಿಸಿದ್ದರೂ ಅರಣ್ಯ ಇಲಾಖೆ ಯಾವುದೇ ಕ್ರಮಕೈಗೊಂಡಿಲ್ಲ. ಇದರಿಂದಾಗಿ ಗ್ರಾಮದ ಹಿರಿಯ ನಾಗರಿಕರು ಸಾವನ್ನಪ್ಪುವಂತಾಗಿದೆ. ಇದಕ್ಕೆ ಅರಣ್ಯ ಇಲಾಖೆಯೇ ನೇರ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೃಷಿ ಫಸಲು ನಷ್ಟಕ್ಕೂ ಅತ್ಯಲ್ಪ ಪರಿಹಾರ ನೀಡಲಾಗುತ್ತಿದೆ. ಈ ಪರಿಹಾರದ ಅಗತ್ಯ ನಮಗಿಲ್ಲ. ತಕ್ಷಣವೇ ಕಾಡಾನೆಯನ್ನು ಸೆರೆ ಹಿಡಿದು ಸ್ಥಳಾಂತರಿಸಬೇಕು. ಇಲ್ಲವಾದಲ್ಲಿ ತೀವ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಪ್ರತಿಭಟನಾ ಸ್ಥಳಕ್ಕಾಗಮಿಸಿದ ಶಾಸಕ ಪೊನ್ನಣ್ಣ ಘಟನೆ ಬಗ್ಗೆ ಗ್ರಾಮಸ್ಥರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕಾಡಾನೆ ಸೆರೆಗೆ ಅರಣ್ಯ ಸಚಿವರ ಜೊತೆ ಚರ್ಚಿಸಿ ಅನುಮತಿ ಪಡೆಯಲಾಗುತ್ತದೆ. ಕಾಡಾನೆಗಳನ್ನು ಕಾಡಿಗಟ್ಟಲು ಈಗಾಗಲೇ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಟಾಸ್ಕ್‌ಫೋರ್ಸ್ ಸಿಬ್ಬಂದಿಗಳಿಗೆ ಸಮರ್ಪಕ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದ್ದು, ಪ್ರತಿಭಟನೆಯನ್ನು ಕೈಬಿಡುವಂತೆ ಮನವಿ ಮಾಡಿದರು. ಶಾಸಕರ ಭರವಸೆ ಮೇರೆಗೆ ಗ್ರಾಮಸ್ಥರು ಪ್ರತಿಭಟನೆಯನ್ನು ಕೈಬಿಟ್ಟರು.

ಸೂಕ್ತ ಕ್ರಮ ಕೈಗೊಳ್ಳಲಾಗುವುದು: ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಪೊನ್ನಣ್ಣ ಕಾಡಾನೆ ದಾಳಿಗೆ ದಬ್ಬಡ್ಕ ಗ್ರಾಮದ ಹಿರಿಯ ನಾಗರಿಕರು ಮೃತಪಟ್ಟ ಘಟನೆ ಬಗ್ಗೆ ಬೇಸರವಿದೆ. ಕಾಡಾನೆಗಳನ್ನು ಕಾಡಿಗಟ್ಟಲು ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮಾನವ ಜೀವಹಾನಿ ಮಾಡಿದ ಕಾಡಾನೆಯನ್ನು ಸೆರೆ ಹಿಡಿದು ಸ್ಥಳಾಂತರಿಸಲು ಕೂಡ ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲಿನ ಶಾಲಾ ಮಕ್ಕಳ ಓಡಾಟಕ್ಕೆ ವಾಹನ ಒದಗಿಸಲಾಗುತ್ತದೆ. ಟಾಸ್ಕ್‌ಫೋರ್ಸ್ ಸಿಬ್ಬಂದಿಗಳು ವಾಹನದ ಬೇಡಿಕೆ ಇಟ್ಟಿದ್ದು ಶಾಸಕರ ನಿಧಿಯಿಂದ ಅದನ್ನು ಒದಗಿಸಲಾಗುತ್ತದೆ. ಮೊದಲ ಹಂತದ ಪರಿಹಾರವಾಗಿ ಮೃತರ ಕುಟುಂಬಕ್ಕೆ 5 ಲಕ್ಷ ರೂ.ಗಳ ಚೆಕ್ ಅನ್ನು ಹಸ್ತಾಂತರಿಸಲಾಗಿದೆ. ಕಾಡಾನೆ ಸಮಸ್ಯೆಯನ್ನು ಹಂತಹಂತವಾಗಿ ನಿಯಂತ್ರಣಕ್ಕೆ ತರುವ ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದು ಶಾಸಕ ಪೊನ್ನಣ್ಣ ಮಾಹಿತಿ ನೀಡಿದರು.

ಮಡಿಕೇರಿಯಲ್ಲಿ ಹೃದಯಾಘಾತದಿಂದ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿ ಸಾವು



ಎಂ.ಎಸ್.ವಿಜಯ್

ಮಡಿಕೇರಿ,ಆ.7– ಹೃದಯಾಘಾತದಿಂದ ಕೊಡಗು ಪೊಲೀಸ್ ಇಲಾಖೆ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಮೂಲತಃ ಚಾಮರಾಜನಗರ ನಿವಾಸಿ ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯ ಸಶಸ್ತ್ರ ಪೊಲೀಸ್ ಮೀಸಲು ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಎಂ.ಎಸ್. ವಿಜಯ್(47) ಮೃತ ದುರ್ದೈವಿ.

1997ರ ಬ್ಯಾಚ್‌ನ ಪೊಲೀಸ್ ಸಿಬ್ಬಂದಿಯಾಗಿ ಕೊಡಗು ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆಯಲ್ಲಿ ಸೇವೆಯಲ್ಲಿದ್ದ ವಿಜಯ್ ಅವರು ಪೊಲೀಸ್ ಸಮುದಾಯ ಭವನ ಮೈತ್ರಿಯ ಮೇಲ್ವಿಚಾರಕರಾಗಿ ನಿಯೋಜಿತರಾಗಿದ್ದರು. ನಿನ್ನೆ ದಿನ ರಾತ್ರಿ ಪಾಳಿಯ ಕರ್ತವ್ಯದಲ್ಲಿದ್ದ ವಿಜಯ್ ಅವರಿಗೆ 8.30ರ ಸಮಯದಲ್ಲಿ ತೀವ್ರ ಹೃದಯ ನೋವು ಕಾಣಿಸಿಕೊಂಡಿದೆ. ತಕ್ಷಣವೇ ಅವರನ್ನು ನಗರದ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಮೃತರು ಪತ್ನಿ ಮತ್ತು ಮಕ್ಕಳನ್ನು ಅಗಲಿದ್ದಾರೆ.

ಪೊಲೀಸ್ ಸಿಬ್ಬಂದಿ ವಿಜಯ್ ಅವರ ನಿಧನಕ್ಕೆ ಜಿಲ್ಲಾ ಪೊಲೀಸ್ ಇಲಾಖೆ ಸಂತಾಪ ಸೂಚಿಸಿದೆ. ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜಿಲ್ಲಾಸ್ಪತ್ರೆಗೆ ತೆರಳಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಗುರುವಾರ ಬೆಳಗ್ಗೆ ಜಿಲ್ಲಾ ಪೊಲೀಸ್ ಕವಾಯುತು ಮೈದಾನದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಿದ ಬಳಿಕ ಅವರ ಹುಟ್ಟೂರು ಚಾಮರಾಜನಗರಕ್ಕೆ ಅಂತಿಮ ವಿಧಿ ವಿಧಾನಕ್ಕಾಗಿ ಪಾರ್ಥಿವ ಶರೀರವನ್ನು ಕೊಂಡೊಯ್ಯಲಾಯಿತು.

ಎಸ್‌ಸಿ, ಎಸ್‌ಟಿ, ಟಿಎಸ್‌ಪಿ ಹಣ ದುರ್ಬಳಕೆ ಆರೋಪ

ರಾಜ್ಯ ಸರ್ಕಾರದ ವಿರುದ್ಧ ಚಾ.ನಗರದಲ್ಲಿ ಬಿಜೆಪಿ ಪ್ರತಿಭಟನೆ

ಚಾಮರಾಜನಗರ, ಆ.7– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲಾದ ಎಸ್‌ಸಿ, ಎಸ್‌ಟಿ ಮತ್ತು ಟಿಎಸ್‌ಪಿ ಹಣವನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ದಲಿತ ಜನಾಂಗಕ್ಕೆ ವಂಚನೆ ಮಾಡುತ್ತಿದೆ ಎಂದು ಆರೋಪಿಸಿ ನಗರದಲ್ಲಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.



ಚಾಮರಾಜನಗರದಲ್ಲಿ ಬಿಜೆಪಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಎಸ್.ಟಿ. ಮೋರ್ಚಾದ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ನಿರಂಜನ್ ಕುಮಾರ್, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷರಾದ ಎಂ.ರಾಮಚಂದ್ರ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರು ಮನವಿ ಸ್ವೀಕರಿಸುತ್ತಿದ್ದಂತೆ ಕೆಲವು ಪ್ರತಿಭಟನಾನಿರತರು ಜಿಲ್ಲಾಡಳಿತ ಭವನಕ್ಕೆ ನುಗ್ಗಲು ಯತ್ನಿಸಿದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ತಡೆದು ಜಿಲ್ಲಾಡಳಿತ ಭವನದ ಹೆಬ್ಬಾಗಿಲು ಬಂದ್ ಮಾಡಿದರು. ಪೊಲೀಸರು, ಪ್ರತಿಭಟನಾನಿರತರು ನೂಕಾಟ, ತಳ್ಳಾಟ ನಡೆಯಿತು. ಅಷ್ಟಕ್ಕೇ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸ್ಥಳಕ್ಕಾಗಮಿಸಿ ಎಲ್ಲವನ್ನೂ ತಿಳಿಗೊಳಿದರು. ಪ್ರತಿಭಟನಾನಿರತ ಮುಖಂಡರು ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ ಪ್ರತಿಭಟನೆ ಕೈ ಬಿಟ್ಟರು.

ನಂತರ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೇಕೆ ಬಳಸಿದ್ದೀರಿ? ಸಿದ್ದರಾಮಯ್ಯ ಹಾಗೂ ಮಹದೇವಪ್ಪ ಅವರು ತಮಿಳು ಸಿನಿಮಾದಲ್ಲಿ ಬರುವ ಕಾಮಿಡ್ ಸೆಂದಿಲ್, ಗೊಂಡಮಣಿ ತರಹ [illegible] ಎಂದು ವ್ಯಂಗ್ಯವಾಡಿದರು.

ಬಳಿಕ ಬಿಜೆಪಿ ಎಸ್‌ಟಿ ಮೋರ್ಚಾದ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಮಾತನಾಡಿ, ಪರಿಶಿಷ್ಟ ವರ್ಗ, ಪಂಗಡದ ಜನರಿಗೆ ಅನುಕೂಲ ಮಾಡಿಕೊಡುವುದಾಗಿ ಭಾಷಣ ಮಾಡುವ ಸಿದ್ದರಾಮಯ್ಯ ಅವರು ದಲಿತರಿಗೆ ಮೀಸಲಿಟ್ಟಿದ್ದ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದು ಎಸ್‌ಸಿ, ಎಸ್‌ಟಿ ವರ್ಗದವರಿಗೆ ಮಾಡಿದ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ವಾಲ್ಮೀಕಿ ನಿಗಮದಲ್ಲಿ 187 ಕೋಟಿ ದುರ್ಬಳಕೆ ಮಾಡಿಕೊಳ್ಳಲಾಗಿದೆ. ತುಮಕೂರು ಜಿಲ್ಲೆಯ ವಾಲ್ಮೀಕಿ ನಿಗಮದಲ್ಲಿ 24 ಕೋಟಿ, ರಾಜ್ಯಾದ್ಯಂತ ಇತರ ವಾಲ್ಮೀಕಿ ನಿಗಮಗಳಲ್ಲಿ ಫಲಾನುಭವಿಗಳ ಹಣವನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿದ್ದಾರೆ. ಈ ಸರ್ಕಾರದಲ್ಲಿ ಎಲ್ಲಾ ಕಡೆ ದುರುಪಯೋಗವಾಗಿದ್ದು ಸರ್ಕಾರ ಹಗರಣಗಳ ಸರ್ಕಾರವಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಎಸ್. ಬಾಲರಾಜ್, ನಗರಸಭಾ ಅಧ್ಯಕ್ಷರಾದ ಸುರೇಶ್, ಎಸ್‌ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್, ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಸದಸ್ಯ ನೂರೊಂದು ಶೆಟ್ಟಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ಉಪಾಧ್ಯಕ್ಷರಾದ ಅರಕಲವಾಡಿ ನಾಗೇಂದ್ರ ಶಿವುವಿರಾಟ್, ಮುಖಂಡ ಕಪಿನಿನಾಯಕ, ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು, ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಮಹಿಳಾ ಮೋರ್ಚಾ ಕಮಲಮ್ಮ ಶಿವರಾಜು, ಪ್ರಾಯ್, ಹೊಂಗನೂರು ಮಹದೇವಸ್ವಾಮಿ, ರೇವಣ್ಣ, ಪದ್ಮ, ರಾಮಸಮುದ್ರ ಶಿವು ಇತರರು ಭಾಗವಹಿಸಿದ್ದರು.

ಮತಗಳ್ಳತನದ ಬಗ್ಗೆ ಕಾಂಗ್ರೆಸ್‌ಗೆ ಪ್ರತಿಭಟನೆ ಮಾಡುವ ನೈತಿಕತೆ ಇಲ್ಲ

ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ

ಚಾಮರಾಜನಗರ, ಆ.7– ಮತಗಳ್ಳತನ ಕುರಿತು ಕಾಂಗ್ರೆಸ್‌ನವರಿಗೆ ಪ್ರತಿಭಟನೆ ಮಾಡುವ ಯಾವುದೇ ನೈತಿಕತೆ ಇಲ್ಲ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮತಗಳ್ಳತನ ಶುರುವಾಗಿದ್ದೇ ಕಾಂಗ್ರೆಸ್ ಸರ್ಕಾರದಿಂದ. ಅಂದು ನೆಹರು, ರಾಜೀವ್‌ಗಾಂಧಿ ಅವರಿಂದ ಮತಗಳ್ಳತನವಾಗುತ್ತಿತ್ತು. ಈ ಬಗ್ಗೆ ಕೋರ್ಟ್ ಛೀಮಾರಿಯನ್ನು ಸಹ ಹಾಕಿದೆ. ಆದರೆ, ಈಗ ಮತ್ತೆ ಮತಗಳ್ಳತನವಾಗಿದೆ ಎಂದು ಪ್ರತಿಭಟನೆ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ಮತಗಳ್ಳತನವಾಗಿದ್ದರೆ ರಾಜ್ಯದಲ್ಲಿ 136 ಸೀಟು ಗೆಲ್ಲಲು ಆಗುತ್ತಿತ್ತೆ, ಅವರು ಸರ್ಕಾರ ನಡೆಸುತ್ತಿದ್ದರೆ ಎಂದು ಪ್ರಶ್ನಿಸಿದ ಅವರು, ಈ ದೇಶದಲ್ಲಿ ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಗಾಂಧಿ ಇರುತ್ತಿದ್ದರೇ ಎಂದು ಕಿಡಿಕಾರಿದರು. ಕಾಂಗ್ರೆಸ್ ಪಕ್ಷ ಎಲ್ಲಿ ಅಧಿಕಾರಕ್ಕೆ ಬರುತ್ತೋ ಅಲ್ಲಿ ಮತಗಳ್ಳತನವಾಗಿಲ್ಲ. ಎಲ್ಲಿ ಸೋತಿದ್ದಾರೋ ಅಲ್ಲಿ ಮತಗಳ್ಳತನ ವಾಗಿದೆ ಎಂಬುದು ಸರಿಯಲ್ಲ ಎಂದರು.

ಧರ್ಮಸ್ಥಳದಲ್ಲಿ ನಿನ್ನೆ ನಡೆದ ಹಲ್ಲೆ ಪ್ರಕರಣ ಕುರಿತು ಪ್ರತಿಕ್ರಿಯಿಸಿದ ಅವರು, ಎಸ್‌ಐಟಿ ಈ ಬಗ್ಗೆ ಸೂಕ್ತವಾದ ತನಿಖೆಯನ್ನು ನಡೆಸಿ ಸತ್ಯಾಸತ್ಯತೆಯನ್ನು ಬಯಲಿಗೆ ಎಳೆಯಬೇಕು. ಅಲ್ಲಿನ ನೈಜ ಪರಿಸ್ಥಿತಿ ಸ್ಥಳೀಯರಿಗೆ ಗೊತ್ತು. ರಾಜ್ಯದಲ್ಲಿ ಅತಿ ಹೆಚ್ಚು ಭಕ್ತರನ್ನು ಹೊಂದಿರುವ ಕ್ಷೇತ್ರ ಧರ್ಮಸ್ಥಳವಾಗಿದ್ದು, ಅಲ್ಲಿನ ಧಾರ್ಮಿಕ ಭಾವನೆ ಹಾಗೂ ಕ್ಷೇತ್ರಕ್ಕೆ ಧಕ್ಕೆ ಬಾರದ ಹಾಗೆ ಇರಬೇಕು. ಆದರೆ, ಕೆಲವರಿಂದ ಅಲ್ಲಿನ ಹೆಸರು ಹಾಳಾಗುತ್ತಿರುವುದರಿಂದ ಸ್ಥಳೀಯರು ಸಿಟ್ಟಿಗೆದ್ದಿದ್ದಾರೆ. ಹಾಗಾಗಿ ಧಾರ್ಮಿಕ ಭಾವನೆ ಹಾಗೂ ಧರ್ಮಸ್ಥಳ ಹೆಸರು ಕೆಡಿಸುವ ಕೆಲಸ ಯಾರೂ ಮಾಡಬಾರದು ಎಂದರು.

ವಹಿವಾಟು ಮಿತಿ ಮೀರಿದರೆ ಜಿಎಸ್‌ಟಿ ನೋಂದಣಿ ಕಡ್ಡಾಯ

ಚಾಮರಾಜನಗರ: ಸರಕು ಮತ್ತು ಸೇವಾ ತೆರಿಗೆ ವಹಿವಾಟು ವಾರ್ಷಿಕವಾಗಿ 40 ಲಕ್ಷ ರೂ (ಸರಕಿಗೆ), 20 ಲಕ್ಷ (ಸೇವೆಗೆ) ದಾಟಿದರೆ ಕಡ್ಡಾಯವಾಗಿ ನೋಂದಣಿ ಪಡೆದು ವ್ಯವಹರಿಸಬೇಕೆಂದು ವಾಣಿಜ್ಯ ತೆರಿಗೆ ಉಪ ಆಯುಕ್ತ ರಾಘವೇಂದ್ರ ಸೂಣಗಾರ ತಿಳಿಸಿದರು.

ಜಿಲ್ಲಾ ಲೆಕ್ಕ ಪರಿಶೋಧಕರ ಸಂಘ ಮತ್ತು ವಾಣಿಜ್ಯ ತೆರಿಗೆ ಇಲಾಖೆ ಸಹಯೋಗದಲ್ಲಿ ನಗರದ ಸಂತೆಮರಳ್ಳಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಜಿಎಸ್‌ಟಿ ನೋದಣಿ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ದೇಶ ಒಂದು ತೆರಿಗೆ ಕಲ್ಪನೆಯಲ್ಲಿ ಬಂದ ಸರಕು ಮತ್ತು ಸೇವಾ ತೆರಿಗೆ ಕಾನೂನು ತುಂಬ ಸರಳ ಮತ್ತು ಸುಲಭವಾಗಿದೆ ದೇಶದ ಅಭಿವೃದಿಗೆ ಜಿಎಸ್‌ಟಿಯು ಪೂರಕವಾಗಿದೆ ಎಂದರು. ಜಿಎಸ್‌ಟಿ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಬೇಕಾದರೆ ಸ್ಥಳಿಯ ವಾಣಿಜ್ಯ ತೆರಿಗೆ ಇಲಾಖೆ ಸಂಪರ್ಕಿಸಲು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಲೆಕ್ಕ ಪರಿಶೋಧಕ ಸಂಘದ ಜಿಲ್ಲಾಧ್ಯಕ್ಷ ಸಿ.ಎಂ.ವೆಂಕಟೇಶ್, ಜಿಎಸ್‌ಟಿಯಲ್ಲಿ ಎಲ್ಲಾ ವಸ್ತುಗಳಿಗು ತೆರಿಗೆ ಒಳಪಡುವುದಿಲ್ಲ, ಮುಖ್ಯವಾಗಿ ಹಾಲು, ಹಣ್ಣುಗಳು, ತಾಜಾ ತರಕಾರಿ, ಮಾಂಸ ಮುಂತಾದವುಗಳಿಗೆ ಜಿಎಸ್‌ಟಿ ಇರುವುದಿಲ್ಲ. ಇದರಿಂದ ಸಣ್ಣ ವರ್ತಕರು ಮತ್ತು ತಳ್ಳುವಗಾಡಿಯ ವ್ಯಾಪಾರಸ್ಥರು ಆತಂಕ ಪಡುವ ಪಡಬಾರದು. ವಾಣಿಜ್ಯ ತೆರಿಗೆ ಇಲಾಖೆಯವರು ನೀಡಿದ ನೋಟಿಸ್ ಅಥವಾ ಇಂಟಿಮೇಷನ್‌ಗಳಿಗೆ ಉತ್ತರ ನೀಡದಿದ್ದರೆ ಮುಂದೆ ತೊಂದರೆಗೆ ಸಿಲುಕ ಬೇಕಾಗುತ್ತದೆ. ಆದರಿಂದ ನೋಟಿಸ್‌ಗೆ ಮರು ಉತ್ತರ ನೀಡಬೇಕಾದುದು ಆದ್ಯ ಕರ್ತವ್ಯವಾಗಿದೆ. ವರ್ತಕರಿಗೆ ಸರಕು ಮತ್ತು ಸೇವಾ ತೆರಿಗೆ ಕಾನೂನು ಅರಿವು ಅಗತ್ಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳಾದ ಸುಚಿತ್ರದೇವ್, ಚಂದ್ರಶೇಖರ್, ಮಂಜುಕುಮಾರ್, ನಾಗರಾಜು ಲೆಕ್ಕ ಪರಿಶೋಧಕರಾದ ಬಿ.ಎಂ. ಪುಟ್ಟಮಾದಪ್ಪ ಮುಂತಾದವರು ಇದ್ದರು.

ಇಂದು ವರಮಹಾಲಕ್ಷ್ಮೀ ಹಬ್ಬದ ಸಂಭ್ರಮ

ಬೆಲೆ ಏರಿಕೆಯ ನಡುವೆಯೂ ಖರೀದಿಯ ಭರಾಟೆ ಜೋರು

ಚಾಮರಾಜನಗರ, ಆ.7– ವರಮಹಾಲಕ್ಷ್ಮೀ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಸಿದ್ಧತೆ ಜೋರಾಗಿ ನಡೆಯುತ್ತಿದ್ದು, ಮಹಿಳೆಯರು ಮಹಾಲಕ್ಷ್ಮೀಯ ಪೂಜೆಗೆ ಸಂಭ್ರಮದಿಂದ ಸಜ್ಜುಗೊಳ್ಳುತ್ತಿದ್ದಾರೆ.



ವರಮಹಾಲಕ್ಷ್ಮೀ ಹಬ್ಬದ ಹಿನ್ನೆಲೆಯಲ್ಲಿ ಮಹಿಳೆಯರು ಖರೀದಿಯಲ್ಲಿ ನಿರತರಾಗಿರುವುದು.

ಹಬ್ಬದ ಅಂಗವಾಗಿ ಮನೆಗಳಲ್ಲಿ ಪೂಜೆ ನಡೆದರೆ, ಕೆಲವು ದೇವಸ್ಥಾನಗಳಲ್ಲೂ ವಿಶೇಷ ಪೂಜೆ ನಡೆಯಲಿದೆ. ಜಿಲ್ಲಾ ಕೇಂದ್ರ ಚಾಮರಾಜನಗರ ಸೇರಿದಂತೆ ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರಗಳ ಮಾರುಕಟ್ಟೆಯಲ್ಲಿ ಹುಬ್ಬಾಗಿ ಅಗತ್ಯ ವಸ್ತುಗಳ ಖರೀದಿ ಭರಾಟೆ ಜೋರಾಗಿತ್ತು.

ನಗರದ ದೊಡ್ಡಅಂಗಡಿ ಬೀದಿ, ಚಿಕ್ಕಅಂಗಡಿ ಬೀದಿ, ತರಕಾರಿ ಮಾರುಕಟ್ಟೆ ಆವರಣ ಸೇರಿದಂತೆ ಗುರುವಾರ ಮಧ್ಯಾಹ್ನದಿಂದಲೇ ಬಹುತೇಕ ಕಡೆಗಳಲ್ಲಿ ವ್ಯಾಪಾರ ಆರಂಭವಾಗಿತ್ತು.

ಮಹಿಳೆಯರೇ ಹೆಚ್ಚು: ಬೆಲೆ ಏರಿಕೆಯನ್ನು ಲೆಕ್ಕಿಸದೆ ಜನರು ಅಗತ್ಯ ವಸ್ತುಗಳ ಖರೀದಿಯಲ್ಲಿ ನಿರತರಾಗಿದ್ದರು. ಹೂ, ಹಣ್ಣು, ತರಕಾರಿ, ಪೂಜಾ ಸಾಮಗ್ರಿಗಳು ಹಾಗೂ ಅಲಂಕಾರಕ್ಕೆ ಅಗತ್ಯ ವಸ್ತುಗಳನ್ನು ಖರೀದಿಸಲು ಮಹಿಳೆಯರೇ ಹೆಚ್ಚಾಗಿ ಬಂದಿದ್ದು ವಿಶೇಷವಾಗಿತ್ತು ವ್ಯಾಪಾರಿಗಳೊಂದಿಗೆ ಚೌಕಾಸಿ ನಡೆಸುತ್ತಿದ್ದ ದೃಶ್ಯವೂ ಕಂಡು ಬಂತು. ಬಾಳೆ ಕಂದು, ಬೇರಿ ಹಣ್ಣು ನೈದಿಲೆ ಹಾಗೂ ಇನ್ನಿತರ ಹೂವುಗಳಿಗೆ ಹೆಚ್ಚಿನ ಬೇಡಿಕೆ ಇತ್ತು.

ಗಗನಕ್ಕೇರಿದ ದರ: ಹಬ್ಬದ ಹಿನ್ನೆಲೆಯಲ್ಲಿ ಹೂ, ಹಣ್ಣುಗಳ ದರ ಗಗನಕ್ಕೇರಿತ್ತು ತರಕಾರಿ ಬೆಲೆಯಲ್ಲಿ ಹೆಚ್ಚಿನ ವ್ಯತ್ಯಾಸವಾಗಿಲ್ಲ. ಬಾಳೆ ಕಂದು, ಮಾವಿನ ಸೊಪ್ಪು, ಕಬ್ಬಿನ ಸೋಗೆ ಜೊತೆಯಾಗಿ 30ರಿಂದ 40ಕ್ಕೆ ಮಾರಾಟ ಮಾಡುತ್ತಿದ್ದರು. ಕನಕಾಂಬರ ಹೂವು ಮೀಟರ್‌ಗೆ 250, ಸುಗಂಧರಾಜ ಮತ್ತು ಹಾರ 50 ರಿಂದ 200 ರೂ.ವರೆಗೂ ಮಾರಾಟವಾಗುತ್ತಿತ್ತು. ಉಳಿದಂತೆ ಮಲ್ಲಿಗೆ 100, ಚೆಂಡು ಹೂ 30ರಿಂದ 40, ಗುಲಾಬಿ ಒಂದಕ್ಕೆ 15ರಿಂದ 20ರೂ., ಕಾಕಡ 60ರಿಂದ 80ಕ್ಕೆ ಮಾರಾಟವಾಗುತ್ತಿತ್ತು.

ತಾವರೆ, ನೈದಿಲೆ ಹೂವಿಗೆ ಬೇಡಿಕೆ ಹೆಚ್ಚಿತ್ತು. ಜೋಡಿ ಕಮಲದ ಬೆಲೆ 40 ಇತ್ತು. ತರಕಾರಿಗಳ ಪೈಕಿ ಈರುಳ್ಳಿ ಬೆಲೆ ಕೊಂಚ ಹೆಚ್ಚಳವಾಗಿದ್ದು, ಉಳಿದಂತೆ ಎಲ್ಲಾ ತರಕಾರಿಗಳ ಬೆಲೆ ಯಥಾಸ್ಥಿತಿ ಮುಂದುವರಿದಿದೆ.

ಅಲಂಕಾರಿಕ ವಸ್ತುಗಳಿಗೂ ಬೇಡಿಕೆ: ಹಬ್ಬದ ಪ್ರಯುಕ್ತ ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಸಮೀಪದ ಅಂಗಡಿ ಮಳಿಗೆಗಳಲ್ಲಿ ಹಾಗೂ ದೊಡ್ಡ ಅಂಗಡಿ ಬೀದಿಯ ಮಾರುಕಟ್ಟೆಯಲ್ಲಿ ಎಲ್ಲಿ ನೋಡಿದರೂ ವರಮಹಾಲಕ್ಷ್ಮೀ ದೇವಿಯ ಅಲಂಕಾರಿಕ ವಸ್ತುಗಳದ್ದೇ ಭರಾಟೆ. ಲಕ್ಷ್ಮೀ ದೇವಿಯ ಅಲಂಕಾರಕ್ಕೆ ಬಳೆ ಹಾಗೂ ಆಭರಣಗಳ ಖರೀದಿಯಲ್ಲಿ ಮಹಿಳೆಯರು ನಿರತರಾಗಿದ್ದರು.

ಉಂಡ ಮನೆಗೆ ಕನ್ನ ಹಾಕಿದ್ದ ಪ್ರಕರಣ ಬಯಲು

ಚಿನ್ನಾಭರಣ ಕದ್ದು ಪರಾರಿಯಾಗಿದ್ದ ಕಾರಿನ ಚಾಲಕರಿಬ್ಬರ ಬಂಧನ

ಮನೆಯಲ್ಲಿ ಆಭರಣವಿಟ್ಟರೆ ಕಳ್ಳತನವಾಗಬಹುದು ಎಂದು ಜೊತೆಯಲ್ಲಿ ಚಿನ್ನಾಭರಣ ಕೊಂಡೊಯ್ದಿದ್ದ ವೇಳೆ ಘಟನೆ

ಬೇಗೂರು (ಗುಂಡ್ಲುಪೇಟೆ), ಆ.7– ಕಾರಿನಲ್ಲಿಟ್ಟಿದ್ದ ಚಿನ್ನಾಭರಣ ಕಳವು ಮಾಡುವ ಮೂಲಕ ಉಂಡ ಮನೆಗೆ ಕನ್ನ ಹಾಕಿದ್ದ ಪ್ರಕರಣವನ್ನು ಭೇದಿಸಿರುವ ಬೇಗೂರು ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, ಬಂಧಿತರಿಂದ ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡ ಬಳ್ಳಾಪುರದ ಭುವನೇಶ್ವರಿ ನಗರದ ನಿವಾಸಿ ಕಾರಿನ ಚಾಲಕ ಮಂಜುನಾಥ್ ಅಲಿಯಾಸ್ ರವಿ(33) ಹಾಗೂ ಮೈಸೂರಿನ ದೇವಲಾಪುರದ ನಿವಾಸಿ ಗಿರೀಶ್(38) ಬಂಧಿತ ಆರೋಪಿಗಳಾಗಿದ್ದು ಆರೋಪಿಗಳಿಂದ ಚಿನ್ನಾಭರಣ ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರುಗಳನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ.

ಮೈಸೂರಿನ ಬನ್ನಿಮಂಟಪದ ಎಸ್‌ಎನ್ ನಗರದ ನಿವಾಸಿಗಳಾದ ದಂಪತಿ ಜಯರಾಂ ಮತ್ತು ಶಿಲ್ಪಾ ಜಯರಾಂ ತಮ್ಮ ಕಾರಿನಲ್ಲಿ ಮೈಸೂರಿನಿಂದ ಕೇರಳದ ಕ್ಯಾಲಿಕೆಟ್‌ಗೆ ತೆರಳುವ ವೇಳೆ ತಮ್ಮ ಬಳಿ ಕೆಲಸ ಮಾಡುತ್ತಿದ್ದ ಕಾರಿನ ಚಾಲಕ ಮಂಜುನಾಥ ಅಲಿಯಾಸ್ ರವಿ ಹಾಗೂ ಗಿರೀಶ್ ಅವರುಗಳನ್ನು ಸಹ ಜೊತೆಗೆ ಕರೆದೊಯ್ದಿದ್ದರು. ಚಿನ್ನಾಭರಣಗಳನ್ನು ಮನೆಯಲ್ಲಿಟ್ಟರೆ ಕಳ್ಳತನವಾಗಬಹುದು ಎಂದು ತಮ್ಮ ವ್ಯಾನಿಟಿ ಬ್ಯಾಗ್‌ನಲ್ಲಿ ಅವುಗಳನ್ನು ತಮ್ಮ ಜೊತೆ ಕೊಂಡೊಯ್ದಿದ್ದರು.

ಬೇಗೂರಿನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಕಾರನ್ನು ನಿಲ್ಲಿಸಿ ಚಿನ್ನಾಭರಣವಿದ್ದ ವ್ಯಾನಿಟಿಬ್ಯಾಗನ್ನು ಕಾರಿನಲ್ಲಿಟ್ಟು ಸೋಮು ಹೋಟೆಲ್‌ನಲ್ಲಿ ತಿಂಡಿ ತಿಂದು ಬರುವುದರೊಳಗಾಗಿ ವ್ಯಾನಿಟಿಬ್ಯಾಗಿನಲ್ಲಿ ಚಿನ್ನಾಭರಣವಿರುವ ವಿಚಾರ ತಿಳಿದಿದ್ದ ಚಾಲಕ ಮಂಜುನಾಥ್ ಹಾಗೂ ಗಿರೀಶ್ ತಮಗೆ ಸಂಬಳ ಕೊಟ್ಟ ಅನ್ನ ಹಾಕಿದ್ದ ಮಾಲೀಕರಿಗೆ ಮೋಸ ಮಾಡಿ ಒಡವೆಗಳನ್ನಿಟ್ಟಿದ್ದ ಬ್ಯಾಗನ್ನು ಲಪಟಾಯಿಸಿ ಬಸ್ಸಿನಲ್ಲಿ ಪರಾರಿಯಾಗಿದ್ದರು. ತಿಂಡಿ ತಿಂದು ಬಂದ ದಂಪತಿ ಕಾರಿನಲ್ಲಿಟ್ಟಿದ್ದ ವ್ಯಾನಿಟಿ ಬ್ಯಾಗಿನೊಂದಿಗೆ ಚಾಲಕರು ಕಾಣೆಯಾಗಿರುವುದನ್ನು ಕಂಡು ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಪತ್ತೆಗಾಗಿ ಜಿಲ್ಲಾ ಪೊಲೀಸ್ ಅಧೀಕ್ಷಕಿ ಶ್ರೀಮತಿ ಡಾ. ಬಿ.ಟಿ.ಕವಿತಾ, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ.ಎನ್. ಶಶಿಧರ್ ಕೆಎಸ್‌ಪಿಎಸ್ ಹಾಗೂ ಚಾ.ನಗರ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಲಕ್ಷ್ಮಯ್ಯ ಅವರ ಮಾರ್ಗದರ್ಶನದಲ್ಲಿ ಬೇಗೂರು ವೃತ್ತ ನಿರೀಕ್ಷಕರಾದ ವಿ.ಸಿ ವನರಾಜು. ಮತ್ತು ಪಿ.ಎಸ್.ಐ ನವೀನ್ ಹಾಗೂ ಲೋಕೇಶ್ ರವರು ತಂಡವನ್ನು ರಚಿಸಿ ಆರೋಪಿಗಳನ್ನು ಬಂಧಿಸಿ ಕದ್ದ ಆಭರಣಗಳನ್ನು ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಸಿಬ್ಬಂದಿಗಳಾದ ಜಿ.ಎನ್.ಪುಟ್ಟರಾಜು, ಅಜಿತ್ ಕುಮಾರ್, ದಿವಾಕರ್, ಶಂಕರಲಿಂಗೇಗೌಡ, ಸಚಿನ್, ರಾಜು, ಚಾಲಕರಾದ ಹರೀಶ್, ಶಿವಕುಮಾರ್ ಸೈಬರ್ ಕ್ರೈಂ ವಿಭಾಗದ ವೆಂಕಟೇಶ್, ಶಂಕರ್‌ನಾಗ್ ಇದ್ದರು.

■ ಸತ್ಯಮೂರ್ತಿ ತೋಳಹುಣಸೆ

ಉಪೇಂದ್ರನ 'ನೆಕ್ಸ್ಟ್ ಲೆವೆಲ್'ನಲ್ಲಿ ಮಾಲಾಶ್ರೀ ಮಗಳು ಆರಾಧನಾ



ತರುಣ್ ಶಿವಪ್ಪ ನಿರ್ಮಾಣದ ಬಿಗ್ ಬಜೆಟ್ ಪ್ಯಾನ್ ಇಂಡಿಯಾ ಚಿತ್ರ 'ನೆಕ್ಸ್ಟ್ ಲೆವೆಲ್'ನಲ್ಲಿ ಉಪೇಂದ್ರ ನಾಯಕನಾಗಿ ನಟಿಸುತ್ತಿದ್ದು, ಇದೀಗ ನಾಯಕಿ ಪಾತ್ರಕ್ಕೆ ಮಾಲಾಶ್ರೀ ಪುತ್ರಿ ಆರಾಧನಾ ಆಯ್ಕೆಯಾಗಿದ್ದಾರೆ. ಅರವಿಂದ್ ಕೌಶಿಕ್ ನಿರ್ದೇಶನದ ಈ ಚಿತ್ರದ ಮುಹೂರ್ತ ಸದ್ಯದಲ್ಲೇ ನಡೆಯಲಿದೆ.

ಕಾಟೇರ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಟ್ಟಿದ್ದ ಆರಾಧನಾ ಮೊದಲ ಚಿತ್ರದಲ್ಲಿಯೇ ತಮ್ಮ ನಟನಾ ಸಾಮರ್ಥ್ಯವನ್ನು ಪರಿಚಯಿಸಿದ್ದರು. ದರ್ಶನ್‌ರಂತಹ ಸ್ಟಾರ್ ಜೋಡಿಯಾಗಿ ಅಭಿನಯಿಸಿದ್ದರು. ಇದೀಗ ಎರಡನೇ ಚಿತ್ರದಲ್ಲಿಯೂ ಸೂಪರ್‌ಸ್ಟಾರ್ ಉಪೇಂದ್ರಗೆ ನಾಯಕಿಯಾಗಿ ಸಾಥ್ ಕೊಡಲಿದ್ದಾರೆ.


ಚೊಚ್ಚಲ ಚಿತ್ರದಿಂದ ಸಂಪೂರ್ಣವಾಗಿ ಭಿನ್ನವಾದ ಪಾತ್ರದಲ್ಲಿ ಆರಾಧನಾ ಕಾಣಿಸಿಕೊಳ್ಳಲಿದ್ದಾರೆ. ಅವರು ಮುಖ್ಯಮಂತ್ರಿಯ ಮಗಳ ಪಾತ್ರವನ್ನು ನಿರ್ವಹಿಸುತ್ತಾರೆ. ಕಾಟೇರಾದಲ್ಲಿನ ಹಳ್ಳಿ ಹುಡುಗಿಯ ಪಾತ್ರಕ್ಕಿಂತ ಬಹಳ ಭಿನ್ನವಾದ ಗ್ಲಾಮರಸ್, ಆಧುನಿಕ ಪಾತ್ರವಾಗಿರುತ್ತಾರೆ ಎಂದು ನಿರೀಕ್ಷಿಸಲಾಗಿದೆ.



ತಮ್ಮ ಮುಂದಿನ ಯೋಜನೆಗೆ ಸಹಿ ಹಾಕುವ ಮೊದಲು ಒಂದು ವರ್ಷಕ್ಕೂ ಹೆಚ್ಚು ಕಾಲ ಕಾಯ್ದಿದ್ದಕ್ಕೂ ಸಾರ್ಥಕವಾಯಿತು, ಅದ್ಭುತ ಕತೆ ಸಿಕ್ಕಿದೆ. ಈ ಒಂದೂವರೆ ವರ್ಷಗಳು ಸುಲಭವಾಗಿರಲಿಲ್ಲ ಭಾವನೆಗಳ ರೋಲರ್ ಕೋಸ್ಟರ್ ಆಗಿತ್ತು. ಆದರೆ ನಾನು ಯಾವಾಗಲೂ ಸರಿಯಾದ ಸ್ಕ್ರಿಪ್ಟ್‌ಗಾಗಿ ಕಾಯುವುದರಲ್ಲಿ ನಂಬಿಕೆ ಇಟ್ಟಿದ್ದೆ. ಕಾಟೇರಾ ನಂತರ, ನಿರೀಕ್ಷೆಗಳು ಹೆಚ್ಚಿದ್ದವು. ನಾನು ಆಯ್ಕೆಮಾಡಿದ್ದು ಸರಿ ಎಂದು ಭಾವಿಸದ ಹೊರತು ನಾನು ಒಂದು ಹೆಜ್ಜೆ ಇಡಲು ಬಯಸಲಿಲ್ಲ. ನನಗೆ ಕೆಲವು ಆಫರ್‌ಗಳು ಬಂದವು, ಆದರೆ ಸ್ಕ್ರಿಪ್ಟ್ ಇಷ್ಟವಾಗಲಿಲ್ಲ ಎಂದಿದ್ದಾರೆ.

ಬೆಂಗಳೂರು, ಮುಂಬೈ, ಹೈದರಾಬಾದ್ ಸೇರಿದಂತೆ ಭಾರತದ ಹಲವು ಕಡೆ ಚಿತ್ರದ ಶೂಟಿಂಗ್ ನಡೆಯಲಿದೆ ಎ, ಉಪೇಂದ್ರ, ರಕ್ತಕಣ್ಣೀರು ಚಿತ್ರಗಳ ಶೈಲಿಯಲ್ಲೇ ಈ ಚಿತ್ರ ಮೂಡಿಬರಲಿದೆ.

'ಲೂಸ್‌ಮಾದ' ಕರಾವಳಿ ಕಥೆಯಲ್ಲಿ ಯೋಗಿ ನಾಯಕ



ದುನಿಯಾ ಚಿತ್ರದಲ್ಲಿ ಲೂಸ್ ಮಾದನ ಪಾತ್ರ ಮಾಡಿದ ನಂತರ ಯೋಗೇಶ್ ಲೂಸ್‌ಮಾದ ಎಂದೇ ಹೆಸರಾದರು. ಈಗ ಅದೇ ಹೆಸರು ಚಿತ್ರವೊಂದರ ಶೀರ್ಷಿಕೆಯಾಗಿದೆ. ಇದರಲ್ಲಿ ನಾಯಕನಾಗೂ ಯೋಗೇಶ್ ಅವರೇ ಅಭಿನಯಿಸುತ್ತಿದ್ದಾರೆ. ಧರ್ಮೇಂದ್ರ ಅವರ ನಿರ್ಮಾಣದ ಈ ಚಿತ್ರಕ್ಕೆ ರಂಜಿತ್‌ಕುಮಾರ್ ಗೌಡ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆಯಿತು.

ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ನಿರ್ಮಾಪಕ ಧರ್ಮೇಂದ್ರ ಮಾತನಾಡುತ್ತಾ, ವೃತ್ತಿಯಲ್ಲಿ ಕಂಟ್ರಾಕ್ಟರ್ ಆದ ನನಗೆ ಸಿನಿಮಾರಂಗ ಹೊಸತು. ಸ್ನೇಹಿತರ ಸಲಹೆಯ ಮೇರೆಗೆ ನಿರ್ಮಾಪಕನಾದೆ. ನಾನು ಲೂಸ್ ಮಾದ ಯೋಗೇಶ್ ಅವರ ಅಭಿಮಾನಿ. ಹಾಗಾಗಿ ಈ ಚಿತ್ರ ನಿರ್ಮಾಣಕ್ಕೆ ತಕ್ಷಣ ಒಪ್ಪಿದೆ ಎಂದರು.

ನಿರ್ದೇಶಕ ರಂಜಿತ್‌ಕುಮಾರ್ ಮಾತನಾಡುತ್ತಾ, ನನ್ನ ನಿರ್ದೇಶನದ ಮೂರನೇ ಚಿತ್ರವಿದು. ಕರಾವಳಿ ಭಾಗದ ಸುತ್ತಮುತ್ತ ನಡೆಯುವ ಕಥೆಯಾಗಿದ್ದು ಆ. 25 ರಿಂದ ಚಿತ್ರೀಕರಣ ಆರಂಭಿಸಿ ಉಡುಪಿ, ಸುರತ್ಕಲ್ ಹಾಗೂ ಮಂಗಳೂರಿನಲ್ಲಿ ಶೂಟಿಂಗ್ ಮಾಡುತ್ತೇವೆ. ಯೋಗೇಶ್ ಅವರಿಗೆ ಈ ಕಥೆ ಹೇಳಿದಾಗ ಇಷ್ಟಪಟ್ಟು ನಟಿಸಲು ಒಪ್ಪಿದರು. ಎಲ್ಲಾ ಪ್ರಾಣಿಗಳಿಗಿಂತ ತೋಳವನ್ನು ಪಳಗಿಸುವುದು ಸ್ವಲ್ಪ ಕಷ್ಟ, ಅದು ಯಾರ ಮಾತನ್ನೂ ಕೇಳದ ಪ್ರಾಣಿ. ಚಿತ್ರದ ನಾಯಕನ ಸ್ವಭಾವವೂ ಇದೇರೀತಿ ಇರುತ್ತದೆ, ಯಾರಿಗೂ ಅಂಜದ ಹುಡುಗ ಎಂದರು.

ನಾಯಕ ಯೋಗೀಶ್ ಮಾತನಾಡುತ್ತಾ, ಈ ಶೀರ್ಷಿಕೆ ಇಟ್ಕೊಂಡು ಹಿಂದೆ ಸಾಕಷ್ಟು ನಿರ್ಮಾಪಕರು ಚಿತ್ರ ಮಾಡಲು ಮುಂದಾಗಿದ್ದರು. ನಾನೇ ಬೇಡ ಎನ್ನುತ್ತಿದ್ದೆ. ಆದರೆ ಈ ಕಥೆಗೂ ಚಿತ್ರದ ಶೀರ್ಷಿಕೆಗೂ ತುಂಬಾ ಹೊಂದಾಣಿಕೆಯಿದೆ. ದುನಿಯಾ ಚಿತ್ರದ ಲೂಸ್ ಮಾದನ ಪಾತ್ರಕ್ಕೂ ಈ ಚಿತ್ರದ ಪಾತ್ರಕ್ಕೂ ಯಾವುದೇ ಸಂಬಂಧವಿಲ್ಲ. ನೋಡುಗರಿಗೆ ಒಂದೊಳ್ಳೆ ಸಿನಿಮಾ ಕೊಡಬೇಕು ಎಂಬ ಉದ್ದೇಶದಿಂದ ಈ ಚಿತ್ರ ತಂಡ ಮುಂದೆ ಬಂದಿದೆ ಎಂದರು.

ಚಿತ್ರದ ಕಾರ್ಯಕಾರಿ ನಿರ್ಮಾಪಕ ಪವನ್‌ಕುಮಾರ್ ಉಡುಪಿ ಹಾಗೂ ವಿವಾನ್ ಆಕರ್ಷ್, ರಿತೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರದೀಪ್‌ರೆಡ್ಡಿ ಅವರ ಛಾಯಾಗ್ರಹಣ, ಶಶಾಂಕ್ ಶೇಷಗಿರಿ ಅವರ ಸಂಗೀತ, ವಿನೋದ್ ಅವರ ಸಾಹಸ ನಿರ್ದೇಶನ ಹಾಗೂ ಸಚಿನ್ ಪೂಜಾರಿ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಕಿಶೋರ್, ಆದಿ ಲೋಕೇಶ್, ಅಚ್ಯುತ ಕುಮಾರ್ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ನೀ ಇರಲು ಜೊತೆಯಲಿ ಅಮೃತವರ್ಷಿಣಿಯ ರಜಿನಿ ಕಂ ಬ್ಯಾಕ್



ಹಿರಿಯ ಕಲಾವಿದ ಮೋಹನ್ ಇದೀಗ ಧಾರಾವಾಹಿಗಳಲ್ಲೇ ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾರೆ. ಸುವರ್ಣ ವಾಹಿನಿಯ 'ನೀ ಇರಲು ಜೊತೆಯಲಿ' ಸೀರಿಯಲ್‌ನಲ್ಲಿ ಒಬ್ಬ ಜವಾಬ್ದಾರಿಯುತ ತಂದೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಸಿನಿಮಾ ನಿರ್ಮಿಸಿ ಕೈತುಂಬ ಸಾಲ ಮಾಡಿಕೊಂಡ ಸಮಯದಲ್ಲಿ ನನ್ನ ಕೈಹಿಡಿದಿದ್ದು ಕಿರುತೆರೆ. ಚಿತ್ರರಂಗ ನನಗೆ ಬದುಕು ನೀಡಿದರೆ ಟಿವಿ ಉಸಿರು ನೀಡಿದೆ. ಇಲ್ಲಿ ಒಬ್ಬ ಅನಕ್ಷರಸ್ಥ ತಂದೆಗೆ ಮಗಳೇ ಸರ್ವಸ್ವವಾಗಿರುತ್ತಾಳೆ, ಇದೊಂದು ಫ್ಯಾಮಿಲಿ ಕಂಟೆಂಟ್ ಇರೋ ಕಥೆ ಎಂದು ಸದ್ಯದಲ್ಲೇ ತಮ್ಮ ಹೊಸ ಚಿತ್ರವನ್ನು ಪ್ರಕಟಿಸುವುದಾಗಿಯೂ ಹೇಳಿದರು. ಧರಣಿ ಜಿ.ರಮೇಶ್ ಅವರ ನಿರ್ದೇಶನ ಹಾಗೂ ನಿರ್ಮಾಣದ ನೀ ಇರಲು ಜತೆಯಲಿ ಧಾರಾವಾಹಿಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಅವರು ಈ ಮಾತನ್ನು ಹೇಳಿದರು. ಮೋಹನ್, ರಜನಿ, ಪವನ್ ರವೀಂದ್ರ ಹಾಗೂ ಸಲೋಮಿ ಡಿಸೋಜಾ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಧಾರಾವಾಹಿ ಇದೇ11ರಿಂದ ಪ್ರಸಾರ ಆರಂಭಿಸಲಿದೆ.

ನಟಿ ರಜನಿ ಮಾತನಾಡಿ, ಮನೆಯ ದೊಡ್ಡ ಸೊಸೆಯಾಗಿ ಕಾಣಿಸಿಕೊಂಡಿದ್ದು, ಈಕೆಯದೇ ನಡೆಯಬೇಕು ಎನ್ನುವ ಹಠ, ಅದಕ್ಕೆ ಮೈದುನ ಅಡ್ಡಗಾಲು ಹಾಕುತ್ತಾನೆ. ಅವಳ ಈ ವರ್ತನೆಗೆ ಕಾರಣವೂ ಇರುತ್ತದೆ. ಅದೇನು ಎನ್ನುವುದೇ ಕುತೂಹಲ ಎಂದರು. ನಾಯಕ ಕೃಷ್ಣನದ್ದು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬ. ಕೆಲಸದಲ್ಲಿ ಜಾಣ್ಮೆ, ನಿಪುಣತೆ ಹೊಂದಿರುವ ಈತ, ತಂತ್ರದಲ್ಲಿ ಕಪಟಿಯಾಗಿದ್ದರೂ ಮಾಡಿದ ಸಹಾಯಕ್ಕೆ ಪ್ರತಿಫಲವನ್ನು ನಿರೀಕ್ಷಿಸದ ಆಧುನಿಕ ಯುಗದ ಶ್ರೀಕೃಷ್ಣ. ಆದರೆ ಈ ಕೃಷ್ಣನಿಗೆ ಪೂತನಿಯಂತೆ ಕಾಟ ಕೊಡೋಳು ಅತ್ತಿಗೆ ಊರ್ಮಿಳಾ ದಿವಾನ್. ನನ್ನದೇ ನಡಿಬೇಕು, ನನ್ನಿಂದಲೇ ಎಲ್ಲಾ ಎಂದು ಆಕೆ ಮನೆಯವರನ್ನು ತನ್ನ ಕಂಟ್ರೋಲ್‌ನಲ್ಲಿಟ್ಟುಕೊಂಡಿರುತ್ತಾಳೆ. ಹೀಗೆ ಸೊಕ್ಕಿನಿಂದ ಮೆರಿತಿರೋ ಊರ್ಮಿಳಾಗೆ ಕೃಷ್ಣ ಹೇಗೆ ತಕ್ಕಪಾಠ ಕಲಿಸ್ತಾನೆ ಅನ್ನೋದೇ ಮುಖ್ಯ ಕಥಾಹಂದರ.

ಅಮೃತವರ್ಷಿಣಿ ಖ್ಯಾತಿಯ ರಜಿನಿ, ವರ್ಷಗಳ ಬಳಿಕ ಕಮ್‌ಬ್ಯಾಕ್ ಆಗಿದ್ದು ಊರ್ಮಿಳಾ ದಿವಾನ್ ಎಂಬ ಖಳ ನಾಯಕಿಯ ಪಾತ್ರ ನಿರ್ವಹಿಸುತ್ತಿದ್ದಾರೆ. ಮುದ್ದುಲಕ್ಷ್ಮಿ, ಮರಳಿಬಂದಳು ಸೀತೆ, ಮರಳಿ ಮನಸಾಗಿದೆ ಸೇರಿದಂತೆ ಅನೇಕ ಧಾರಾವಾಹಿಗಳನ್ನು ನಿರ್ದೇಶಿಸಿರುವ ಧರಣಿ ಜಿ.ರಮೇಶ್ ಮತ್ತೊಮ್ಮೆ ಕೌಟುಂಬಿಕ ಕಥೆಯತ್ತ ಮರಳಿದ್ದಾರೆ.

ಅಪರಿಚಿತೆಯಾದ ಗೀತಪ್ರಿಯಗೆ ಶ್ರೀನಾಥ್ ಸಾಥ್



ಈ ಹಿಂದೆ ಹೆಣ್ಣು ಭ್ರೂಣ ಹತ್ಯೆ ವಿರುದ್ಧ ಹೋರಾಡುವ ಕಥಾಹಂದರ ಇರೋ 'ತಾಯವ್ವ' ಚಿತ್ರದಲ್ಲಿ ನಟಿಸಿದ್ದ, ನಟಿ ಗೀತಪ್ರಿಯ ಅವರು ಇದೀಗ ಅಪರಿಚಿತೆ ಎಂಬ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ವಿಶ್ವನಾಥ್ ಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರದ ಶೀರ್ಷಿಕೆಯನ್ನು ಶಾಸಕ ಸಿ.ಎನ್.ಅಶ್ವತ್ಥ್ ನಾರಾಯಣ ಅವರು ಬಿಡುಗಡೆಗೊಳಿಸಿದರು. ಹಿರಿಯ ನಟ ಶ್ರೀನಾಥ್ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ನಟಿ, ಗೀತಪ್ರಿಯ ಮಾತನಾಡಿ, ಇದೊಂದು ಸೋಷಿಯಲ್ ಕಾಸ್ ಬಗ್ಗೆ ಹೇಳುವ ನೈಜ ಘಟನೆ ಆಧಾರಿತ ಚಿತ್ರ. ಇದರಲ್ಲಿ ನಾನು ಶಿಕ್ಷಕಿಯ ಪಾತ್ರ ನಿರ್ವಹಿಸುತ್ತಿದ್ದೇನೆ. ಹಳ್ಳಿಗಳಲ್ಲಿ ಹೆಣ್ಣು ಮಕ್ಕಳನ್ನು ಯಾಕೆ ಶಾಲೆಗೆ ಕಳುಹಿಸುತ್ತಿಲ್ಲ ಎಂದು ಶಿಕ್ಷಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಪಾತ್ರ ಎಂದರು.

ನಿರ್ದೇಶಕ ವಿಶ್ವನಾಥ್ ಅವರಿಗೆ ಇದು ಎರಡನೇ ಚಿತ್ರ. ಸಿನಿಮಾ ಕುರಿತು ಅವರು ಮಾತನಾಡುತ್ತಾ, ಥ್ರಿಲ್ಲರ್ ಆಗಿ ಪ್ರಾರಂಭವಾಗುವ ಈ ಚಿತ್ರ ಸಂದೇಶದೊಂದಿಗೆ ಎಂಡ್ ಆಗುತ್ತೆ. ಒಂದು ಸಮಸ್ಯೆ ಹೆಣ್ಣಿನಿಂದ ಪರಿಹಾರವಾಗುತ್ತೆ, ಹಿರಿಯ ನಟ ಶ್ರೀನಾಥ್, ಸಿಂಧೂ ಲೋಕನಾಥ್, ಆರ್.ಜೆ.ನಿಖಿತಾ ಹಾಗೂ ಶ್ರೀನಾಥ್ ಅವರ ಪುತ್ರ ರೋಹಿತ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಾಳೆಯಿಂದಲೇ ಚಿತ್ರೀಕರಣ ಶುರು ಮಾಡಿ, ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡುವ ಯೋಜನೆ ಇದೆ ಎಂದರು.

ಗೀತಪ್ರಿಯ ಅವರ ಪತಿ ಹಾಗೂ ನಿರ್ಮಾಪಕ ಸುರೇಶ್‌ಕುಮಾರ್ ಮಾತನಾಡುತ್ತಾ, ನನ್ನ ಪತ್ನಿ ಸೋಶಿಯಲ್ ಮೆಸೇಜ್ ಇರುವಂತಹ ಸಿನಿಮಾಗಳನ್ನು ಮಾಡುತ್ತಿರುವ ಖುಷಿ ನನಗಿದೆ. ಅವರ ಮೊದಲ ಸಿನಿಮಾ ನೋಡಿದೆ, ಚೆನ್ನಾಗಿತ್ತು. ಅಮರ ಫಿಲಂಸ್ ಬ್ಯಾನರ್ ಮೂಲಕ ನಾವೇ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದೇವೆ ಎಂದರು.

ನಟ ಶ್ರೀನಾಥ್ ಮಾತನಾಡುತ್ತಾ, ಕೊರೊನಾ ನಂತರ ನಾನು ನಟಿಸುತ್ತಿರುವ ಮೊದಲ ಚಿತ್ರವಿದು. ಸಮಾಜಕ್ಕೆ ಉತ್ತಮ ಸಂದೇಶ ಕೊಡಲು ಈ ಸಿನಿಮಾ ಮಾಡುತ್ತಿರುವುದು ಕೇಳಿ ತುಂಬಾ ಖುಷಿ ಆಯ್ತು. ಮುಖ್ಯವಾಗಿ 40 ವರ್ಷದ ನಂತರ ನಾನು, ನನ್ನ ಮಗ ಒಂದೇ ಚಿತ್ರದಲ್ಲಿ ನಟಿಸುತ್ತಿದ್ದೇವೆ ಎಂದರು.

ರೋಹಿತ್ ಮಾತನಾಡಿ, 35 ವರ್ಷದ ನಂತರ ಮತ್ತೆ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಅದರಲ್ಲೂ ಅಪ್ಪನ ಜೊತೆ ನಟಿಸುತ್ತಿರೋ ಖುಷಿಯಿದೆ ಎಂದು ಹೇಳಿದರು. ಈ ಚಿತ್ರಕ್ಕೆ ಅನಿಲ್ ಸಿಜೆ ಅವರ ಸಂಗೀತ ಸಂಯೋಜನೆ, ಶಂಕರ್ ಅವರ ಛಾಯಾಗ್ರಹಣವಿದೆ.

ಒಂದೇ ಚಿತ್ರಕ್ಕೆ 10 ನಿರ್ದೇಶಕರು, 50 ಪಾತ್ರಗಳಲ್ಲಿ ನಾಯಕ ಕಮಲ್



ಈ ಹಿಂದೆ ಸೂಟ್ ಚಿತ್ರದಲ್ಲಿ ನಟಿಸಿದ್ದ ಕಮಲ್‌ರಾಜ್ ಇದೀಗ ಒಟ್ಟಿಗೇ ಮೂರು ಚಿತ್ರಗಳನ್ನು ಆರಂಭಿಸಿದ್ದಾರೆ. ಮೊಹಬ್ಬತ್ ಜಿಂದಾಬಾದ್, ಟಾಸ್ಕ್ ಹಾಗೂ ನಾಳೆ ನಮ್ಮ ಭರವಸೆ ಈ ಮೂರೂ ಚಿತ್ರಗಳಲ್ಲಿ ಅಭಿನಯಿಸುವ ಜೊತೆಗೆ ಅವರೇ ನಿರ್ಮಾಣ ಸಹ ಮಾಡುತ್ತಿದ್ದಾರೆ. ಮೊಹಬ್ಬತ್ ಜಿಂದಾಬಾದ್ ಹಿಂದಿ ಚಿತ್ರ. ವಿಶೇಷವಾಗಿ ನಾಳೆ ನಮ್ಮ ಭರವಸೆ ಚಿತ್ರವನ್ನು 10 ಜನ ನಿರ್ದೇಶನ ಮಾಡಲಿದ್ದು, ಇದರಲ್ಲಿ ನಾಯಕ ಕಮಲ್‌ರಾಜ್ 50 ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇತ್ತೀಚೆಗೆ ಈ ಮೂರೂ ಚಿತ್ರಗಳ ಶೀರ್ಷಿಕೆ ಪೋಸ್ಟರ್ ಬಿಡುಗಡೆಯಾತು. ವಿ.ನಾಗೇಂದ್ರಪ್ರಸಾದ್, ಉಮೇಶ್ ಬಣಕಾರ್, ನಿರ್ದೇಶಕ ಸಾಯಿ ಪ್ರಕಾಶ್, ರವಿ ಶ್ರೀವತ್ಸ, ನಟಿ ಪ್ರಿಯಾಂಕ ಉಪೇಂದ್ರ ಅತಿಥಿಗಳಾಗಿ ಆಗಮಿಸಿದ್ದರು.

ಕಮಲ್‌ರಾಜ್ ಮಾತನಾಡುತ್ತಾ, ನಾಳೆ ನಮ್ಮ ಭರವಸೆ ಚಿತ್ರದಲ್ಲಿ ನಾನು 50 ಪಾತ್ರ ಮಾಡುತ್ತಿದ್ದೇನೆ. 75 ಸೀನ್‌ಗಳಿರುವ ಈ ಚಿತ್ರವನ್ನು ಹತ್ತು ಜನ ನಿರ್ದೇಶಿಸಲಿದ್ದಾರೆ. ಇನ್ನು ಮೊಹಬ್ಬತ್ ಜಿಂದಾಬಾದ್ ಚಿತ್ರದಲ್ಲಿ 14 ಹಾಡುಗಳಿವೆ. ಇದರಲ್ಲಿ ಹಿಂದಿ ನಟರು ಸೇರಿದಂತೆ ಹಲವಾರು ದೊಡ್ಡ ಕಲಾವಿದರು ನಟಿಸುತ್ತಿದ್ದಾರೆ. ಇದು ಕನ್ನಡ, ಹಿಂದಿ ಸೇರಿದಂತೆ ಹಲವು ಭಾಷೆಯಲ್ಲಿ ತಯಾರಾಗಲಿದೆ. ಈಗಾಗಲೇ ಈ ಮೂರೂ ಸಿನಿಮಾಗಳ ಶೂಟಿಂಗ್ ನಡೆಯುತ್ತಿದ್ದು, ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡುವ ಯೋಜನೆಯಿದೆ. ಈ ಚಿತ್ರಗಳಲ್ಲಿ ನಾನು ಲವರ್‌ಬಾಯ್, ಡಿಟೆಕ್ಟಿವ್ ಮುಂತಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದೇನೆ ಎಂದರು.

ಟಾಸ್ಕ್ ಚಿತ್ರವನ್ನು ಐದು ಜನ ನಿರ್ದೇಶನ ಮಾಡಲಿದ್ದಾರೆ. ಆ ಪೈಕಿ ಸಾಯಿಪ್ರಕಾಶ್ ಅವರು ಒಂದು ಕಥೆಗೆ ಆಕ್ಷನ್ ಕಟ್ ಹೇಳಲಿದ್ದಾರೆ. ಜನ ಥೇಟರಿಗೆ ಬರ್ತಾ ಇಲ್ಲ ಎಂಬ ಕೊರಗನ್ನು ಮಾದೇವ, ಎಕ್ಕ, ಸು ಫ್ರಂ ಸೋ ಹಾಗೂ ನರಸಿಂಹ ನೀಗಿಸಿವೆ. ಕಮಲ್ ಅವರು ಸಿನಿಮಾದಲ್ಲಿ ಏನಾದರೂ ಮಾಡಲು ಬಂದಿದ್ದಾರೆ. ಒಳ್ಳೆಯದಾಗಲಿ ಎಂದರು.

ಪ್ರಿಯಾಂಕಾ ಉಪೇಂದ್ರ ಮಾತನಾಡಿ, ಕಮಲ್ ಅವರ 200 ಮಿನಿ ಥೇಟರ್ ಮಾಡುವ ಪ್ಲಾನ್, ಅವುಗಳಲ್ಲಿ ಬಹುತೇಕ ಕನ್ನಡ ಸಿನಿಮಾ ಪ್ರದರ್ಶಿಸುವ ಯೋಜನೆ ಕೇಳಿ ನನಗೆ ತುಂಬಾ ಖುಷಿಯಾಯ್ತು. ಅವರು 50 ಪಾತ್ರಗಳ ಮಾಡ್ತಿರುವುದು ಕೇಳಿದಾಗಂತೂ ಎಕ್ಸೈಟ್ ಆಯ್ತು ಎಂದರು.


ಡಾ.ವಿ. ನಾಗೇಂದ್ರಪ್ರಸಾದ್ ಮಾತನಾಡಿ, ಕಮಲ್‌ಗೆ ಸಿನಿಮಾ ಮೇಲೆ ದೊಡ್ಡ ಹುಚ್ಚಿದೆ. ಅತಿಯಾದ ಗೀಳಿದೆ. ಹಾಗಿದ್ದರೇನೇ ಏನಾದರೂ ಸಾಧಿಸಲು ಸಾಧ್ಯ ಅವರ ಆಸಕ್ತಿ, ಉತ್ಸಾಹ ನೋಡಿದರೆ ತುಂಬಾ ಖುಷಿಯಾಗುತ್ತಿದೆ. ಈಗಾಗಲೇ ಎಲ್ಲಾ ಸಿನಿಮಾಗಳ ಗ್ರೌಂಡ್‌ವರ್ಕ್ ಮಾಡಿಕೊಂಡಿದ್ದು, ಶೂಟಿಂಗ್ ಹೋಗುವುದಷ್ಟೇ ಬಾಕಿಯಿದೆ ಎಂದರು.



ಸಿನಿಪದಬಂಧ-588



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಕಲ್ಯಾಣ್ ಕುಮಾರ್ ಅಭಿನಯದಿ ಗೃಹಕ್ಕೆ ಆಗಮಿಸಿದ ದೇವಿ 9
5. ದರ್ಶನ್ "ಸೇವಕ" 2
6. ಜೀವನ _ _ 2
8. "ನೀಲಮೇಘ ಶ್ಯಾಮ ನಿತ್ಯಾನಂದ ಧಾಮ.....", ಗೀತೆಯ ಚಿತ್ರ 7
10. ಮೌನ ಸಂಗ್ರಾಮ ಚಿತ್ರದ ನಾಯಕ 4
13. ರೆಬೆಲ್ ಸ್ಟಾರ್ ಅಂಬರೀಷ್ ಆಡಿದ ಶಿಕಾರಿ 2
14. ಒನ್ ಮ್ಯಾನ್ _ _ 2
15. ವಿಷ್ಣುವರ್ಧನ್ ಅಭಿನಯದಲ್ಲಿ ಗ್ರಹ ಬೀರಿದ ವಕ್ರದೃಷ್ಟಿ 5
16. ಭುಜಂಗಯ್ಯ ಎತ್ತಿದ ಅವತಾರಗಳ ಸಂಖ್ಯೆ 2
17. ಮಗಳ ಗಂಡನನ್ನು ಗೌರವದಿಂದ ಕರೆಯಲು ಜಯಂತಿ ನಿರ್ದೇಶನವಿದೆ 8
20. "ನೀ ಹಿಂಗಾ ನೋಡಬೇಡ ನನ್ನ ನೀ ಹಿಂಗಾ ನೋಡಿದರೆ ನನ್ನ" ಗೀತೆಯ ಕವಿ 4

ಮೇಲಿನಿಂದ ಕೆಳಕ್ಕೆ

1. ಮದನ್ ಮಲ್ಲು ಅತೀ ಬುದ್ಧಿವಂತ 5
2. ವಿಷ್ಣುವರ್ಧನ್ – ಸುಹಾಸಿನಿ ಅಭಿನಯದ ಚಿತ್ರ 3
3. ರಾಮನ ಸಹೋದರ ಎಳೆದ ಗೆರೆ 5
4. ವಿಜಯಕಾಶಿ – ಭವ್ಯಳ ನೂತನ ಬದುಕು 4
7. ಪುಟ್ಟಣ್ಣ ಕಣಗಾಲ್ ಅವರ ರಂಗ ನಾಯಕಿ 3
9. ಮಗಳ ಗಂಡಂದಿರು ರಂಪ ಮಾಡಿದ್ದಾರೆ 7
11. ಆಂಗ್ಲದ ಮಧು ಚಂದ್ರ 4
12. ಓ ಪ್ರೇಮವೇ ಚಿತ್ರದ ನಟಿ 2
14. ಬೆಟಗೇರಿ ಕೃಷ್ಣರಾಯರ ಕಾವ್ಯನಾಮ ಚಿತ್ರವೂ ಹೌದು 5
17. ರೇಲಂಗಿ ನರಸಿಂಹರಾವ್ ನಿರ್ದೇಶನದಲ್ಲಿ ಗಂಡನನ್ನು ಕರೆದ ಬಗೆ 3
18. ಬಸವರಾಜ್ ಕೆಸ್ತೂರ್ ಅವರ ಮಠಾಧಿಪತಿ 3
19. ಬಿ. ಆರ್. ಪಂತುಲು ಅವರ ತಾಯಿ 2

ಸಿನಿ ಪದಬಂಧ 587ರ ಉತ್ತರ

	ಮಾ	ನ್ಯ		ಅ	ಮ	ರ	ಭಾ	ರ	ತಿ	
	ಧ			ನು				ಣ		
ಹಾ	ವಿ	ನ	ದ್ವೇ	ಷ		ಸಿ		ಧೀ		ಮಿ
ಸ್ಯ					ಹ	ರಿ	ಹ	ರ		ಲ್ಟ್ರಿ
ರ	ವಿ	ವ	ರ್ಮ		ಸಿಂ			ಕಂ		ಮಾ
ತ್ನ		ನ			ಜ		ಕಂ	ಠೀ	ರ	ವ
ರಾ	ಮ	ಪ	ರ	ಶು	ರಾ	ಮ		ರ		
ಮ				ಭಾ		ಹೇ	ಮಾ	ವ	ತಿ	
ಕೃ	ಷ್ಣ	ಲೀ	ಲಾ			ಶ್ವ				
ಷ್ಣ			ವ		ವೀ	ರ	ಪ	ರಂ	ಪ	ರೆ
		ವೈ	ಣಿ	ಕ				ಭಾ		

ವಿಜೇತರು: ಯದುನಂದನ್.ಜಿ., ನಂ.1408, ಶ್ರೀ ಗುರುಕೃಪ, ಮುಖ್ಯರಸ್ತೆ, ಹೆಬ್ಬಾಳು 2ನೇ ಹಂತ, ಮೈಸೂರು-570017

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಹೆಚ್.ಡಿ.ಕೋಟೆ, ಸರಗೂರು ತಾಲೂಕು ಒಕ್ಕಲಿಗರ ಸಂಘದಿಂದ ಒಕ್ಕಲಿಗರನ್ನು ಅವಾಚ್ಯ ಪದ ಬಳಸಿ ನಿಂದಿಸಿರುವ

ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ವಿರುದ್ಧ ಭಾರೀ ಪ್ರತಿಭಟನೆ

ಪ್ರಕರಣ ದಾಖಲಿಸಿ, ಗಡಿಪಾರು ಮಾಡದಿದ್ದರೆ ತಾಲೂಕು ಕಚೇರಿಗೆ ಮುತ್ತಿಗೆ: ಮಾಜಿ ಸಂಸದ ಪ್ರತಾಪ್ ಸಿಂಹ

ಹೆಚ್.ಡಿ.ಕೋಟೆ, ಆ.7– ಒಕ್ಕಲಿಗರ ಬಗ್ಗೆ ಅವಾಚ್ಯ ಪದಗಳನ್ನು ಬಳಸಿ ಅವಹೇಳನಕಾರಿಯಾಗಿ ನಿಂದಿಸಿರುವ ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಒಕ್ಕಲಿಗರ ಸಂಘದಿಂದ ಪಟ್ಟಣದಲ್ಲಿ ಗುರುವಾರ ಭಾರೀ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಗದ್ದಿಗೆ ವೃತ್ತದಲ್ಲಿ ಜಮಾಯಿಸಿದ ಸಾವಿರಾರು ಒಕ್ಕಲಿಗ ಸಮುದಾಯದವರು ಅಲ್ಲಿಂದ ಪ್ರತಿಭಟನಾ ಮೆರವಣಿಗೆಯಲ್ಲಿ ತೆರಳಿ ಬಾಪೂಜಿ ವೃತ್ತದಲ್ಲಿ ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಬಾಪೂಜಿ ವೃತ್ತದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ಕಾವೇರಿ ನೀರಾವರಿ ನಿಗಮದ ಜಮೀನು ಕಬಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಒಕ್ಕಲಿಗ ಸಮುದಾಯವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಸಮುದಾಯದ ವಿರುದ್ಧ ಹಗುರವಾಗಿ ಮಾತನಾಡಿದ್ದಾರೆ. ಒಕ್ಕಲಿಗ ಸಮುದಾಯ ಎಲ್ಲಾ ಸಮುದಾಯವನ್ನು ಸಮಾನವಾಗಿ ಕಾಣುತ್ತದೆ. ಹೀಗಾಗಿ ಒಕ್ಕಲಿಗ ಸಮುದಾಯವನ್ನು ನಿಂದಿಸಿರುವ ಕಾಂಗ್ರೆಸ್ ಮುಖಂಡ ಸೀತಾರಾಂ ವಿರುದ್ಧ ಪ್ರಕರಣ ದಾಖಲಿಸಬೇಕು. ಅಲ್ಲದೇ ಆತನನ್ನು ಗಡಿ ಪಾರು ಮಾಡಬೇಕು. ಆತ ಕಬಳಿಸಿರುವ ಕಾವೇರಿ ನೀರಾವರಿ ನಿಗಮದ ಜಮೀನನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಬಳಿಕ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ಒಕ್ಕಲಿಗ ಸಮುದಾಯವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಪ್ರಕರಣ ಸಂಬಂಧ ಪರಿಶೀಲನೆ ನಡೆಸಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಅಡಿಷನಲ್ ಎಸ್ಪಿ ಮಲ್ಲಿಕ್ ನೇತೃತ್ವದಲ್ಲಿ ಡಿವೈಎಸ್ಪಿ ಗೋಪಾಲಕೃಷ್ಣ, ಕೋಟೆ, ಸರಗೂರು ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್, ಪ್ರಸನ್ನ ಕುಮಾರ್, ಎಸ್‌ಐಗಳಾದ ಚಿಕ್ಕನಾಯಕ ಚಂದ್ರಹಾಸ ಸೇರಿದಂತೆ ಪೊಲೀಸ್ ಸಿಬ್ಬಂದಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಪ್ರತಿಭಟನೆಯಲ್ಲಿ ಕೋಟೆ, ಸರಗೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಸುರೇಂದ್ರ ಡಿ.ಗೌಡ, ಸುಧೀಂದ್ರ, ಮುಖಂಡರಾದ ಸಿ.ವಿ.ನಾಗರಾಜು, ಈರೇಗೌಡ, ನರಸಿಂಹೇಗೌಡ, ಬಿಜೆಪಿ ಮುಖಂಡ ಕಿರಣ್‌ಗೌಡ, ಕೃಷ್ಣೇಗೌಡ, ಸತೀಶ್‌ಗೌಡ, ಸೋಮೇಶ್, ಚೆಲುವರಾಜು, ಶಿವರಾಜು, ರಾಜೇಂದ್ರ, ರಾಜೇಗೌಡ, ಸತೀಶ್, ಟಿ.ವೆಂಕಟೇಶ್, ಹರೀಶ್ ಗೌಡ, ವೀರೇಂದ್ರ, ರಾಮು, ಕಾಳಪ್ಪ, ಚೆಲುವರಾಜು, ಜವರೇಗೌಡ, ಗೋವಿಂದೇಗೌಡ, ಮುರಳಿಗೌಡ, ಕಲ್ಲಿರೇಗೌಡ, ಪ್ರಕಾಶ್‌ಗೌಡ, ರಾಜೇಶ್, ಶಿವಣ್ಣ, ಕಾಳಿಂಗೇಗೌಡ, ನಾಗೇಂದ್ರ, ನಿಂಗೇಗೌಡ, ರವಿ, ಬಸವಸಿದ್ದೇಗೌಡ, ಸೇರಿದಂತೆ ಸಾವಿರಾರು ಒಕ್ಕಲಿಗ ಸಮುದಾಯದವರು ಭಾಗವಹಿಸಿದ್ದರು.




ಒಕ್ಕಲಿಗ ಸಮುದಾಯದ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಮತ್ತೊಂದು ಚಿತ್ರದಲ್ಲಿ ಪ್ರತಿಭಟನಾಕಾರರನ್ನು ಕಾಣಬಹುದು.

> ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಿದ ಕನ್ನಂಬಾಡಿ ಕಟ್ಟೆಯನ್ನು ಟಿಪ್ಪು ಸುಲ್ತಾನ್ ಕಟ್ಟಿದ್ದಾರೆ ಎಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೇ ಇದೀಗ ನೀರಾವರಿ ನಿಗಮದ ಸರ್ಕಾರಿ ಜಾಗವನ್ನು ಜಿ.ವಿ.ಸೀತಾರಾಂಗೆ ಕೊಡುಮತೆ ಆದೇಶ ಮಾಡಿದ್ದಾರೆ. ಕಬಿನಿ, ನುಗು ಹಿನ್ನೀರಿನಲ್ಲಿ ಅಕ್ರಮವಾಗಿ ಖಾತೆ ಮಾಡುತ್ತಿರುವುದು ಸಂಪೂರ್ಣ ನಿಲ್ಲಬೇಕು. ಅಲ್ಲದೇ ಸೀತಾರಾಂ ಕಬಳಿಸಿರುವ ಸರ್ಕಾರಿ ಜಾಗ ವಾಪಸ್ ಪಡೆಯಬೇಕು. – ಪ್ರತಾಪ್ ಸಿಂಹ, ಮಾಜಿ ಸಂಸದ.

ಶಿಸ್ತು ಕ್ರಮಕ್ಕೆ ಪತ್ರ

ಮೈಸೂರು: ಒಕ್ಕಲಿಗ ಸಮುದಾಯವನ್ನು ಅವಾಚ್ಯ ಶಬ್ದಗಳನ್ನು ಬಳಸಿ ನಿಂದಿಸಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವಕ್ತಾರ ಜಿ.ವಿ.ಸೀತಾಂ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



ಸಮರ್ಪಕ ಬಸ್ ಸೌಲಭ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಸರಗೂರು, ಆ.7– ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ಅಖಿಲ ಭಾರತ ಜನಾಧಿಕಾರ ಸುರಕ್ಷಾ ಸಮಿತಿಯ ನೇತೃತ್ವದಲ್ಲಿ ತಾಲೂಕಿನ ಹುಸ್ಕೂರು ಹಾಡಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ಜಮಾಯಿಸಿದ ಶಾಲಾ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಅಖಿಲ ಭಾರತ ಜನಾಧಿಕಾರ ಸುರಕ್ಷಾ ಸಮಿತಿ ಸಂಚಾಲಕ ಟಿ.ಆರ್.ಸುನೀಲ್ ಮಾತನಾಡಿ, ಸಮರ್ಪಕ ಬಸ್ ಸೌಲಭ್ಯವಿಲ್ಲದೇ ಹಾಡಿ ಜನತೆ ಪರಿತಪಿಸುವಂತಾಗಿದೆ ಹೀಗಾಗಿ ಅರಣ್ಯದೊಳಗಿರುವ ಹಾಡಿಯಿಂದ ಬೆಳಗ್ಗೆ 8.30ಕ್ಕೆ ಸರಗೂರಿಗೆ ಬಸ್ ಹೊರಡುವಂತೆ ಹಾಗೂ ಸಂಜೆ 4 ಗಂಟೆಗೆ ಸರಗೂರಿನಿಂದ ಹುಸ್ಕೂರು ಹಾಡಿಗೆ ಬಸ್ ಸೌಲಭ್ಯ ಕಲ್ಪಿಸಬೇಕು. ಅಲ್ಲದೇ ದಡದಹಳ್ಳಿ ಮಾರ್ಗವಾಗಿ ಹೋಗುವ ಬಸ್ ಇಲ್ಲಿಗೆ ಬಂದು ಹೋಗುವಂತೆ ಮಾಡಬೇಕು. ಈ ಬಗ್ಗೆ ಸಾಕಷ್ಟು ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಕೂಡಲೇ ಈ ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೇ ಮುಂದಿನ ದಿನಗಳಲ್ಲಿ ಹುಸ್ಕೂರು ಹಾಡಿ ಗ್ರಾಮಸ್ಥರೊಂದಿಗೆ ಅನಿರ್ದಿಷ್ಟಾವಧಿ ಹೋರಾಟ ನಡೆಸುವುದಾಗಿ ತಿಳಿಸಿದರು.

ಮುಖಂಡ ಭೈರ ಮಾತನಾಡಿ, ಸರಗೂರಿನ ಶಾಲೆಗೆ ಹಾಡಿಯ 18 ಮಕ್ಕಳು ತೆರಳುತ್ತಿದ್ದು, ಇಲ್ಲಿಂದ 12 ಕಿಮೀ ದೂರವಿರುವ ಸರಗೂರಿಗೆ ಮಕ್ಕಳು ತೆರಳಲು ನಿತ್ಯ ಆಟೋಗೆ 30 ರೂ. ಕೊಟ್ಟು ಪ್ರಯಾಣಿಸಬೇಕು. ಕೂಲಿ ಮಾಡಿದರೆ ಮಾತ್ರ ಜೀವನ ನಡೆಸಲು ಸಾಧ್ಯವಿರುವ ಬಡ ಆದಿವಾಸಿ ನಿವಾಸಿಗಳಿಗೆ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವುದೇ ಹೆಚ್ಚು ಎನ್ನುವಂತಾಗಿದೆ. ಹೀಗಾಗಿ ವರ್ಷಕ್ಕೆ ಸಾವಿರಾರು ರೂ. ಖರ್ಚು ಮಾಡಿ ಮಕ್ಕಳಿಗೆ ಕಳುಹಿಸುವುದು ಕಷ್ಟ, ಅಲ್ಲದೇ ಉಳಿದ 20 ಮಕ್ಕಳು ಹಾಡಿಯಿಂದ ಅರಣ್ಯದ ಅಂಚಿನಲ್ಲಿ ನಾಲ್ಕು ಕಿಲೋಮೀಟರ್ ದೂರದಲ್ಲಿರುವ ದಡದಹಳ್ಳಿ ಶಾಲೆಗೆ ನಡೆದುಕೊಂಡು ಹೋಗಬೇಕು. ಆ ಮಕ್ಕಳಿಗೆ ಆಟೋ ಮಾಡಿ ಶಾಲೆಗೆ ಕಳುಹಿಸುವ ಶಕ್ತಿ ಪೋಷಕರಿಗಿಲ್ಲ. ಇದರಿಂದ ಪ್ರತಿ ವರ್ಷ 20 ಮಕ್ಕಳು 5ನೇ ತರಗತಿ ನಂತರ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಹುಸ್ಕೂರು ಹಾಡಿಯಲ್ಲಿ 5ನೇ ತರಗತಿಯವರೆಗೆ ಮಾತ್ರ ಇದೆ ಅಲ್ಲಿವರೆಗೆ ಮಾತ್ರ ಎಲ್ಲಾ ಮಕ್ಕಳನ್ನು ಓದಿಸಲು ಸಾಧ್ಯವಾಗುತ್ತಿದೆ. ಈ ಶಾಲೆಗೆ ಬರುವ ಶಿಕ್ಷಕರು ಓಡಾಡಲು ಸಹ ಸಮಸ್ಯೆ ಆಗುತ್ತಿದೆ. ಹೀಗಾಗಿ ಕೂಡಲೇ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಿ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಹಾಡಿಯ ಮಹಿಳಾ ಮುಖಂಡರಾದ ಬುಂಡಮ್ಮ, ಹಾಡಿಯ ಮುಖಂಡ ತಿರುಪತಿ ಮಾತನಾಡಿದರು. ಪ್ರತಿಭಟನೆಯಲ್ಲಿ ಹುಸ್ಕೂರು ಹಾಡಿ ಮುಖಂಡರಾದ ರತ್ನಮ್ಮ, ನೂರಾಳಯ್ಯ, ಕುಳ್ಳಯ್ಯ, ನಿಂಗಯ್ಯ, ಚಾಮ, ಮಹೇಶ್, ಅಪ್ಪು, ನಿಂಗಯ್ಯ, ಸೋಮ ಸೇರಿದಂತೆ ಹಾಡಿಯ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾದಿಗ ಸಮುದಾಯದ ಹೋರಾಟದ ಫಲ: ಸ್ಮಶಾನಕ್ಕೆ ರಸ್ತೆ ಮಂಜೂರು

ತಹಸೀಲ್ದಾರ್ ಸೇರಿದಂತೆ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ತಿ.ನರಸೀಪುರ, ಆ.7– ತಾಲೂಕಿನ ಬನ್ನೂರು ಮಾದಿಗ ಸಮುದಾಯವರ ಸ್ಮಶಾನಕ್ಕೆ ಶವ ಸಾಗಿಸಲು ರಸ್ತೆ ನಿರ್ಮಿಸಲು ತಹಸೀಲ್ದಾರ್ ಸೇರಿದಂತೆ ಅಧಿಕಾರಿಗಳ ತಂಡ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಬನ್ನೂರಿನ ಸುಭಾಷ್ ನಗರದ ಮಾದಿಗ ಜನಾಂಗದವರಿಗೆ ಕಾವೇರಿ ನದಿ ತೀರದ ಬನ್ನೂರು ಹೋಬಳಿ ಗ್ರಾಮಾಂತರ ಸರ್ವೆ ನಂ.1023/2ರಲ್ಲಿ 16 ಗುಂಟೆ ಖರಾಬು ಜಮೀನನ್ನು ಸ್ಮಶಾನಕ್ಕಾಗಿ ನೀಡಲಾಗಿತ್ತು. ಆದರೆ ಜಮೀನಿನ ಮೂಲಕ ಸ್ಮಶಾನಕ್ಕೆ ಹೋಗಲು ರಸ್ತೆ ಸಂಪರ್ಕ ಇರಲಿಲ್ಲ. ರಸ್ತೆ ಸಂಪರ್ಕ ಕಲ್ಪಿಸಿಕೊಡುವಂತೆ ಸಿಎಂ, ಕಂದಾಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿ ಸೇರಿದಂತೆ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಇದನ್ನು ಖಂಡಿಸಿ ಬನ್ನೂರಿನ ಮಾದಿಗ ಸಮುದಾಯದವರು ಬನ್ನೂರಿನಲ್ಲಿ ಸಾಕಷ್ಟು ಬಾರಿ ಮನವಿ ಪ್ರತಿಭಟನೆ ನಡೆಸಿದ್ದರು. ಅಲ್ಲದೇ ಕಳೆದ ಏಳೆಂಟು ತಿಂಗಳ ಹಿಂದೆ ಬನ್ನೂರಿನ ಕಾವೇರಿ ಸರ್ಕಲ್‌ನಲ್ಲಿ ಶವ ಇಟ್ಟು ಪ್ರತಿಭಟನೆ ಕೈಗೊಂಡಿದ್ದರು. ಅಲ್ಲದೇ ಸರ್ಕಲ್‌ನಲ್ಲೇ ಶವ ಸಂಸ್ಕಾರಕ್ಕೂ ಮುಂದಾಗಿದ್ದರು. ಈ ವೇಳೆ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಸ್ಮಶಾನಕ್ಕೆ ರಸ್ತೆ ಕಲ್ಪಿಸುವ ಭರವಸೆ ನೀಡಿದ್ದರು. ಆದರೂ ರಸ್ತೆ ಸಂಪರ್ಕ ಕಲ್ಪಿಸಿರಲಿಲ್ಲ.

ಗುರುವಾರ ತಹಸೀಲ್ದಾರ್ ಸುರೇಶ್ ಆಚಾರ್ ಸೇರಿದಂತೆ ಅಧಿಕಾರಿಗಳ ತಂಡ ಸ್ಥಳಕ್ಕಾಗಮಿಸಿ ಸ್ಮಶಾನಕ್ಕೆ ತೆರಳಲು ರಸ್ತೆ ನಿರ್ಮಿಸಲು ಪರಿಶೀಲನೆ ನಡೆಸಿದರು. ಇದರಿಂದಾಗಿ ರಸ್ತೆ ನಿರ್ಮಿಸುವಂತೆ ಸುಮಾರು 50ರಿಂದ 60 ವರ್ಷಗಳ ಹೋರಾಟಕ್ಕೆ ಫಲ ದೊರೆದಂತಾಗಿದೆ ಎಂದು ಶಿವಣ್ಣ ಸಂತಸ ವ್ಯಕ್ತಪಡಿಸಿದರು.

ಇದೇ ವೇಳೆ ಸ್ಮಶಾನಕ್ಕೆ ತೆರಳಲು ರಸ್ತೆ ಕಲ್ಪಿಸಿದ ರಾಜ್ಯ ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ರಂಗೇಗೌಡ, ತಹಸೀಲ್ದಾರ್ ಸುರೇಶ್ ಆಚಾರ್, ಸರ್ವೆಯರ್ ಉಮೇಶ್, ಲೋಕೋಪಯೋಗಿ ಇಲಾಖೆಯ ಎಇಇ ಸತೀಶ್ ಚಂದ್ರ, ತಾಲೂಕಿನ ವಿವಿಧ ಸಂಘಟನೆಗಳು ಹಾಗೂ ಸಮುದಾಯದವರಿಗೆ ಧನ್ಯವಾದ ತಿಳಿಸಿದರು.

ಈ ವೇಳೆ ಸ್ಥಳದಲ್ಲಿ ಪುರಸಭೆ ಸದಸ್ಯ ಮೂರ್ತಿ, ವಕೀಲ ಶಿವಮೂರ್ತಿ, ಆರ್‌ಐ ಸಿದ್ದರಾಜು, ವಿಎ ಸೋಮಶೇಖರ್, ಬಸವರಾಜು, ಸುಹಾಸ್, ಚಿಕ್ಕಳಯ್ಯ, ಶಿವಣ್ಣ ಯಜಮಾನರಾದ ಗಿರಿಯಪ್ಪ, ಸ್ವಾಮಿ, ಮಾದೇವ, ಬಿ.ವಿ.ರಮೇಶ್, ಬಿ.ಎಸ್.ರವಿ, ಹನುಮಂತಯ್ಯ, ಕೃಷ್ಣ, ಕುಮಾರ, ವೆಂಕಟೇಶ್, ಜಮೀನಿನ ಮಾಲೀಕರಾದ ರವಿ, ಪವನ್ ಇನ್ನಿತರರಿದ್ದರು.



ಬನ್ನೂರಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲಿಸಿದರು. ಈ ವೇಳೆ ಮಾದಿಗ ಸಮುದಾಯದ ಮುಖಂಡರು ಹಾಜರಿದ್ದರು.

ಜಿ.ವಿ.ಸೀತಾರಾಂ ಗಡಿಪಾರಿಗೆ ಆಗ್ರಹ



ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಎಸ್.ರಾಮಸ್ವಾಮಿ ಮಾತನಾಡಿದರು.

ಬನ್ನೂರು, ಆ.7– ಒಕ್ಕಲಿಗರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂನನ್ನು ಕೂಡಲೇ ಗಡಿಪಾರು ಮಾಡಬೇಕು ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಎಸ್. ರಾಮಸ್ವಾಮಿ ಆಗ್ರಹಿಸಿದರು.

ಪಟ್ಟಣದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ಒಕ್ಕಲಿಗ ಸಮುದಾಯವನ್ನು ನಿಂದಿಸಿರುವ ಸೀತಾರಾಂ ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಗೌರವಾಧ್ಯಕ್ಷ ಸ್ವಾಮಿನಾಥಗೌಡ ಮಾತನಾಡಿ, ಕೋಟೆ ತಾಲೂಕಿನ ಯಾವುದೋ ಸರ್ಕಾರಿ ಜಮೀನಿನ ವಿಚಾರ ಮಾತನಾಡುವ ವೇಳೆ ಇಡೀ ಒಕ್ಕಲಿಗರ ಸಮುದಾಯವನ್ನೇ ಅವಾಚ್ಯ ಶಬ್ದಗಳಿಂದ ಸೀತಾರಾಂ ನಿಂದಿಸಿರುವುದು ಸರಿಯಲ್ಲ. ಹೀಗಾಗಿ ಕೂಡಲೇ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಆತನನ್ನು ಗಡಿಪಾರು ಮಾಡಬೇಕು ಎಂದರು.

ಪ್ರಧಾನ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಸತೀಶ್, ರಾಜು ಮಾತನಾಡಿದರು. ಸಂಘದ ಉಪಾಧ್ಯಕ್ಷ ಜಯರಾಮೇಗೌಡ, ಚಿಕ್ಕರೇವಣ್ಣ, ಡಾ.ಮಲ್ಲಿಕಾರ್ಜುನಾಸ್ವಾಮಿ, ಚನ್ನೇಗೌಡ, ರಾಜೇಶ್, ಕೃಷ್ಣೇಗೌಡ, ವೀರಭದ್ರ, ಲಕ್ಷ್ಮಣ ಸೇರಿದಂತೆ ಹಲವರಿದ್ದರು.

ಹೊಸೂರು ಡೇರಿಗೆ ಯದುಕುಮಾರ್ ಅಧ್ಯಕ್ಷ, ಪ್ರಸನ್ನ ಉಪಾಧ್ಯಕ್ಷ

ಚುಂಚನಕಟ್ಟೆ, ಆ.7– ಸಾಲಿಗ್ರಾಮ ತಾಲೂಕಿನ ಹೊಸೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಯದು ಕುಮಾರ್ ಮತ್ತು ಉಪಾಧ್ಯಕ್ಷರಾಗಿ ದಿಡ್ಡಹಳ್ಳಿ ಪ್ರಸನ್ನ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಸ್ವಾಮಿ ಹಾಗೂ ಉಪಾಧ್ಯಕ್ಷೆ ಪೂರ್ಣಿಮಾ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಯದು ಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಪ್ರಸನ್ನ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ರವಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಯದು ಕುಮಾರ್ ಮಾತನಾಡಿ, ಶಾಸಕ ಡಿ.ರವಿಶಂಕರ್ ಅವರ ಮಾರ್ಗದರ್ಶನದಲ್ಲಿ ಸಂಘದ ನೂತನ ಕಟ್ಟಡ ನಿರ್ಮಾಣ ಮಾಡಲು ಹಾಗೂ ಸಂಘದಲ್ಲಿ ಪಾರದರ್ಶಕವಾಗಿ ಆಡಳಿತ ನಡೆಸಲು ಪ್ರಯತ್ನಿಸಲಾಗುವುದು ಎಂದರು.

ಡೇರಿ ನಿರ್ದೇಶಕರಾದ ರಮೇಶ್, ರಂಗೇಗೌಡ, ಪರಶುರಾವ್, ಬುದ್ದಿಸಾಗರ, ಲಲಿತ, ಭಾರತಿ, ನಾಗರಾಜ್, ಸಂಘದ ಸಿಇಓ ಶಿವಶಂಕರ್, ಪರೀಕ್ಷಕ ಮಹಾದೇವ್ ಹಾಜರಿದ್ದರು. ನೂತನ ಅಧ್ಯಕ್ಷರನ್ನು ಕಾಂಗ್ರೆಸ್ ಮುಖಂಡರಾದ ವಕೀಲ ಪಣೀತ್, ಸಚಿನ್, ಅನಿಲ್ ಇತರರು ಅಭಿನಂದಿಸಿದರು.



ಹೊಸೂರು ಡೈರಿ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಅಭಿನಂದಿಸಿದರು.

ಗ್ರಾಪಂ ನೂತನ ಉಪಾಧ್ಯಕ್ಷೆಗೆ ಸನ್ಮಾನ



ಹುಣಸೂರು ತಾಲೂಕಿನ ಕರ್ಣಕುಪ್ಪೆ ಗ್ರಾಪಂ ನೂತನ ಉಪಾಧ್ಯಕ್ಷೆ ಮೀನಾಕ್ಷಿ ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಸನ್ಮಾನಿಸಿದರು. ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಕೆ.ಎಂ.ಪ್ರಸನ್ನ, ಜೆಡಿಎಸ್ ಮುಖಂಡ ಶ್ರೀಧರ್, ಗ್ರಾಪಂ ಅಧ್ಯಕ್ಷ ಪಾಪಣ್ಣ ಮತ್ತಿತರರಿದ್ದರು.

ಗುಣಮಟ್ಟದ ಹಾಲು ಸರಬರಾಜಿನಿಂದ ಹೆಚ್ಚು ಲಾಭ



ಮಲ್ಕುಂಡಿ, ಆ.7– ರೈತರು ಡೇರಿಗೆ ಗುಣಮಟ್ಟದ ಹಾಲು ಸರಬರಾಜು ಮಾಡುವುದರಿಂದ ಸಂಘ ಹೆಚ್ಚಿನ ಲಾಭ ಗಳಿಸಲು ಸಾಧ್ಯ ಎಂದು ತಾಪಂ ಮಾಜಿ ಸದಸ್ಯ ಎಸ್.ಬಸವರಾಜು ತಿಳಿಸಿದರು.

ಗ್ರಾಮದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ 2025–26ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹಾಲು ಉತ್ಪಾದಕರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಒಕ್ಕೂಟದಿಂದ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಅವುಗಳನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಮೈಮುಲ್ ವಿಸ್ತರಣಾಧಿಕಾರಿ ಶಿವಕುಮಾರ್ ಮಾತನಾಡಿ, ಸರ್ಕಾರ ರೈತರು ಹೈನುಗಾರಿಕೆ ಕೈಗೊಳ್ಳಲು ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದ್ದು, ಅವುಗಳನ್ನು ಬಳಸಿಕೊಳ್ಳಬೇಕು ಎಂದರು.

ಈ ವೇಳೆ ಹುರ ಪಿಎಸಿಎಸ್ ಉಪಾಧ್ಯಕ್ಷ ಎಂ.ಪುಟ್ಟಸ್ವಾಮಿ, ಸಂಘದ ಅಧ್ಯಕ್ಷ ಎಂ.ಸಿ.ಉಮೇಶ್, ಉಪಾಧ್ಯಕ್ಷೆ ಗೌರಮ್ಮ, ನಿರ್ದೇಶಕರಾದ ಮಹೇಶ್, ಮಹದೇವಪ್ಪ, ಮಹದೇವಸ್ವಾಮಿ, ಪುಟ್ಟಸ್ವಾಮಿ, ಮಹದೇವಗೌಡ, ತುಳಸಮ್ಮ, ಸುವರ್ಣಮ್ಮ, ಗೌರಮ್ಮ, ನಿಂಗಣ್ಣ, ಪಿಎಸಿಎಸ್ ಅಧ್ಯಕ್ಷ ಸಣ್ಣಮಾದಪ್ಪ, ಗುರುಮಲ್ಲಪ್ಪ, ಸಿಇಓ ಮುತ್ತುರಾಜ್, ಸಿಬ್ಬಂದಿಗಳಾದ ನಂದೀಶ್ ಸೇರಿದಂತೆ ಇತರರಿದ್ದರು.

1.85 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು/ಮಲ್ಕುಂಡಿ, ಆ.7– ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಸರ್ಕಾರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವಿಲ್ಲ ಎಂಬ ವಿಪಕ್ಷಗಳ ಅಪ ಪ್ರಚಾರಕ್ಕೆ ಮತದಾರರು ಕಿವಿಗೊಡಬೇಡಿ. ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಅನುದಾನವಿದೆ ಎಂಬುದಕ್ಕೆ ನಂಜನಗೂಡು ಕ್ಷೇತ್ರದಲ್ಲಿ ನಿರಂತರವಾಗಿ ಚಾಲನೆಗೊಳ್ಳುತ್ತಿರುವ ಅಭಿ ವೃದ್ಧಿ ಕಾಮಗಾರಿಗಳೇ ಸಾಕ್ಷಿ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಕಾಡಂಚಿನ ಗ್ರಾಮಗಳಾದ ಹೆಡಿಯಾಲ, ಮಹದೇವನಗರ, ಮಡುವಿನಹಳ್ಳಿ, ಬಂಕಹಳ್ಳಿ ಗ್ರಾಮಗಳಲ್ಲಿ 1.85 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಿಮ್ಮೆಲ್ಲರ ಆಶೀರ್ವಾದದಿಂದ ನಾನು ಕ್ಷೇತ್ರದ ಶಾಸಕನಾಗಿದ್ದೇನೆ. ಕ್ಷೇತ್ರದ ಜನರಲ್ಲಿ ನನ್ನ ತಂದೆ, ತಾಯಿ ಕಾಣುತ್ತಿದ್ದೇನೆ. ನನಗೆ ಮತ ನೀಡಿದ ಕ್ಷೇತ್ರದ ಮತದಾರರು ಮುಖ್ಯ. ಆದ್ದರಿಂದ ನನ್ನ ಉಸಿರಿರುವ ತನಕ ಪ್ರಾಮಾಣಿಕವಾಗಿ ನಿಮ್ಮ ಸೇವೆ ಮಾಡುತ್ತೇನೆ. ಸಿಎಂ ಸಿದ್ದರಾಮಯ್ಯ ಅವರು ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ನಮ್ಮ ಸರ್ಕಾರ ಅಭಿವೃದ್ಧಿ ಕೆಲಸಗಳಿಂದ ಹಿಂದೆ ಬಿದ್ದಿಲ್ಲ. ನಂಜನಗೂಡು ಕ್ಷೇತ್ರಕ್ಕೆ ಕಳೆದ 2 ವರ್ಷಗಳಲ್ಲಿ 450 ಕೋಟಿಗಿಂತಲೂ ಹೆಚ್ಚು ಅನುದಾನ ಬಂದಿದೆ. ನಾವು ಕಳೆದ 5 ದಿನ ಗಳಿಂದ 12.71 ಕೋಟಿ ವೆಚ್ಚದ ಸಾಮಾನ್ಯ ವರ್ಗದ ಬೀದಿಗಳ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಹಾಗೂ ಎಸ್‌ಇಪಿ ಯೋಜನೆಯಡಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇವೆ. ಸರ್ಕಾರದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜೊತೆ ಜೊತೆಗೆ ಅಭಿವೃದ್ಧಿ ಕೆಲಸಗಳಿಗೂ ಸಹ ಸಾಕಷ್ಟು ಅನುದಾನವಿದೆ ಎಂಬುದಕ್ಕೆ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳೇ ಸಾಕ್ಷಿ ಎಂದರು.

ತಾಲೂಕಿನ ಬಳ್ಳೂರುಹುಂಡಿ ಮತ್ತು ಹೊಸವೀಡು ಹುಂಡಿ ಗ್ರಾಮಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸ್ಮಾರ್ಟ್ ಕ್ಲಾಸ್ ತರಗತಿ ಉದ್ಘಾಟಿಸಲಾಗಿದೆ. ಎಸ್‌ಇಪಿ ಯೋಜನೆಯಡಿ ಬುಡಕಟ್ಟು ಜನರು ವಾಸಿ ಸುವ ತಾಲೂಕಿನ ಮಹದೇವನಗರ ಗ್ರಾಮ ದಲ್ಲಿ 50 ಲಕ್ಷ, ಬಂಕಹಳ್ಳಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ, ಮುಖ್ಯ ಮಂತ್ರಿಗಳ ವಿಶೇಷ ಅನುದಾನದ ಅಡಿ ತಾಲೂಕಿನ ಮಡುವಿನ ಹಳ್ಳಿ ಗ್ರಾಮದಲ್ಲಿ 20 ಲಕ್ಷ, ಹೆಡಿಯಾಲ ಗ್ರಾಮದಲ್ಲಿ 20 ಲಕ್ಷ ವೆಚ್ಚ ದಲ್ಲಿ ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಹ್ಯಾಪಿಟೇಡ್ ಇಲಾಖೆ ಅನುದಾನದ ಅಡಿ ತಾಲೂಕಿನ ಹೆಡಿಯಾಲ ಮತ್ತು ಬಂಕಹಳ್ಳಿ ಗ್ರಾಮದಲ್ಲಿ ತಲಾ 25 ಲಕ್ಷ ವೆಚ್ಚದಲ್ಲಿ ಮುಸ್ಲಿಂ ಜನರು ವಾಸಿಸುವ ಬೀದಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಸೇರಿದಂತೆ ಒಟ್ಟು 1.85 ಕೋಟಿ ವೆಚ್ಚದ ಕಾಮಗಾರಿಗಳಿಗೆ ಇಂದು ಚಾಲನೆ ನೀಡಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮುಖಂಡರಾದ ಎಂ.ಎಸ್. ನಾಗೇಶ್, ಸತೀಶ್, ಗೋವಿಂದರಾಜು, ಮಹದೇವಪ್ಪ, ಸುಬ್ರಹ್ಮಣ್ಯ, ಸುರೇಶ್, ಶಿವನಾಗಪ್ಪ, ಮಹದೇವು, ನಾಗರಾಜೇ ಗೌಡ, ಮಹೇಶ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸತೀಶ, ಕೆಆರ್‌ಐಡಿಎಲ್ ಸಂಸ್ಥೆ ಎಇ ಶರಣ್, ಪುರುಷೋತ್ತಮ್, ಪಿಎಸಿಎಸ್ ಅಧ್ಯಕ್ಷ ಮಂಜುನಾಥ್, ಎಸ್‌ಡಿ ಎಂಸಿ ಅಧ್ಯಕ್ಷ ಸತೀಶ್, ಹ್ಯಾಪಿಟೇಟ್ ಇಲಾಖೆ ಎಇಇ ಪವನ್, ಎಇ ಜೀವನ್, ಗುತ್ತಿಗೆದಾರ ಜಿ.ಎ.ವೆಂಕಟೇಶ್, ಪಿಡಿಓ ಕರಿಯಪ್ಪ, ಕಂದಾಯ ಇಲಾಖೆ ರಾಜಸ್ವ ನಿರೀಕ್ಷಕ ಪ್ರಕಾಶ್ ಸೇರಿದಂತೆ ಹಲವರಿದ್ದರು.



ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಹುಣಸೂರಲ್ಲಿ ಸ್ನೇಹ ದಿನಾಚರಣೆ



ಹುಣಸೂರು ರೋಟರಿಯಲ್ಲಿ ಸ್ನೇಹ ದಿನಾಚರಣೆ ನಡೆಯಿತು.

ಹುಣಸೂರು, ಆ.7– ಸ್ನೇಹಕ್ಕಿಂತ ಮಿಗಿಲಾದದು ಈ ಜಗತ್ತಿನಲ್ಲಿ ಯಾವುದು ಇಲ್ಲ ಎಂದು ರೊ.ಜಿ.ವಿ. ಶ್ರೀನಾಥ್ ತಿಳಿಸಿದರು.

ನಗರದ ರೋಟರಿ ಭವನದಲ್ಲಿ ಹಮ್ಮಿಕೊಂಡಿದ್ದ ಸ್ನೇಹ ದಿನಾಚರಣೆಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಸಂಸ್ಥೆ ರೋಟರಿ ಸ್ನೇಹ, ವಿಶ್ವಾಸ, ಪ್ರೀತಿ, ನಿಸ್ವಾರ್ಥ ಸೇವೆಗೆ ಹೆಸರುವಾಸಿಯಾಗಿದ್ದು, ಭಾವನೆಗಳ ತವರು ರೋಟರಿ ಎಂದರು.

ರೋಟರಿ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಸ್ನೇಹದಿಂದ ಶುರುವಾಗುವ ರೋಟರಿ ಹಸ್ತಲಾಘವ. ಚಿರಕಾಲ ಸ್ನೇಹ ಸೇತುವೆಯಾಗಿ ಉಳಿಯಲಿದೆ. ಆದ್ದರಿಂದಲೇ ರೋಟರಿ ಕ್ಲಬ್ ಮಾದರಿಯಾಗಿ, ವಿಶ್ವದೆತ್ತರಕ್ಕೆ ಬೆಳೆಯಲು ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ರೋಟರಿ ಹಿರಿಯ ಸದಸ್ಯರಾದ ಆನಂದ್ ಆರ್.ರಾಜಶೇಖರ್, ರೊ.ಬಸವರಾಜು, ರೊ.ಚಿಲ್ಕುಂದ ಮಹೇಶ್, ಕಾರ್ಯದರ್ಶಿ ಧರ್ಮಾಪುರ ಶ್ಯಾಮಣ್ಣ ಹಾಗೂ ಶ್ರೀನಿವಾಸ್ ಇದ್ದರು.

ನೇಮಕ



ತಿ.ನರಸೀಪುರ, ಆ.7– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಂಘಟಿತ ಕಾರ್ಮಿಕರ ವಿಭಾಗದ ಮೈಸೂರು ಜಿಲ್ಲಾಧ್ಯಕ್ಷರಾಗಿ ತಾಲೂಕಿನ ತಲಕಾಡು ಹೋಬಳಿ ಮೇದಿನಿ ಗ್ರಾಮದ ಎಂ.ಎನ್.ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಡಾ.ಉದಿತ್ ರಾಜ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ ವಿಜಯ್ ಕುಮಾರ್ ಸೂಚನೆಯಂತೆ ನೇಮಕ ಮಾಡಲಾಗಿದೆ ಎಂದು ಅಸಂಘಟಿತ ಕಾರ್ಮಿಕರ ವಿಭಾಗದ ರಾಜ್ಯಾಧ್ಯಕ್ಷ ಜಿ.ಎಸ್.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಬೊಂಬೆಗಳಲ್ಲಿ ಮೈಸೂರು ದಸರಾ ವೈಭವ ಅನಾವರಣ

●ಹನುಮನ ಸಾಹಸಗಾಥೆ ಸೇರಿದಂತೆ ವೈವಿಧ್ಯಮಯ ಸನ್ನಿವೇಶ ಬೊಂಬೆಗಳ ಕಲಾಲೋಕದಲ್ಲಿ ಅನಾವರಣ ●ರಾಮ್‌ಸನ್ಸ್ ಬೊಂಬೆ ಮನೆಯ ದಸರೆಯ ಬೊಂಬೆ ಪ್ರದರ್ಶನದ 21ನೇ ಆವೃತ್ತಿಗೆ ಚಾಲನೆ



ಮೈಸೂರಿನ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಗುರುವಾರ ದಸರಾ ಬೊಂಬೆ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು. ಸುರಪುರದ ರಾಜವಂಶಸ್ಥ ರಾಜಾ ಕೃಷ್ಣಪ್ಪ ನಾಯಕ, ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ನ ಸಂಸ್ಥಾಪಕ ಟ್ರಸ್ಟಿ ಡಾ.ಹೆಲೆನ್ ಫಿಲಾನ್, ಸಹ ಸಂಸ್ಥಾಪಕ ಸ್ಟೀಫನ್ ಬ್ಲೋಚ್ ಸಲೋಜ್, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ರಘು ಧರ್ಮೇಂದ್ರ ಸೇರಿದಂತೆ ಮತ್ತಿತರ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.



ಹನುಮನೊಂದಿಗೆ ರಾಮ ಮತ್ತು ಲಕ್ಷ್ಮಣರು ಸಂಭಾಷಣೆ ನಡೆಸುತ್ತಿರುವ ದೃಶ್ಯವನ್ನು ಸಲಾಕೆ ಬೊಂಬೆಯಾಟದ ಮೂಲಕ ಪ್ರದರ್ಶಿಸುತ್ತಿರುವುದು.

ಮೈಸೂರು,ಆ.7(ಪಿಎಂ)– ದಸರಾ ಉತ್ಸವದ ಪ್ರಯುಕ್ತ ಮೈಸೂರು ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಖಾಸಗಿ ದರ್ಬಾರ್, ಶಮೀ ವೃಕ್ಷ ಪೂಜೆ ಸೇರಿದಂತೆ ಹಲವು ವೈಭವದ ಪರಂಪರೆಯ ಚಿತ್ರಣ ಬೊಂಬೆಗಳ ಮೂಲಕ ಅನಾವರಣಗೊಂಡಿದೆ

ಜೊತೆಗೆ ಮೈಸೂರು ಶೈಲಿಯ ಚಿತ್ರ ಪಟಗಳ ಆಧಾರದಲ್ಲಿ ಗಾಯತ್ರಿ, ಮೀನಾಕ್ಷಿ, ಕಾಮಾಕ್ಷಿ, ಇಂದ್ರಾಕ್ಷಿ ಮತ್ತು ವಿಶಾಲಾಕ್ಷಿಯರ ಬೊಂಬೆಗಳು ಇಲ್ಲಿದ್ದು, ಭಕ್ತಿಭಾವ ಮೂಡಿಸುತ್ತಿವೆ. ಅಲ್ಲದೆ, ಈ ವರ್ಷದ ವಿಶೇಷ ಅಂಕಣದಲ್ಲಿ ಹನುಮನ ಸಾಹಸ ಗಾಥೆ ಮೂಡಿಬಂದಿದೆ. ಮಾತ್ರವಲ್ಲದೆ, ನೂರಾರು ಬಗೆಯ ಬೊಂಬೆಗಳು ಅಸಂಖ್ಯಾತ ಚಿತ್ರಾವಳಿಯನ್ನು ಇಲ್ಲಿ ಕಟ್ಟಿಕೊಟ್ಟಿವೆ. ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ (ಆರ್‌ಕೆಪಿ) ರಾಮ್‌ಸನ್ಸ್ ಬೊಂಬೆ ಮನೆಯ ಕಣ್ಣು ಕೋರೈಸುವ ದೃಶ್ಯಾವಳಿ ಇದು.

ಮೈಸೂರಿನ ನಜರ್‌ಬಾದಿನ ಮುಖ್ಯ ರಸ್ತೆಯಲ್ಲಿರುವ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಇಂತಹ ಕಣ್ಮನ ಸೆಳೆಯುವ ಲೋಕವೀಗ ಅನಾವರಣಗೊಂಡಿದೆ. ರಾಮ್‌ಸನ್ಸ್ ಬೊಂಬೆ ಮನೆಯ ದಸರೆಯ ಬೊಂಬೆ ಪ್ರದರ್ಶನದ 21ನೇ ಆವೃತ್ತಿಯ ವೈಶಿಷ್ಟ್ಯವಿದು. ಸಾವಿರಾರು ಬೊಂಬೆಗಳು, ಬೊಂಬೆ ಪರಿಕರಗಳು ಈ ಬಾರಿಯ ಪ್ರದರ್ಶನದಲ್ಲಿ ಬೊಂಬೆ ಪ್ರಿಯರ ಮನಸೂರೆಗೊಳ್ಳಲು ಸಜ್ಜಾಗಿವೆ.

ಇಲ್ಲಿ ಗುರುವಾರ ನಡೆದ ಉದ್ಘಾಟನಾ ಸಮಾರಂಭದಲ್ಲಿ ಬಲವಂತ ಬಹರಿ ಬಹದ್ದೂರ್ ಸಂಸ್ಥಾನದ ಸುರಪುರದ ರಾಜವಂಶಸ್ಥ ರಾಜಾ ಕೃಷ್ಣಪ್ಪ ನಾಯಕ ಅವರು ಬೊಂಬೆ ಮನೆಯ 21ನೇ ವರ್ಷದ ಪ್ರದರ್ಶನಕ್ಕೆ ಚಾಲನೆ ನೀಡಿದರು. ಇದೇ ವೇಳೆ ವಿಶೇಷ ಅಂಕಣಗಳ ಉದ್ಘಾಟನೆಯನ್ನು ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ನ ಸಂಸ್ಥಾಪಕ ಟ್ರಸ್ಟಿ ಡಾ.ಹೆಲೆನ್ ಫಿಲಾನ್, ಸಹ ಸಂಸ್ಥಾಪಕ ಸ್ಟೀಫನ್ ಬ್ಲೋಚ್ ಸಲೋಜ್ ನೆರವೇರಿಸಿದರು.

ಮೈಸೂರು ದಸರಾದಲ್ಲಿ ಮಹಾರಾಣಿಯರು ಮಹಾರಾಜರ ಪಾದಪೂಜೆ ಮಾಡುವುದು, ಮಹಾರಾಜರು ಸರಸ್ವತಿ ಪೂಜೆ, ಆಯುಧ ಪೂಜೆ, ವಾಹನ ಪೂಜೆ ಮತ್ತು ಶಮೀ ವೃಕ್ಷ ಪೂಜೆ ಮಾಡುವ ದೃಶ್ಯಗಳನ್ನು ಕಟ್ಟಿಕೊಡುವಂತೆ ತಯಾರಿಸಿರುವ ಬೊಂಬೆಗಳು ಇಲ್ಲಿ ಗಮನ ಸೆಳೆಯುತ್ತಿವೆ. ಕಡಲೂರಿನ ಕಲಾವಿದರ ಕೈಚಳಕದಲ್ಲಿ ಈ ಬೊಂಬೆಗಳು ಮೂಡಿಬಂದಿವೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕುರ್ಚಿಯಲ್ಲಿ ಆಸೀನರಾಗಿರುವ ಬೊಂಬೆ ಇಲ್ಲಿದ್ದು, ಇದನ್ನು ಕೊಲ್ಲಾಪುರದ ಕಲಾವಿದರು ರಚಿಸಿದ್ದಾರೆ. ಅಲ್ಲದೆ, ನಾಲ್ವಡಿಯವರ ಬೊಂಬೆಯ ಸುತ್ತಲು ಜೋಡಿಸಲ್ಪಟ್ಟಿರುವ ಆಸ್ಥಾನಿಕರು ಹಾಗೂ ರಾಜಬಂಧುಗಳ ಕಾಷ್ಠಬೊಂಬೆಗಳನ್ನು ಜೈಪುರದ ಕಲಾವಿದರು ಸಿದ್ಧಪಡಿಸಿದ್ದಾಗಿವೆ.

ಹನುಮನ ಸಾಹಸಗಾಥೆ: ಹನೂಮದ್ ವಿಲಾಸ ಈ ಬಾರಿಯ ವಿಶೇಷ ಅಂಕಣವಾಗಿದ್ದು, ಇಲ್ಲಿ ಹನುಮಂತನ ಲೀಲೆಗಳು ಬೊಂಬೆಗಳಲ್ಲಿ ಅನಾವರಣಗೊಂಡಿವೆ. ಹನುಮನ ಬಾಲಲೀಲೆಗಳ ಕಥೆಗಳಿಂದ ಹಿಡಿದು ರಾಮನ ಭೇಟಿ, ಸುಗ್ರೀವ ಸಖ್ಯ, ಸೀತಾ ಮಾತೆ ಭೇಟಿ, ಲಂಕಾದ ದಹನ, ಸಮುದ್ರಲಂಘನ, ಸೇತು ಬಂಧನ, ರಾವಣ ಸಂಹಾರ, ರಾಮನ ಪಟ್ಟಾಭಿಷೇಕದಲ್ಲಿ ಹನುಮನ ಪಾತ್ರ ವಹಿಸಿರುವ ಸನ್ನಿವೇಶಗಳನ್ನು ಬೊಂಬೆಗಳ ಮೂಲಕ ಇಲ್ಲಿ ಕಟ್ಟಿಕೊಡಲಾಗಿದೆ.

ವಿವಿಧರಾಜ್ಯಗಳ ಬೊಂಬೆಗಳು: ಕರ್ನಾಟಕ (ಮೈಸೂರು, ಚನ್ನಪಟ್ಟಣ, ಕಿನ್ನಾಳ), ತಮಿಳುನಾಡು (ತಂಜಾವೂರು, ಮಧುರೈ, ಕಡಲೂರು, ಪುದುಕೋಟ್ಟೈ, ಕಾಂಚೀಪುರಂ), ಆಂಧ್ರಪ್ರದೇಶ (ಕೊಂಡಪಲ್ಲಿ, ಎಟ್ಟಿಕೊಪ್ಪ), ತೆಲಂಗಾಣ (ನಿರ್ಮಲ್), ಪುದುಚ್ಚೇರಿ, ರಾಜಸ್ತಾನ (ಜೈಪುರ್, ಜೋಧಪುರ್), ಗುಜರಾತ್, ಉತ್ತರಪ್ರದೇಶ (ಅಲೀಗಢ್, ವಾರಾಣಸಿ, ಸಾರನಾಥ್), ಪಶ್ಚಿಮ್ ಬಂಗ (ಕೃಷ್ಣಾ ನಗರ್, ಬಾಂಕೂಡಾ, ಕೋಲ್ಕಾತಾ), ಮಹಾರಾಷ್ಟ್ರ (ಕೋಲ್ಹಾಪುರ), ಒಡಿಶಾ ಮತ್ತು ಕೇರಳ ಸೇರಿದಂತೆ 12 ರಾಜ್ಯಗಳಿಂದ ಸಾವಿರಾರು ಗೊಂಬೆಗಳು, ಗೊಂಬೆ ಪರಿಕರಗಳು ಈ ಬಾರಿಯ ಪ್ರದರ್ಶನದಲ್ಲಿ ಕಣ್ಮನ ಸೆಳೆಯುತ್ತಿವೆ. 21 ವರ್ಷಗಳ ಹಿಂದೆ ನಗರದ ರಾಮ್‌ಸನ್ಸ್ ಕಲಾ ಪ್ರತಿಷ್ಠಾನವು ದಸರೆಯ ಸಂದರ್ಭದಲ್ಲಿ 'ಬೊಂಬೆ ಮನೆ' ಪ್ರದರ್ಶನವನ್ನು ಮೊದಲ ಬಾರಿ ಆಯೋಜಿಸಿತು. ವರ್ಷದಿಂದ ವರ್ಷಕ್ಕೆ ಆ ಪ್ರದರ್ಶನವು ಹಿರಿದಾಗುತ್ತಾ ಇಂದು ನಾಲ್ಕು ಮಹಡಿಗಳಲ್ಲಿ ಹರಡಿದೆ.

ಇದೇ ಸಂದರ್ಭದಲ್ಲಿ ಮೈಸೂರಿನ ಬೊಂಬೆ ರಂಗಮಂದಿರದ ಶ್ರೀಕಾಂತ್‌ಶರ್ಮ ನೇತೃತ್ವದಲ್ಲಿ ಸಲಾಕೆ ಬೊಂಬೆಯಾಟದ ಮೂಲಕ ರಾಮಾಯಣದ ಕೆಲ ಸನ್ನಿವೇಶಗಳ ಪ್ರದರ್ಶನ ನೀಡಲಾಯಿತು. ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪ್ರತಿಷ್ಠಾನದ ಕಲಾ ಇತಿಹಾಸಕಾರ ಹಾಗೂ ವಿನ್ಯಾಸಕ ರಘು ಧರ್ಮೇಂದ್ರ, 21ನೇ ವರ್ಷದ ಪ್ರದರ್ಶನಕ್ಕೆ ಇಂದು ಚಾಲನೆ ದೊರೆತಿದೆ. ಪ್ರತಿವರ್ಷ ವಿಶೇಷ ಅಂಕಣ ಮಾಡುತ್ತೇವೆ. ಈ ಬಾರಿಯ ವಿಶೇಷ ಅಂಕಣದಲ್ಲಿ ಹನುಮನ ಲೀಲೆಗಳ ಅನಾವರಣಗೊಳಿಸಲಾಗಿದೆ. ಮೂರು ಅಂಕಗಳಲ್ಲಿ ಹನುಮ ಸಾಹಸಗಾಥೆ ಕಟ್ಟಿಕೊಡಲಾಗಿದೆ. ವಿಶೇಷ ಅಂಕಣದಲ್ಲಿರುವ ಬೊಂಬೆಗಳ ಹೊರತಾಗಿ ಉಳಿದ ಬೊಂಬೆಗಳು ಮಾರಾಟಕ್ಕೆ ಲಭ್ಯವಿವೆ ಎಂದು ತಿಳಿಸಿದರು.

ವರ್ಷಪೂರ್ತಿ ಪ್ರದರ್ಶನ ಇರಲಿದ್ದು, ಬೆಳಗ್ಗೆ 10ರಿಂದ ರಾತ್ರಿ 7ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮೈಸೂರು ನಜರ್‌ಬಾದ್‌ನಲ್ಲಿ ಡ್ರಗ್ಸ್ ಮಾರಾಟ: ಒಬ್ಬನ ಬಂಧನ

65 ಗ್ರಾಂ ಎಂಡಿಎಂಎ ಮಾದಕ ವಸ್ತು ವಶಕ್ಕೆ

ಮೈಸೂರು, ಆ.7(ಬಿಎಲ್‌ಯು)– ಮೈಸೂರು ನಜರ್‌ಬಾದ್‌ನ ಮನೆಯೊಂದರಲ್ಲಿ ಎಂಡಿಎಂಎ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ನಜರ್‌ಬಾದ್‌ನ ಸೋಯಮ್ ಜೈನ್ ಬಂಧಿತ ಆರೋಪಿಯಾಗಿದ್ದು, ಬಬಿಲ್ ಎಂಬಾತ ಪರಾರಿಯಾಗಿದ್ದಾನೆ.

ನಜರ್‌ಬಾದ್‌ನ ಮನೆಯೊಂದರಲ್ಲಿ ಡ್ರಗ್ಸ್ ಮಾರಾಟವಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ನಜರ್‌ಬಾದ್ ಪೊಲೀಸರು ಆ ಮನೆಯ ಮೇಲೆ ದಾಳಿ ಮಾಡಿದ್ದರು. ಆ ವೇಳೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಸೋಯಮ್ ಜೈನ್ ಸೆರೆ ಸಿಕ್ಕರೆ, ಅಲ್ಲಿದ್ದ ಬಬಿಲ್ ಪರಾರಿಯಾಗಿದ್ದಾನೆ.

ಪೊಲೀಸರು ಆರೋಪಿಯಿಂದ 65 ಗ್ರಾಂ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಂಡಿದ್ದು, ಪರಾರಿಯಾಗಿರುವ ಬಬಿಲ್‌ಗಾಗಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಸಂಸದ ಡಾ. ಸುಧಾಕರ್, ಇತರರ ಹೆಸರು ಬರೆದಿಟ್ಟು ಕಾರು ಚಾಲಕ ಆತ್ಮಹತ್ಯೆ

●ಕೆಲಸ ಕೊಡಿಸುವುದಾಗಿ 25 ಲಕ್ಷ ಪಡೆದು ವಂಚಿಸಿದ ಆರೋಪ
●ಪತ್ನಿ ದೂರು ಆಧರಿಸಿ ಸುಧಾಕರ್ ಸೇರಿ ಹಲವರ ವಿರುದ್ಧ ಕೇಸ್

ಚಿಕ್ಕಬಳ್ಳಾಪುರ, ಆ.7–ಬಿಜೆಪಿ ಸಂಸದ ಸುಧಾಕರ್ ಹೆಸರನ್ನು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿ, ಜಿಲ್ಲಾ ಪಂಚಾಯತಿ ಸಿಇಓ ಕಾರಿಗೆ ಗುತ್ತಿಗೆ ಆಧಾರದ ಚಾಲಕನಾಗಿದ್ದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಸಂಬಂಧ ಮೃತನ ಪತ್ನಿ ನೀಡಿದ ದೂರಿನ ಮೇರೆಗೆ ಸಂಸದ ಡಾ.ಕೆ.ಸುಧಾಕರ್, ಮತ್ತಿತರರ ವಿರುದ್ಧ ಚಿಕ್ಕಮಗಳೂರು ಗ್ರಾಮಾಂತರ ಠಾಣೆಯಲ್ಲಿ ಆತ್ಮಹತ್ಯೆಗೆ ಪ್ರಚೋದನೆ, ವಂಚನೆ ಹಾಗೂ ಅಟ್ರಾಸಿಟಿ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ.



ಸುಧಾಕರ್

ಚಿಕ್ಕಬಳ್ಳಾಪುರದ ಬಾಪೂಜಿನಗರದ ನಿವಾಸಿ ಬಾಬು (32) ಇಂದು ಬೆಳಿಗ್ಗೆ ಜಿಲ್ಲಾ ಪಂಚಾಯತ್ ಸಭಾಂಗಣದ ಪಕ್ಕದ ಮರದಡಿಯಲ್ಲೇ ಸರ್ಕಾರಿ ಕಾರು ನಿಲ್ಲಿಸಿ ಕಾರಿನ ಮೇಲೆ ಹತ್ತಿ ಹೊಂಗೆ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ಕಾರು ಚಾಲಕನ ಸರ್ಕಾರಿ ಕಾರಿನಲ್ಲಿ ಡೆತ್‌ನೋಟ್ ಪತ್ತೆಯಾಗಿದ್ದು, ಅದರ ಮೊದಲ ಪುಟದ ಮೊದಲ ಸಾಲಿನಲ್ಲೇ ನನ್ನ ಸಾವಿಗೆ ಡಾ.ಕೆ.ಸುಧಾಕರ್, ನಾಗೇಶ್, ಜಿಲ್ಲಾ ಪಂಚಾಯತಿ ಲೆಕ್ಕ ಪರಿಶೋಧಕ ವಿಭಾಗದ ಎಸ್.ಡಿ.ಮಂಜುನಾಥ್ ಕಾರಣ. ಸುಧಾಕರ್‌ಗೆ ಹೇಳಿ ಸರ್ಕಾರಿ ಕೆಲಸ ಕೊಡಿಸುವುದಾಗಿ ನಾಗೇಶ್ 25 ಲಕ್ಷ ರೂ. ಹಣ ಪಡೆದುಕೊಂಡಿದ್ದಾನೆ. ಆದರೆ ನನಗೆ ಕೆಲಸವೂ ಸಿಕ್ಕಿಲ್ಲ. ಹಣವು ಸಿಕ್ಕಿಲ್ಲ ಎಂದು ಬರೆಯಲಾಗಿದೆ. ಕಾರು ಚಾಲಕ ಬಾಬು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಡೆತ್‌ನೋಟ್ ಫೋಟೋವನ್ನು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಸಿಬ್ಬಂದಿಗೆ ಕಳುಹಿಸಿದ್ದಾರೆ. ಅದನ್ನು ನೋಡಿ ಅವರು ಕಚೇರಿ ಬಳಿ ಆಗಮಿಸುವಷ್ಟರಲ್ಲೇ ಬಾಬು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಚಾರ ತಿಳಿದು ಸ್ಥಳಕ್ಕೆ ಆಗಮಿಸಿದ ಚಿಕ್ಕಬಳ್ಳಾಪುರ ಎಸ್‌ಪಿ ಕುಶಾಲ್ ಚೌಕ್ಸಿ ಸೇರಿದಂತೆ ಗ್ರಾಮಾಂತರ ಪೊಲೀಸರು ತನಿಖೆ ನಡೆಸಿದ್ದಾರೆ.ನಂತರ ಮೃತನ ಪತ್ನಿ ನೀಡಿದ ದೂರಿನ ಮೇರೆಗೆ ಸಂಸದ ಡಾ. ಸುಧಾಕರ್, ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಾಂಗ್ರೆಸ್ ಪ್ರತಿಭಟನೆ: ಘಟನೆ ನಡೆದ ಬೆನ್ನಲ್ಲೇ ಸಕ್ರಿಯವಾಗಿರುವ ಕಾಂಗ್ರೆಸ್ ಮುಖಂಡರು, ಚಿಕ್ಕಬಳ್ಳಾಪುರ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಅಮಾಯಕನ ಸಾವಿಗೆ ಕಾರಣರಾಗಿರುವ ಸಂಸದ ಡಾ. ಸುಧಾಕರ್ ಹಾಗೂ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿರುವ ನಾಗೇಶ್ ಹಾಗೂ ಮಂಜುನಾಥ್ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> ಬಾಬು ಎಂಬ ವ್ಯಕ್ತಿ ನನಗೆ ಗೊತ್ತಿಲ್ಲ. ಆತನ ಮುಖವನ್ನೇ ನೋಡಿಲ್ಲ. ಈ ವ್ಯಕ್ತಿ ಯಾಕೆ ನನ್ನ ಹೆಸರು ಉಲ್ಲೇಖ ಮಾಡಿದ್ದಾರೋ ಗೊತ್ತಿಲ್ಲ. ಬಾಬು ಎನ್ನುವ ವ್ಯಕ್ತಿ ಚಿಕ್ಕಬಳ್ಳಾಪುರ ನಿವಾಸಿ ಅಂತ ಗೊತ್ತಾಗಿದೆ. ಆತ್ಮಹತ್ಯೆಗೆ ಶರಣಾಗಿರುವುದು ಜಿಲ್ಲಾ ಪಂಚಾಯತ್ ಆವರಣದಲ್ಲಿ. ಮೊದಲು ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳುತ್ತೇನೆ. ಈ ಸಾವು ನನಗೂ ದುಃಖ ತಂದಿದೆ. ನಾನು ಸಚಿವನಾಗಿದ್ದೇನೆ, ಶಾಸಕ ಆಗಿದ್ದೇನೆ. ಈ ಸಮಯದಲ್ಲಿ ಹಲವರಿಗೆ ಕೆಲಸ ಕೊಡಿಸಿದ್ದೇನೆ. ಎಲ್ಲರ ಪರಿಚಯ ನನಗಿಲ್ಲ. ಈ ವ್ಯಕ್ತಿ ಯಾರೂ ಅಂತ ಗೊತ್ತಿಲ್ಲ. ಘಟನೆಯ ಹಿಂದೆ ಶಾಸಕರು, ಉಸ್ತುವಾರಿ ಸಚಿವರ ರಾಜಕೀಯ ಇದೆ. ಯಾರೇ ತಪ್ಪಿತಸ್ಥರಾಗಿದ್ದರೂ ಉಗ್ರ ಶಿಕ್ಷೆಯಾಗಲಿ. ಕಾನೂನು ಕ್ರಮ ಏನೇ ಇರಲಿ, ತನಿಖೆ ಪಾರದರ್ಶಕವಾಗಿರಲಿ.
>
> - ಡಾ. ಸುಧಾಕರ್, ಚಿಕ್ಕಬಳ್ಳಾಪುರ ಸಂಸದ

ಮೈಸೂರು ಜಿಲ್ಲೆಯಲ್ಲಿ 152 ಬಾಲಕಾರ್ಮಿಕರ ರಕ್ಷಣೆ; 15 ಮಂದಿ ವಿರುದ್ಧ ಎಫ್‌ಐಆರ್

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಅವಿರತ ಪ್ರಯತ್ನ

● ಮೋಹನ್ ಕಾಯಕ

ಮೈಸೂರು, ಆ.7– ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಅಕ್ರಮವಾಗಿ ಬಾಲಕಾರ್ಮಿಕರನ್ನು ಬಳಸಿಕೊಳ್ಳುತ್ತಿರುವುದರ ವಿರುದ್ಧ ಕಟ್ಟೆಚ್ಚರ ವಹಿಸಿರುವ ಜಿಲ್ಲಾಡಳಿತ, ಕಳೆದ ಮೂರು ವರ್ಷಗಳಲ್ಲಿ 152 ಬಾಲಕಾರ್ಮಿಕರನ್ನು ರಕ್ಷಣೆ ಮಾಡಿ, 15 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿ, ಕೋರ್ಟ್‌ನಲ್ಲಿ ಮಾಲೀಕರ ವಿರುದ್ಧ ಹಿರಿಯ ಕಾರ್ಮಿಕ ನಿರೀಕ್ಷಕರಿಂದ 123 ದಾವೆ ಹೂಡಲಾಗಿದೆ.

ಕರ್ನಾಟಕವನ್ನು ಬಾಲಕಾರ್ಮಿಕ ಮುಕ್ತ ರಾಜ್ಯವನ್ನಾಗಿಸಲು ರಾಜ್ಯ ಸರಕಾರ ದೇಶದಲ್ಲೇ ಪ್ರಥಮವಾಗಿ ಬಾಲಕಾರ್ಮಿಕ ನಿರ್ಮೂಲನಾ ಯೋಜನೆಯನ್ನು ಜಾರಿಗೆ ತಂದಿದ್ದು, ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು ಆರಂಭಿಸಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ ಕಾಯಿದೆ) 1986 ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ನಿರಂತರವಾಗಿ ತಪಾಸಣೆ ನಡೆಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು, 3500ಕ್ಕೂ ಹೆಚ್ಚು ಕಡೆ ದಾಳಿ ಮಾಡಿ ಬಾಲಕಾರ್ಮಿಕರ ಶೋಧ ನಡೆಸಿದ್ದಾರೆ.

ಅಕ್ರಮವಾಗಿ ಬಾಲಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಂಡು ದುಡಿಸಿಕೊಳ್ಳುವವರ ವಿರುದ್ಧ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ನಿರಂತರವಾಗಿ ತಪಾಸಣೆ ನಡೆಸಲಾಗುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ 150ಕ್ಕೂ ಹೆಚ್ಚು ಬಾಲಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ. ಅಲ್ಲದೆ ಅಪ್ರಾಪ್ತರನ್ನು ಕೆಲಸಕ್ಕೆ ಇರಿಸಿಕೊಂಡಿದ್ದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ, ದಂಡ ವಿಧಿಸಲಾಗಿದೆ.

152 ಬಾಲಕಾರ್ಮಿಕರ ರಕ್ಷಣೆ: 2022–23ರಲ್ಲಿ 9 ಬಾಲಕಾರ್ಮಿಕರು(14 ವರ್ಷದೊಳಗೆ), 58 ಕಿಶೋರ ಕಾರ್ಮಿಕರು(18 ವರ್ಷದೊಳಗೆ), 2023–24ರಲ್ಲಿ ಇಬ್ಬರು ಬಾಲಕಾರ್ಮಿಕರು, 30 ಕಿಶೋರ ಕಾರ್ಮಿಕರು, 2024–25ರಲ್ಲಿ ಮೂವರು ಬಾಲಕಾರ್ಮಿಕರು ಮತ್ತು 50 ಕಿಶೋರ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದ್ದು, ಒಟ್ಟು 152 ಬಾಲಕಾರ್ಮಿಕರ ರಕ್ಷಣೆ ಮಾಡಲಾಗಿದೆ.

4.78 ಲಕ್ಷ ರೂ.ದಂಡ ವಸೂಲಿ: ಬಾಲಕಾರ್ಮಿಕರನ್ನು ನಿಯೋಜಿಸಿಕೊಂಡಿದ್ದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದ 49 ಪ್ರಕರಣಗಳ ವಿಚಾರಣೆ ನಡೆಸಿರುವ ನ್ಯಾಯಾಲಯ, ಮೂರು ವರ್ಷದಲ್ಲಿ 4.78 ಲಕ್ಷ ರೂ.ದಂಡ ವಿಧಿಸಿದೆ.

ಜಾಗೃತಿ ಕಾರ್ಯಕ್ರಮ: ಬಾಲಕಾರ್ಮಿಕರ ಪದ್ಧತಿ ನಿರ್ಮೂಲನೆ ಬಗ್ಗೆ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಆಟೋರಿಕ್ಷಾದಲ್ಲಿ ಪ್ರಚಾರ, ಕರಪತ್ರಗಳ ಹಂಚಿಕೆ, ಅಂಗಡಿ ಮಳಿಗೆಗಳಿಗೆ ಸ್ಟಿಕ್ಕರ್ ಅಂಟಿಸುವುದು, ತರಬೇತಿ, ಬೀದಿ ನಾಟಕ, ಗೋಡೆ ಬರಹ, ಭಿತ್ತಿಪತ್ರ ಹಂಚುವುದು, ಶಾಲಾ–ಕಾಲೇಜುಗಳಲ್ಲಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳು ಹೆಚ್ಚು ವಾಸಿಸುವ ಪ್ರದೇಶಗಳಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ಮತ್ತು ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಕಾನೂನು ಅರಿವು ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ಬಾಲಕನ ಹೆಸರಲ್ಲಿ ಎಫ್‌ಡಿ: ಬಾಲಕರಿಂದ ಅಕ್ರಮವಾಗಿ ದುಡಿಸಿಕೊಳ್ಳುವ ಮಾಲೀಕರಿಂದ 20 ಸಾವಿರ ರೂ.ವಸೂಲಿ ಮಾಡಿ, ಸರ್ಕಾರದಿಂದ ನೀಡುವ 10 ಸಾವಿರ ರೂ. ಸೇರಿಸಿ ಒಟ್ಟು 30 ಸಾವಿರ ರೂ.ಗಳನ್ನು ಬಾಲಕಾರ್ಮಿಕನ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಎಫ್‌ಡಿ(ಫಿಕ್ಸೆಡ್ ಡೆಪಾಸಿಟ್) ಇಡಲಾಗುವುದು. ಈ ವೇಳೆ ಮಾಲೀಕ ಏನಾದರೂ ದಂಡ ಕಟ್ಟದಿದ್ದರೆ 2 ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಹಾಗೆಯೇ ಕಿಶೋರ ಕಾರ್ಮಿಕರಿಗೆ ಕಡಿಮೆ ವೇತನ ಕೊಟ್ಟು, ದುಡಿಸಿಕೊಳ್ಳುತ್ತಿದ್ದರೆ, ಅಂತಹ ಮಾಲೀಕರಿಗೆ ವೇತನದ 10 ಪಟ್ಟು ಹಣವನ್ನು ದಂಡದ ರೂಪದಲ್ಲಿ ವಸೂಲಿ ಮಾಡಿ, ಕಿಶೋರ ಕಾರ್ಮಿಕನಿಗೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಆಹಾರ ಪೂರೈಕೆ, ವಿದ್ಯಾಭ್ಯಾಸಕ್ಕೆ ಹಾಸ್ಟೆಲ್ ಸೌಲಭ್ಯ: ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಬಾಲಕಾರ್ಮಿಕರಿಗೆ ಕಾರ್ಮಿಕ ಇಲಾಖೆ(ಸಮಾಜ ಕಲ್ಯಾಣ ಇಲಾಖೆ ನೀಡುವ ಅನುದಾನ)ಯಿಂದಲೇ 5 ಸಾವಿರ ರೂ. ಮೌಲ್ಯದ ಆಹಾರ ಪದಾರ್ಥಗಳು ಮತ್ತು ವಿದ್ಯಾಭ್ಯಾಸದ ಕಿಟ್ ನೀಡಲಾಗುವುದು. ಬಾಲಕಾರ್ಮಿಕನಿಗೆ ಪೋಷಕರು ಇಲ್ಲದಿದ್ದರೆ ಅಥವಾ ಇದ್ದು ಬಡವರಾಗಿದ್ದು ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದ್ದರೆ, ಅಂತಹ ಬಾಲಕಾರ್ಮಿಕರನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳು ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ನೇರ ಮತ್ತು ಉಚಿತ ದಾಖಲಾತಿ ಮಾಡಿಸಲಾಗುವುದು ಎಂದು ತಿಳಿಸಿದರು.

1098ಗೆ ಕರೆಮಾಡಿ...!

ಮೈಸೂರು ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಇಲಾಖೆಯಿಂದ ನಿರಂತರವಾಗಿ ತಪಾಸಣಾ ಕಾರ್ಯ ನಡೆಸಲಾಗುತ್ತಿದ್ದು, ಕಳೆದ ಮೂರು ವರ್ಷದಲ್ಲಿ 152 ಬಾಲಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ. ಮಕ್ಕಳನ್ನು ಕೆಲಸಕ್ಕೆ ಇರಿಸಿಕೊಳ್ಳದಂತೆ ವ್ಯಾಪಾರಸ್ಥರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಸಾರ್ವಜನಿಕರಿಗೆ ಎಲ್ಲಿಯಾದರೂ ಬಾಲಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಿರುವುದು ಕಂಡ ಬಂದಲ್ಲಿ ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ.

- ಚೇತನ್ ಕುಮಾರ್, ಜಿಲ್ಲಾ ಕಾರ್ಮಿಕ ಅಧಿಕಾರಿ.



ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡಕ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಕಿಂಗ್‌ಡಮ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜದ್ರೋಹಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್ (INOX LIVE THE MOVIE) ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್ ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆ, ನಾಳಿದ್ದು ಮೈಸೂರಲ್ಲಿ ದೇಸಿ ಅಕ್ಕಿ ಮೇಳ

ಮೈಸೂರು, ಆ. 7– ಹಳೆ ಮೈಸೂರು ಭತ್ತದ ವೈವಿಧ್ಯಕ್ಕೆ ಹೆಸರುವಾಸಿಯಾಗಿತ್ತು. ರಾಜಮುಡಿ, ರತ್ನಚೂಡಿ, ರಾಜಭೋಗ, ಪುಟ್ಟ ಭತ್ತ, ಆನೆ ಕೊಂಬಿನ ಭತ್ತ, ಬಂಗಾರ ಕಡ್ಡಿ, ಮುಂಡುಗ, ಹಾಲುಬ್ಬಲು ಮೊದಲಾದ ತಳಿಗಳನ್ನು ಇಲ್ಲಿನ ರೈತರು ಬೆಳೆಯುತ್ತಿದ್ದರು. ಅನ್ನಕ್ಕೊಂದು, ಅವಲಕ್ಕಿಗೊಂದು, ಕಜ್ಜಾಯಕ್ಕೆ ಇನ್ನೊಂದು, ಬಿರಿಯಾನಿ ಮಾಡಲು ಮಗದೊಂದು ಅಕ್ಕಿ ಬಳಕೆಯಾಗುತ್ತಿತ್ತು. ಹತ್ತಾರು ಕಾಯಿಲೆಗಳಿಗೆ ದೇಸಿ ಅಕ್ಕಿಯ ಅನ್ನವೇ ಔಷಧಿಯಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಕೈಯಿಂದ ಜಾರುವಷ್ಟು ನುಣುಪಾದ, ಪಾಲಿಷ್ ಮಾಡಿದ ಬಿಳಿ ಬಣ್ಣದ ಅಕ್ಕಿಯೇ ಶ್ರೇಷ್ಠ ಎಂದು ನಂಬಿದ ಗ್ರಾಹಕರು, ತಮಗೆ ಅರಿವಿಲ್ಲದೆಯೇ ರೋಗಗಳ ದಾಸರಾಗುತ್ತಿದ್ದಾರೆ. ದೇಸಿಯ ಅಕ್ಕಿಗಳ ವೈವಿಧ್ಯದ ಬಗ್ಗೆ ಗ್ರಾಹಕರು ಮತ್ತು ರೈತರಿಗೆ ಅರಿವು ಮೂಡಿಸುವ ಉದ್ದೇಶದಿಂದ ಸಹಜ ಸಮೃದ್ಧ ಮತ್ತು ಭತ್ತ ಉಳಿಸಿ ಅಭಿಯಾನದ ಅಂಗವಾಗಿ ಆ. 9 ಮತ್ತು 10 ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ದೇಸಿ ಅಕ್ಕಿ ಮೇಳವನ್ನು ಏರ್ಪಡಿಸಿದ್ದಾರೆ.

ದೇಸಿ ಅಕ್ಕಿ ಮೇಳದಲ್ಲಿ ಕೆಂಪು, ಕಪ್ಪು, ಕೆನೆ ಬಣ್ಣದ, ಪರಿಮಳದ ಬಗೆ ಬಗೆಯ ಅಕ್ಕಿಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಬರುತ್ತಿವೆ. ಔಷಧೀಯ ಭತ್ತ ಮತ್ತು ಅಕ್ಕಿಗಳ ಮಾರಾಟ ಈ ವರ್ಷದ ವಿಶೇಷ. ಉತ್ತರಪ್ರದೇಶದ ಕಲಾ ನಮಕ್, ಒರಿಸ್ಸಾದ ಕಾಲಾಜೀರ, ಅಸ್ಸಾಂನ ಕೋಮಲ್ ಚಾವಲ್, ಕೇರಳದ ನವರ, ಮುಳ್ಳನ್ ಕಯಮ, ತಮಿಳುನಾಡಿನ ಮಾಪಿಳ್ಳೆ ಸಾಂಬ, ಮಹಾರಾಷ್ಟ್ರದ ಅಂಬೆ ಮೊಹರ್, ಆಂಧ್ರದ ಚಿಟ್ಟಿ ಮುತ್ಯಾಲು, ಪಶ್ಚಿಮಬಂಗಾಳದ ಗೋವಿಂದ ಭೋಗ್ ಮತ್ತು ಕಾಲಾಬಾತ್ ಅಕ್ಕಿ ಮೊದಲಾದ ಹೆಸರಾಂತ ತಳಿಯ ಭತ್ತ ಮತ್ತು ಅಕ್ಕಿ ಮಾರಾಟಕ್ಕೆ ಬರಲಿವೆ.

ಕರ್ನಾಟಕದ ಕರಿಗಜಿವಿಲಿ, ರಾಜಮುಡಿ, ದೊಡ್ಡಗ, ದೊಡ್ಡ ಬೈರ ನೆಲ್ಲು, ಸಿದ್ಧ ಸಣ್ಣ, ಸೇಲಂ ಸಣ್ಣ, ರಾಜಭೋಗ, ಅಂದನೂರು ಸಣ್ಣ,ಉದುರು ಸಾಲಿ, ಗಿಣಿ ಸಾಲಿ ಮೊದಲಾದ ಅಕ್ಕಿ ಲಭ್ಯವಿದೆ. 200ಕ್ಕೂ ಹೆಚ್ಚಿನ ದೇಸಿ ಭತ್ತದ ತಳಿಗಳ ಪ್ರದರ್ಶನವಿರುತ್ತದೆ. ಮುಂಗಾರಿಗೆ ಬಿತ್ತಲು ಗುಣಮಟ್ಟದ ಬಿತ್ತನೆ ಭತ್ತ ಸಿಗಲಿದೆ. ಸಾವಯವ ಪದಾರ್ಥಗಳು,ಹಣ್ಣು ಹಂಪಲು, ನಾಟಿ ಬೀಜ ಮತ್ತು ಮೌಲ್ಯವರ್ಧಿತ ಪದಾರ್ಥಗಳು ಸಿಗಲಿವೆ.

ದೇಸಿ ಅಕ್ಕಿ ಅಡುಗೆ ಸ್ಪರ್ಧೆ: ಅನ್ನ ಸಂಸ್ಕೃತಿಯ ಮಹತ್ವವನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸುವ ದೃಷ್ಟಿಯಿಂದ 'ಅಕ್ಕಿ ಅಡುಗೆ ಸ್ಪರ್ಧೆ' ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು, ದೇಸಿ ಅಕ್ಕಿಯಿಂದ ಮಾಡಿದ ಯಾವುದೇ ಅಡುಗೆಯನ್ನು ಮನೆಯಲ್ಲಿ ಮಾಡಿ ಆ.10ರ ಮಧ್ಯಾಹ್ನ 12.30ಕ್ಕೆ ಮೇಳಕ್ಕೆ ತರಬೇಕು. ಆಯ್ದ ಮೂರು ಉತ್ತಮ ಅಡುಗೆಗಳಿಗೆ ನಗದು ಬಹುಮಾನ ನೀಡಲಾಗುವುದು.

5ರಿಂದ 10 ವರ್ಷದ ಮತ್ತು 10ರಿಂದ 15 ವರ್ಷದ ಒಳಗಿನ ಮಕ್ಕಳಿಗಾಗಿ 'ನಾ ಕಂಡ ಭತ್ತದ ಲೋಕ' ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ. ಮನೆಯಲ್ಲೇ ಚಿತ್ರ ಬಿಡಿಸಿ, ಆ. 10, ಭಾನುವಾರ ಬೆಳಗ್ಗೆ 11.00ಕ್ಕೆ ಮೇಳಕ್ಕೆ ತರಬೇಕು. ಆಯ್ಕೆಯಾದ ಆರು ಚಿತ್ರಗಳಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮಂಜು –70900 09944 ಸಂಪರ್ಕಿಸಿ.

ನಾಳೆ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಯಜುರುಪಾಕರ್ಮ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆ.9ರಂದು ಬೆಳಗ್ಗೆ 9ಗಂಟೆಗೆ ಸಾಮೂಹಿಕ ಯಜುರುಪಾಕರ್ಮವನ್ನು ಏರ್ಪಡಿಸಲಾಗಿದ್ದು, ಮಾಹಿತಿಗಾಗಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್ ಅವರನ್ನು ಮೊ.9900400000 ಮೂಲಕ ಸಂಪರ್ಕಿಸಬಹುದಾಗಿದೆ.

ನಗರಸಭಾ ಕಾರ್ಯಾಲಯ, ನಂಜನಗೂಡು

ನಂಜನಗೂಡು–571301, ಮೈಸೂರು ಜಿಲ್ಲೆ, ದೂರವಾಣಿ: 08221–226236

ಇಮೇಲ್: itstaff_ulb_nanjangud@yahoo.co.in

ವೆಬ್‌ಸೈಟ್: www.nanjanaguducity.mrc.gov.in

ಸಂ:ಸನಕಾ/ತಾಂತ್ರಿಕಶಾಖೆ/ಸ.ಇಂ/ಟೆಂ–05/2025–26 ದಿನಾಂಕ: 06.08.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನ 15ನೇ ಹಣಕಾಸು ಹಾಗೂ ಎಸ್.ಎಫ್.ಸಿ ಯೋಜನೆಯ ಅನುದಾನದಡಿ ಅನುಮೋದನೆಗೊಂಡಿರುವ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ KW-1ರ ನಿಯಮಗಳ ಅನ್ವಯ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಇಂಡೆಂಟ್ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮೀಸಲಾತಿ
1	DMA/2025-26/OW/WORK_INDENT43388/CALL/2	20.00	CAT-2A
2	DMA/2025-26/OW/WORK_INDENT47043	9.00	ಇತರೆ

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು **https://kppp.karnataka.gov.in** ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ಟೆಂಡರ್ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡನ್ನು ಸಲ್ಲಿಸುವ ಕಡೆಯ **ದಿನಾಂಕ: 22–08–2025** ಹಾಗೂ ತಾಂತ್ರಿಕ ಬಿಡ್ ಹಾಗೂ ಟೆಂಡರ್ ತೆರೆಯುವ **ದಿನಾಂಕ: 25–08–2025** ಕಾಮಗಾರಿ ನಿಭಂದನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ:– ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಅಧ್ಯಕ್ಷರು ನಗರಸಭೆ, ನಂಜನಗೂಡು | ಸಹಿ/– ಉಪಾಧ್ಯಕ್ಷರು ನಗರಸಭೆ, ನಂಜನಗೂಡು | ಸಹಿ/– ಪೌರಾಯುಕ್ತರು ನಗರಸಭೆ ನಂಜನಗೂಡು

DIPR/MYS/KAVITA/777/2024-25

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.

web:http://www.hassancity.mrc.gov.in Email: commn_hassan@yahoo.com ದೂರವಾಣಿ: 08172– 268276 ಸಹಾಯವಾಣಿ: 08172–233702 ಫ್ಯಾಕ್ಸ್: 08172–234792

ನಂ:ಪೌಅ/ಹಾಮನಪಾ/ತಾಂತ್ರಿಕ ಶಾಖೆ/02/2025–26

ದಿನಾಂಕ:06/08/2025

ಟೆಂಡರ್ ಪ್ರಕಟಣೆ :ಇ ಪ್ರೊಕ್ಯೂರ್‌ಮೆಂಟ್ ಮೂಲಕ :

2025–26ನೇ ಸಾಲಿನ ವಿವಿಧ ಅನುದಾನದಡಿಯಲ್ಲಿ, ವಿವಿಧ ಕಾಮಗಾರಿ/ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್(http://www.kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಸದರಿ ಟೆಂಡರ್‌ನಲ್ಲಿ ಕನಿಷ್ಠ ಟೆಂಡರ್ ಮೊತ್ತರೂ.8.99 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ.30.00 ಲಕ್ಷಗಳ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:21/08/2025ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಕ್ಕಾಗಿ ಹಾಸನ ಮಹಾನಗರ ಪಾಲಿಕೆಯ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಸನ ಮಹಾನಗರ ಪಾಲಿಕೆ, ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172–268276. ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/–ಆಯುಕ್ತರು, ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/428/ಕೆಎಸ್‌ಎಂಸಿಎ/2025–26